ಚಿಂತನ ಬಯಲು

Volume 3, Issue 4, April - June 2015

ಸಂಪುಟ 3 ಸಂಚಿಕೆ 4
ಎಪ್ರಿಲ್-ಜೂನ್ 2015

ತ್ರೈಮಾಸಿಕ
ISSN 2278-2192

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 3, Issue 4, April-June 2015

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Price : Rs. 50

Pages : 64

ಮುಖಪುಟ : ಚಿತ್ರದುರ್ಗದ ಕೋಟೆಯಲ್ಲಿ ಅರಸೊತ್ತಿಗೆಯ ತೂಗುಯ್ಯಾಲೆ ಕಂಬ
Cover Photo by : **Sathish Ira**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2443002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. ಆಧುನಿಕತೆ ತಂದಿರುವ ಹಿಂದುಳಿದಿರುವಿಕೆ ಮತ್ತು ಅದರೊಂದಿಗಿನ ರಾಜಕೀಯ

❖ ಗಿರೀಶ ವಿ. ವಾಫ / 5

ಅಭಿನವ ಗೀತಾರ್ಥ ಸಂಗ್ರಹ

❖ ಚೈತನ್ಯ / 12

ಸಾಂಸ್ಕೃತಿಕ ರಾಜಕಾರಣ ಮತ್ತು ಯೋಗ ಇತ್ಯಾದಿ

❖ ಅಜಕ್ಕಳ ಗಿರೀಶ್ ಭಟ್ / 25

ನವಶೋಧಿತ ನುಶಿಕೋಟೆ ತಾಮ್ರಪಟ ಶಾಸನ

❖ ಡಾ. ಕೆ.ಎಸ್. ಪಾಟೀಲ / 34

ಭಾಷಾಂತರದ ಸಾಂಸ್ಕೃತಿಕ ರಾಜಕಾರಣ

❖ ಡಾ. ಎ. ಮೋಹನ ಕುಂಟಾರ್ / 37

ವಿದೇಶದಲ್ಲಿ ಮೊಳಗಿದ ಸ್ವಾತಂತ್ರ್ಯ ಕಹಳೆ: ಗದರ್ ಚಳುವಳಿ

❖ ಜ್ಯೋತಿ ರೈ / 46

ದ್ರಾವಿಡಭಾಷಾ ಜ್ಞಾತಿಪದಕೋಶ ಕನ್ನಡಿಗರ ಕೈಯಲ್ಲೊಂದು ವಿಶಿಷ್ಟ ಪದಾರ್ಥ ಕೋಶ

❖ ಡಾ. ಬಿ. ವಿ. ಮಹೀದಾಸ / 52

ಉತ್ಕೃಷ್ಟ ತೌಲನಿಕ ಅಧ್ಯಯನ : ಹಂಪನಾ ಅವರ ಪ್ರಾಕೃತ ಕಥಾ ಸಾಹಿತ್ಯ

❖ ಡಾ. ಜಿ.ಎನ್. ಉಪಾಧ್ಯ / 55

ಎಚ್. ಆನಂದರಾಮ ಶಾಸ್ತ್ರಿಗಳ 'ನಮ್ಮ ನ್ಯಾಯಾಂಗದ ಸಬಲೀಕರಣ: ಒಂದು ಚಿಂತನ' – ಪ್ರತಿಕ್ರಿಯೆ

❖ ಬಾಲಸುಬ್ರಹ್ಮಣ್ಯ ಕಂಜರ್ಪಣೆ / 60

ಸಂಪಾದಕೀಯ

ಸಾಹಿತ್ಯ, ಸಮಾಜ, ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸಿದ್ಧ ಮಾದರಿಯ ಕೆಲವು ಹೇಳಿಕೆಗಳು, ಅಭಿಪ್ರಾಯಗಳು, ಧೋರಣೆಗಳು ಚಾಲ್ತಿಯಲ್ಲಿರುವುದನ್ನು ಕಾಣುತ್ತೇವೆ. ಮತಬ್ಯಾಂಕನ್ನು ಆಧರಿಸಿದ ರಾಜಕಾರಣ, ಮಾರುಕಟ್ಟೆಯನ್ನಾಧರಿಸಿದ ಮಾಧ್ಯಮಗಳು ಅಂಥ ಸಿದ್ಧ ಮಾದರಿಗಳಿಂದಾಚೆಗೆ ಹೋಗುವುದಿಲ್ಲ. ಹಾಗಿರುವಾಗ 'ಚಿಂತನ ಬಯಲು' ವಿನಂಥ ಪತ್ರಿಕೆಗಳ ಜವಾಬ್ದಾರಿ ಹೆಚ್ಚಾಗಿರುತ್ತದೆ. ಈ ನಿಟ್ಟಿನಲ್ಲಿ ಹಿಂದುಳಿದಿರುವಿಕೆ ಬಗ್ಗೆ ಒಂದು ಮುಖ್ಯ ಲೇಖನ ಈ ಸಂಚಿಕೆಯಲ್ಲಿದೆ. ಸಾ.ಕೃ. ರಾಮಚಂದ್ರ ರಾಯರಂಥ ಹಿರಿಯರು, ಡಿ.ಆರ್. ನಾಗರಾಜರಂಥ ವಿಮರ್ಶಕರು ಅಭಿನವಗುಪ್ತನ ಬಗ್ಗೆ ಕನ್ನಡದಲ್ಲಿ ಬರೆದದ್ದುಂಟು. ಯುವ ಪೀಳಿಗೆಯ ಚೈತನ್ಯ ಅವರು ಅಭಿನವಗುಪ್ತನ ಚಿಂತನೆಯ ಬಗ್ಗೆ ಬರೆದಿರುವ ಲೇಖನ ಪರಿಶೀಲನಾರ್ಹವಾಗಿದೆ. ಅದೇ ರೀತಿ ಸಾಂಸ್ಕೃತಿಕ ರಾಜಕಾರಣದ ವಿಭಿನ್ನ ಮಗ್ಗುಲುಗಳ ಬಗ್ಗೆ ಹೇಳುವ ಲೇಖನಗಳಿವೆ, ಪುಸ್ತಕ ವಿಮರ್ಶೆಗಳಿವೆ. ಇಲ್ಲಿರುವ ಲೇಖನಗಳಿಗೆ ಓದುಗರು ಪ್ರತಿಕ್ರಿಯಿಸಬೇಕಾಗಿ ಕೋರಿಕೆ.

– ಸಂಪಾದಕ

ಆಧುನಿಕತೆ ತಂದಿರುವ ಹಿಂದುಳಿದಿರುವಿಕೆ ಮತ್ತು ಅದರೊಂದಿಗಿನ ರಾಜಕೀಯ

ಗಿರೀಶ ವಿ. ವಾಘ್
923, 7ನೇ ಕ್ರಾಸ್, ಕೆಂಗೇರಿ ಉಪನಗರ, ಬೆಂಗಳೂರು–560 060

ಈ ಲೇಖನ, ಇಂದಿನ ಕರ್ನಾಟಕ ರಾಜ್ಯ ಒಳಗೊಂಡಿರುವ ಪ್ರದೇಶಗಳಲ್ಲಿ ಕಳೆದ ತೊಂಬತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ 'ಹಿಂದುಳಿದವರು' ಎಂದು ಸರ್ಕಾರಗಳಿಂದ ಕಾಲಕಾಲಕ್ಕೆ ಗುರುತಿಸಲಾಗಿರುವ ಜಾತಿ ಸಮುದಾಯಗಳಿಗೆ ಶಿಕ್ಷಣ, ಸರ್ಕಾರಿ ನೌಕರಿಗಳಂತಹ ಕ್ಷೇತ್ರಗಳಲ್ಲಿ ಕೊಡಮಾಡುತ್ತಾ ಬಂದಿರುವ ಮೀಸಲಾತಿ ಮತ್ತು ಇನ್ನಿತರ ಸೌಲಭ್ಯಗಳನ್ನು ಪ್ರಶ್ನಿಸುವ ಅಥವಾ ವಿರೋಧಿಸುವ ಉದ್ದೇಶವನ್ನು ಹೊಂದಿಲ್ಲವೆಂದು ಮೊದಲಿಗೇ ಸ್ಪಷ್ಟಪಡಿಸುತ್ತೇನೆ. ಹಾಗೆಯೇ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ನೀಡಲಾಗಿರುವ ಮೀಸಲಾತಿಯ ಅವಶ್ಯಕತೆಯನ್ನೂ ಇಲ್ಲಿ ಒಪ್ಪಿಕೊಳ್ಳಲಾಗಿದೆ ಮತ್ತು ಅದು ಇಲ್ಲಿನ ಚರ್ಚೆಯಲ್ಲಿ (ಕೆಲವು ಸಂದರ್ಭಗಳಲ್ಲಿ ಹೋಲಿಕೆಗೆ ಮಾತ್ರವಲ್ಲದೆ) ಸೇರಿಲ್ಲ.

ಹಿಂದುಳಿದವರಿಗೆ ನೀಡಲಾಗಿರುವ ಮೀಸಲಾತಿಯನ್ನು 'ಆಧುನಿಕತೆಯ ಡಿಸ್ಕೌಂಟ್ ಸೇಲ್' ಎಂದು ಹೇಳಬಹುದು. ಒಂದು ಆಧುನಿಕಪೂರ್ವ ಕೃಷಿಪ್ರಧಾನ, ಗ್ರಾಮಪ್ರಧಾನ ಸಮಾಜದಲ್ಲಿ ಬದುಕುತ್ತಿರುವ ಜನರು ಆಧುನಿಕ ರೀತಿಯ ಆಡಳಿತ ಮತ್ತು ಉತ್ಪಾದನಾ ವ್ಯವಸ್ಥೆಗೆ ಬದಲಾಗುವ ಹಂತದಲ್ಲಿ, ಅಲ್ಲಿನ ಕೆಲವು ಜನಸಮುದಾಯಗಳು ಹಿಂದಿನ ಸಮಾಜದಲ್ಲಿನ ಸ್ಥಾನಮಾನಗಳ ಬಲದಿಂದ ಅಥವಾ ಸಾಂದರ್ಭಿಕ ಅವಕಾಶಗಳಿಂದಾಗಿ ಅಲ್ಲಿನ ಇನ್ನಿತರ ಸಮುದಾಯಗಳಿಗಿಂತ ಹೆಚ್ಚು ಬೇಗನೆ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಬಹುದು. ತನ್ಮೂಲಕ ಹೊಸ ಸಮಾಜದಲ್ಲಿ ನಿರ್ಣಾಯಕ ಸ್ಥಾನಗಳಲ್ಲಿ ಹೆಚ್ಚಿನವನ್ನು ಆಕ್ರಮಿಸಿಕೊಂಡು ಇನ್ನಿತರರ ಏಳ್ಗೆಯನ್ನು ತಡೆಯಬಹುದು. ಅಂತಹ ಸಂದರ್ಭಗಳಲ್ಲಿ ಹೊಸ ವ್ಯವಸ್ಥೆ ಅಪೇಕ್ಷಿಸುವ ನಡಾವಳಿ ಗಳನ್ನು ಮತ್ತು ಕೌಶಲಗಳನ್ನು ತಮ್ಮದನ್ನಾಗಿಸಿಕೊಂಡು ಏಳ್ಗೆ ಹೊಂದಲು ಈ ಇನ್ನಿತರರಿಗೆ ವಿಶೇಷ ಸೌಲಭ್ಯ ಮತ್ತು ರಿಯಾಯಿತಿಗಳನ್ನು ಕೊಡುವುದು ಅವಶ್ಯಕವಾಗಬಹುದು. ಅದರಲ್ಲೂ ಸರ್ವಸಮಾನತೆ ಮತ್ತು ಸಮಾನಾವಕಾಶಗಳ ಮೌಲ್ಯಗಳನ್ನು ಎತ್ತಿಹಿಡಿಯುವ ಜನತಂತ್ರ ವ್ಯವಸ್ಥೆಯಲ್ಲಿ ಇದು ತೀರ ಅವಶ್ಯಕ. ಇದು ನಮ್ಮಲ್ಲಿ ಸುಮಾರು ಒಂಬತ್ತು ದಶಕಗಳಿಂದ ಜಾರಿಯಲ್ಲಿರುವ 'ಹಿಂದುಳಿದವರಿಗೆ ಮೀಸಲಾತಿ' ನೀತಿಯ ಹಿಂದಿರುವ ಉದ್ದೇಶವಾಗಿದೆ.

ಈಚೆಗೆ ನಮ್ಮ ರಾಜ್ಯ ಸರ್ಕಾರ ಹಿಂದುಳಿದ ಜಾತಿಗಳ ಸ್ಥಿತಿಗತಿಗಳನ್ನು ಗುರುತಿಸಲು 'ಜಾತಿಗಣತಿ' ಎಂದು ಕರೆಯಲಾಗುತ್ತಿರುವ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿತು. ಇದಕ್ಕೆ ಕೆಲವರಿಂದ ವಿರೋಧ ಬಂತು. ಈ ವಿರೋಧಕ್ಕೆ, ಹಿಂದುಳಿದವರ ಏಳ್ಗೆಯ ಉದ್ದೇಶವನ್ನು ಹೊಂದಿರುವ ಇಂತಹ ಪ್ರಕ್ರಿಯೆಗಳು, ರಾಜಕೀಯ ಪಕ್ಷಗಳ ಓಟ್ ಬ್ಯಾಂಕ್ ರಾಜಕಾರಣ ದಿಂದಾಗಿ, ಜನರಲ್ಲಿ ವಿಶ್ವಾಸವನ್ನು ಕಳೆದುಕೊಂಡಿರುವುದೇ ಕಾರಣವಾಗಿರಬಹುದೇ ಎಂಬ ಪ್ರಶ್ನೆಯನ್ನು ಈ ಲೇಖನದ ಮೊದಲ ಭಾಗ ಪರಿಶೀಲಿಸುತ್ತದೆ. ಲೇಖನದ ಎರಡನೆ ಭಾಗ

ಹಿಂದುಳಿದವರ ಹಿಂದುಳಿದಿರುವಿಕೆಗೆ ಜಾತಿಯೇತರ ಆಯಾಮಗಳೂ ಇರುವುದನ್ನು ಓದುಗರ ಗಮನಕ್ಕೆ ತರಲು ಪ್ರಯತ್ನಿಸುತ್ತದೆ. ಲೇಖನದ ಮೂರನೆ ಭಾಗ, ಹಿಂದುಳಿದವರ ಏಳ್ಗೆಯನ್ನು ಬಯಸುತ್ತಿರುವ ನಮ್ಮ ಜನಪರ ಪ್ರಗತಿಪರ ಹೋರಾಟಗಾರರ ಧೋರಣೆಯಲ್ಲಿರುವ ಒಂದು ದ್ವಂದ್ವದ ಕಡೆಗೆ ಓದುಗರ ಗಮನವನ್ನು ಸೆಳೆಯಲು ಅಪೇಕ್ಷಿಸುತ್ತದೆ. ನಮ್ಮ ಪ್ರಗತಿಪರರು ಆಧುನಿಕ ಶಿಕ್ಷಣ ವ್ಯವಸ್ಥೆಯ ಬಗ್ಗೆ ಸಕಾರಾತ್ಮಕ ಧೋರಣೆಯನ್ನು ಹೊಂದಿರುವುದರ ಜೊತೆಗೆ ಈ ಶಿಕ್ಷಣದ ಲಾಭ ಪಡೆದ ಯುವಜನರು ಕೆಲಸ ಮಾಡಲು ಅಪೇಕ್ಷಿಸುವ ಆಧುನಿಕ ವ್ಯಾಪಾರೋದ್ಯಮ ಕ್ಷೇತ್ರದ ಬಗ್ಗೆ, ಅದು ಬಂಡವಾಳಶಾಹಿಯ ಸೃಷ್ಟಿ ಎಂಬ ಕಾರಣಕ್ಕೆ, ತೀವ್ರ ನಕಾರಾತ್ಮಕ ಧೋರಣೆಯನ್ನು ಹೊಂದಿರುವುದೇ ಆ ದ್ವಂದ್ವ.

ಮೀಸಲಾತಿ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಕುಗ್ಗಿಸಿರುವ ಓಟ್ ಬ್ಯಾಂಕ್ ರಾಜಕಾರಣ

ನಮ್ಮ ರಾಜ್ಯ ಸರ್ಕಾರ ಇದೇ ಎಪ್ರಿಲ್–ಮೇ ತಿಂಗಳುಗಳಲ್ಲಿ ನಡೆಸಿದ 'ಜಾತಿ ಗಣತಿ'ಗೆ ಕೆಲವರಿಂದ ವಿರೋಧ ಬಂತು. ಇದಕ್ಕೆ ನಮ್ಮ ಅಧಿಕಾರಸ್ಥ ರಾಜಕಾರಣಿಗಳು ಜಾತಿ ಆಧಾರಿತ ಮೀಸಲಾತಿಯನ್ನು ಚುನಾವಣೆಗಳಲ್ಲಿ ಓಟುಗಳಿಸುವ ರಾಜಕೀಯಕ್ಕೆ ಬಳಸಿಕೊಂಡು, ಈ ವಿಷಯದಲ್ಲಿ ತಮ್ಮ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವುದು ಒಂದು ಮುಖ್ಯ ಕಾರಣವೆಂದು ಕಾಣುತ್ತದೆ. ಮೂರು ದಶಕಗಳ ಹಿಂದೆ ಅಂದಿನ ಸರ್ಕಾರದಿಂದಲೇ 1983ರಲ್ಲಿ ನೇಮಿತವಾದ ಎರಡನೆ ಹಿಂದುಳಿದ ವರ್ಗಗಳ ಆಯೋಗ–ವೆಂಕಟಸ್ವಾಮಿ ಆಯೋಗ–1987ರಲ್ಲಿ ನೀಡಿದ ವರದಿಯನ್ನು ಅದೇ ಸರ್ಕಾರ ನಿರಾಕರಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಆಯೋಗವು ತನ್ನ ಹಿಂದಿನ ಆಯೋಗವಾದ ಹಾವನೂರು ಆಯೋಗಕ್ಕಿಂತ ಹೆಚ್ಚು ವ್ಯಾಪಕವಾದ ಕ್ಷೇತ್ರಕಾರ್ಯ ನಡೆಸಿ ಕಲೆ ಹಾಕಿದ ಮಾಹಿತಿಗಳನ್ನು ಆಧರಿಸಿ ತನ್ನ ವರದಿ ತಯಾರಿಸಿತ್ತು. ಅದರ ಒಂದು ಮುಖ್ಯ ನಿರ್ಣಯವಾದ, ರಾಜ್ಯದ ದೊಡ್ಡ ಹಾಗೂ ಪ್ರಬಲ ಜಾತಿಯಾದ ಒಕ್ಕಲಿಗರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸರ್ಕಾರಿ ನೌಕರಿಗಳಲ್ಲಿನ ಪ್ರಾತಿನಿಧ್ಯದ ದೃಷ್ಟಿಯಿಂದ ಮುಂದುವರಿದ ವರ್ಗಕ್ಕೆ ಸೇರಲು ಅರ್ಹವಾಗಿದ್ದು ಅವರನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ಕೈಬಿಡಬೇಕೆಂಬ ನಿರ್ಣಯವು ವಿವಾದಗ್ರಸ್ತವಾಯಿತು. ಈ ನಿರ್ಣಯದ ವಿರುದ್ಧ ಆ ಸಮುದಾಯದ ರಾಜಕಾರಣಿಗಳು ಜನರನ್ನು ಸೇರಿಸಿ ಬೀದಿಗಿಳಿದು ದೊಡ್ಡ ಆಂದೋಲನ ಮಾಡಿದ್ದರಿಂದಲೇ ಅಂದಿನ ಸರ್ಕಾರ ಆ ಆಯೋಗದ ವರದಿಯನ್ನು ನಿರಾಕರಿಸಿತು. ಅಂದರೆ 'ಜಾತಿ ಗಣತಿ'ಯಂತಹ ಸಮೀಕ್ಷೆಗಳ ಫಲಿತಗಳು ಆಯಾ ಜಾತಿಯವರ ಇಚ್ಛೆಯಂತೆ ಇದ್ದರೆ ಮಾತ್ರ ಅವುಗಳಿಗೆ ಮಾನ್ಯತೆ, ಇಲ್ಲದಿದ್ದರೆ ಇಲ್ಲ ಎಂಬುದು ಇದರಿಂದ ಸಾಬೀತಾದ ಸತ್ಯ.

ವೆಂಕಟಸ್ವಾಮಿ ಆಯೋಗದ ವರದಿಯನ್ನು ನಿರಾಕರಿಸಿದ ನಂತರ 1990ರಲ್ಲಿ ನೇಮಕವಾದ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ಆಧರಿಸಿ ಸರ್ಕಾರವು 1994ರ ಸುಮಾರಿನಲ್ಲಿ ಹೊರಡಿಸಿದ ಮೀಸಲಾತಿ ನೀತಿಯ ಇದುವರೆಗೆ ಜಾರಿಯಲ್ಲಿದೆ. ಚಿನ್ನಪ್ಪ ರೆಡ್ಡಿ ಆಯೋಗ ತನ್ನ ವರದಿಯಲ್ಲಿ ಸರ್ಕಾರವು ಹಿಂದುಳಿದ ಜಾತಿಗಳ ಪಟ್ಟಿಯನ್ನು ಪ್ರತಿ ನಾಲ್ಕು ವರ್ಷಗಳಿಗೆ ಒಮ್ಮೆ ಪರಿಷ್ಕರಿಸಬೇಕು ಎಂದು ಶಿಫಾರಸ್ಸು ಮಾಡಿತ್ತು. ಇದಕ್ಕಾಗಿ ಅದು ಹಲವು ವಿಷಯಗಳ ತಜ್ಞರನ್ನೊಳಗೊಂಡ ಸಮಿತಿಯನ್ನು ನೇಮಿಸಬೇಕು ಮತ್ತು ಅದಕ್ಕೆ ಮಾಹಿತಿಯನ್ನು ಒದಗಿಸಿ ವಿಶ್ಲೇಷಿಸಲು ಒಂದು ಸಂಶೋಧಕರ ತಂಡವನ್ನೂ ಒದಗಿಸಬೇಕೆಂದು ಸರಕಾರಕ್ಕೆ ಹೇಳಿತ್ತು. ಹಿಂದಿನ ಮೂರು ವರ್ಷಗಳಲ್ಲಿ ಹಿಂದುಳಿದವರ ಪಟ್ಟಿಯಲ್ಲಿರುವ ಯಾವ ಯಾವ ಜಾತಿಗಳು

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸಾಗಿರುವ ಪ್ರಮಾಣ, ಅವರಿಗೆ ಸ್ನಾತಕೋತ್ತರ ಮತ್ತು ವೃತ್ತಿ ಶಿಕ್ಷಣದಲ್ಲಿ ಸಿಕ್ಕಿರುವ ಅವಕಾಶಗಳ ಪ್ರಮಾಣ ಹಾಗೂ ಸರ್ಕಾರಿ ನೌಕರಿಯ 'ಎ' ಮತ್ತು 'ಬಿ' ವರ್ಗಗಳಲ್ಲಿ ಅವರು ಪಡೆದಿರುವ ನೌಕರಿಗಳ ಪ್ರಮಾಣಗಳು ಆಯಾ ವಿಷಯಗಳಿಗೆ ನಿರ್ಧರಿತವಾದ ಪ್ರಮಾಣಗಳನ್ನು ಮೀರಿದರೆ, ಅಂತಹ ಜಾತಿಗಳನ್ನು ಹಿಂದುಳಿದವರ ಪಟ್ಟಿಯಿಂದ ಕೈ ಬಿಡಬೇಕೆಂದು ಈ ಸಮಿತಿ ಹೇಳಿತ್ತು. ಕಳೆದ ಇಪ್ಪತ್ತು ವರ್ಷಗಳಿಂದ ನಮ್ಮಲ್ಲಿ, ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ, ಖಾಯಂ ಹಿಂದುಳಿದ ವರ್ಗಗಳ ಆಯೋಗಗಳು ಕೆಲಸ ಮಾಡಿವೆ. ಆದರೆ ಈ ಯಾವ ಆಯೋಗವೂ ಚಿನ್ನಪ್ಪ ರೆಡ್ಡಿ ಆಯೋಗ ಹೇಳಿದಂತೆ ಮಾಹಿತಿಗಳನ್ನು ಸಂಗ್ರಹಿಸಿ ಹಿಂದುಳಿದವರ ಪಟ್ಟಿಯಿಂದ ಯಾವ ಜಾತಿಯನ್ನೂ ತೆಗೆದುಹಾಕಿಲ್ಲ. ಆದರೆ ಇದುವರೆಗೆ ಆ ಪಟ್ಟಿಯಲ್ಲಿ ಜಾಗ ಪಡೆಯದೆ ಇದ್ದ ಜಾತಿಗಳಿಗೆ ಅಲ್ಲಿ ಜಾಗ ಕೊಟ್ಟಿರುವ ಉದಾಹರಣೆಗಳಿವೆ.

ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಹಂತದಿಂದ ಪ್ರಾರಂಭಿಸಿ ಶಿಕ್ಷಣದ ಎಲ್ಲಾ ಹಂತಗಳಲ್ಲಿ ವಿದ್ಯಾರ್ಥಿಗಳು ತಮ್ಮ ಅರ್ಜಿಗಳಲ್ಲಿ ತಮ್ಮ ಧರ್ಮ, ಜಾತಿ ಮತ್ತು ಉಪಜಾತಿಗಳನ್ನು ದಾಖಲಿಸುವುದು ಕಡ್ಡಾಯವಾಗಿದೆ. ಹಾಗೆಯೇ ಸರ್ಕಾರಿ ನೌಕರಿ ಅಥವಾ ಸರ್ಕಾರದ ಯಾವುದೇ ಸೌಲಭ್ಯ ಸವಲತ್ತುಗಳನ್ನು ಪಡೆಯಲು ಅರ್ಜಿ ಸಲ್ಲಿಸುವಾಗಲೂ ಈ ಎಲ್ಲಾ ಮಾಹಿತಿಗಳನ್ನು ಒದಗಿಸುವುದು ಅನಿವಾರ್ಯವಾಗಿದೆ. ಆದರೆ ಇಂತಹ ಮಾಹಿತಿಗಳನ್ನು ಕಲೆಹಾಕಿ ವಿಶ್ಲೇಷಿಸಿ ತನ್ನ ನಿರ್ಣಯಗಳನ್ನು ನೀಡಬೇಕಾದ ನಮ್ಮ ಖಾಯಂ ಹಿಂದುಳಿದ ವರ್ಗಗಳ ಆಯೋಗಗಳು ಆ ಕೆಲಸವನ್ನು ನಿರ್ಲಕ್ಷಿಸಿವೆ.

'ಜಾತಿ ಗಣತಿ' ಯನ್ನು ವಿರೋಧಿಸಿದವರು, ಈ ಗಣತಿಯಿಂದ ಹಿಂದುಳಿದ ಜಾತಿಗಳ ಪ್ರಮಾಣ ಈಗ ಅಂದಾಜಿಸಿರುವುದಕ್ಕಿಂತ ಹೆಚ್ಚಾಗಿದೆ ಎಂಬ ಮಾಹಿತಿ ಸಿಕ್ಕಿ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಮೀಸಲಾತಿ ಕೊಡಬೇಕಾಗಿ ಬಂದರೆ, ಆಗ ತಮಗೆ ಸಿಗುವ ಅವಕಾಶ ಕಡಿಮೆ ಯಾಗುತ್ತದೆ ಎಂದು ಭಯಗೊಂಡಿರುವ ಮುಂದುವರಿದ ಜಾತಿಗಳವರಾಗಿದ್ದಾರೆ ಎಂದು ಅನೇಕ ಪ್ರಗತಿಪರರು ಆಪಾದಿಸಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರ ಅಥವಾ ಖಾಯಂ ಹಿಂದುಳಿದ ವರ್ಗದ ಆಯೋಗದವರು ಶಿಕ್ಷಣದ ವಿವಿಧ ಹಂತಗಳಲ್ಲಿ ಮತ್ತು ಸರ್ಕಾರಿ ನೌಕರಿಗಳಲ್ಲಿ ಪ್ರತಿ ವರ್ಷ ಹೊಸದಾಗಿ ಸೇರುತ್ತಿರುವವರಲ್ಲಿ ಮುಂದುವರಿದವರ ಪ್ರಮಾಣ ಹೆಚ್ಚುತ್ತಿದೆಯೆ ಅಥವಾ ಕಡಿಮೆಯಾಗುತ್ತಿದೆಯೆ ಎಂಬುದನ್ನು ಪ್ರಕಟಿಸುತ್ತಾ ಬಂದಿದ್ದರೆ ಈ ಆಪಾದನೆಯು ವಾಸ್ತವ ಸ್ಥಿತಿಯನ್ನು ಗಮನಿಸಿಲ್ಲ ಎಂಬುದು ತಿಳಿಯುತ್ತಿತ್ತು. ಯಾಕೆಂದರೆ ಮುಂದುವರಿದ ಸಮುದಾಯದವರು ಕಳೆದ ಎರಡು ಪೀಳಿಗೆಗಳಿಂದ ಕುಟುಂಬ ಯೋಜನೆ ಯನ್ನು ಅನುಸರಿಸುತ್ತಿದ್ದಾರೆ. ಈ ಸಮುದಾಯಗಳವರು ಇತರ ಸಮುದಾಯಗಳವರಿಗಿಂತ ಐದರಿಂದ ಹತ್ತು ವರ್ಷಗಳಷ್ಟು ತಡವಾಗಿ ಮದುವೆಯಾಗುತ್ತಿದ್ದಾರೆ. ಇವರಲ್ಲಿ ಗಮನಾರ್ಹ ಸಂಖ್ಯೆಯವರು ಒಂದೇ ಮಗುವಿಗೆ ತಮ್ಮ ಕುಟುಂಬವನ್ನು ನಿಯಂತ್ರಿಸಿದ್ದಾರೆ. ಹಾಗೆಯೇ ಈ ಸಮುದಾಯದವರು ಉದ್ಯೋಗಗಳಿಗಾಗಿ ಹೊರ ರಾಜ್ಯಗಳಿಗೆ ಮತ್ತು ಹೊರದೇಶಗಳಿಗೆ ವಲಸೆ ಹೋಗಿದ್ದಾರೆ. ಇದನ್ನೆಲ್ಲಾ ಗಮನಿಸಿದರೆ ನಮ್ಮ ರಾಜ್ಯದ ಜನಸಂಖ್ಯೆಯಲ್ಲಿ ಮುಂದುವರಿದ ಸಮುದಾಯಗಳ ಯುವ ಜನರ ಪ್ರಮಾಣ ಹಿಂದುಳಿದ ಸಮುದಾಯ ಗಳವರದ್ದಕ್ಕಿಂತ ಗಮನಾರ್ಹ ಪ್ರಯಾಣದಲ್ಲಿ ಕಡಿಮೆಯಾಗಿರುವ ಸಾಧ್ಯತೆ ಅತಿ ಹೆಚ್ಚಾಗಿದೆ. ಈಗ ವಿವಾದಕ್ಕೊಳಗಾಗಿರುವ 2011ರಲ್ಲಿ ಪ್ರೊಬೇಶನರಿ ಅಧಿಕಾರಿಗಳ ಆಯ್ಕೆಗಾಗಿ ನಡೆದ ಪರೀಕ್ಷೆಯಲ್ಲಿ ಸಾಮಾನ್ಯ ವರ್ಗದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಲ್ಲಿ ಹಿಂದುಳಿದವರು ಮತ್ತು ದಲಿತರು

ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು ಎಂಬುದನ್ನು ಮತ್ತೆ ಮತ್ತೆ ಎತ್ತಿ ಹೇಳಲಾದದ್ದನ್ನು ಇಲ್ಲಿ ನೆನಪಿಸಿಕೊಳ್ಳ ಬಹುದು. ಈ ವರ್ಷದ ಪಿಯುಸಿ ಫಲಿತಾಂಶ ಪ್ರಕಟವಾದ ಸಮಯದಲ್ಲಿ ಪತ್ರಿಕೆಗಳಲ್ಲಿ, ಪರೀಕ್ಷಾ ಮಂಡಳಿಯವರು ವಿದ್ಯಾರ್ಥಿಗಳ ಜಾತಿವಾರು ಫಲಿತಾಂಶವನ್ನು ವರ್ಗೀಕರಿಸಿ ಕೊಟ್ಟಿದ್ದ ಮಾಹಿತಿಯೂ ಇತ್ತು. ಅದರ ಪ್ರಕಾರ ಈ ಪರೀಕ್ಷೆಯನ್ನು ತೆಗೆದುಕೊಂಡ ಸುಮಾರು ಆರು ಲಕ್ಷದ ಹತ್ತು ಸಾವಿರ ವಿದ್ಯಾರ್ಥಿಗಳಲ್ಲಿ ಸಾಮಾನ್ಯ ವರ್ಗದವರ ಸಂಖ್ಯೆ ಸುಮಾರು ತೊಂಬತ್ತೂರು ಸಾವಿರದಷ್ಟಿತ್ತು. ಅಂದರೆ ಈ ವರ್ಗದವರ ಪ್ರಮಾಣ ಸುಮಾರು ಶೇ. ಹದಿನೈದರಷ್ಟು ಮಾತ್ರ. ಹಾಗೆಯೇ ಈ ಪರೀಕ್ಷೆಯಲ್ಲಿ ಸಾಮಾನ್ಯ ವರ್ಗದವರ ಉತ್ತೀರ್ಣತೆಯ ಪ್ರಮಾಣ ಶೇ. 66.31 ರಷ್ಟಿದ್ದರೆ ಹಿಂದುಳಿದ ವರ್ಗದವರಲ್ಲಿ 2ಎ ಪ್ರವರ್ಗದ ಜಾತಿಗಳವರ ಪ್ರಮಾಣ ಶೇ. 65.53ರಷ್ಟು, 3ಎ ಪ್ರವರ್ಗದವರ ಪ್ರಮಾಣ ಶೇ. 65.1ರಷ್ಟು ಮತ್ತು 3 ಬಿ ಪ್ರವರ್ಗದವರ ಪ್ರಮಾಣ ಶೇ. 64.54 ರಷ್ಟಿತ್ತು. ಅಂದರೆ ಮುಂದುವರೆದವರ ಉತ್ತೀರ್ಣತೆಯ ಪ್ರಮಾಣಕ್ಕೂ ಹಿಂದುಳಿದವರ ಈ ಪ್ರವರ್ಗಗಳ ಉತ್ತೀರ್ಣತೆಯ ಪ್ರಮಾಣಕ್ಕೂ ಅಂತರ ಸುಮಾರು ಶೇಕಡ ಒಂದರಿಂದ ಎರಡರಷ್ಟು ಮಾತ್ರ. ಇಂತಹ ಮಾಹಿತಿಗಳು ನಮ್ಮ ಸಮಾಜದಲ್ಲಿ ಆಗುತ್ತಿರುವ ಮೌಲಿಕ ಬದಲಾವಣೆಗಳ ಕಡೆಗೆ ನಮ್ಮ ಗಮನ ಸೆಳೆಯುತ್ತವೆ. ನಮ್ಮ ಸರ್ಕಾರಗಳು ಇಂತಹ ಇನ್ನೂ ಅನೇಕಾನೇಕ ಮಾಹಿತಿಗಳನ್ನು ಕಾಲಕಾಲಕ್ಕೆ ಜನರೊಂದಿಗೆ ಹಂಚಿಕೊಂಡರೆ, ಅವರಿಗೆ ತಮ್ಮ ಸಮಾಜದ ವಾಸ್ತವ ಸ್ಥಿತಿಗತಿಗಳು ತಿಳಿದು, ಅವುಗಳ ಸಹಾಯದಿಂದ ಅವರು ತಮ್ಮ ಧೋರಣೆಗಳಲ್ಲಿರುವ ಪೂರ್ವಗ್ರಹಗಳನ್ನು ಕಳೆದುಕೊಳ್ಳ ಬಹುದಾಗಿದೆ. ಇದರಿಂದ ಸಾಮಾಜಿಕ ಸೌಹಾರ್ದಕ್ಕೆ ಖಂಡಿತ ಲಾಭವಾಗುತ್ತದೆ.

ಹಿಂದುಳಿದಿರುವಿಕೆ : ಜಾತಿಯೇತರ ಆಯಾಮಗಳು

ಪರಿಶಿಷ್ಟ ಜಾತಿಯವರ ಮಾನವ ಹಕ್ಕುಗಳನ್ನು ನಮ್ಮ ಸಮಾಜ ಮಾನ್ಯ ಮಾಡದೆ ಇರುವುದರಿಂದ ಅವರ ಏಳ್ಗೆಗಾಗಿ ಅವರಿಗೆ ಮೀಸಲಾತಿ ಸೌಲಭ್ಯ ಕೊಡುವ ಅವಶ್ಯಕತೆಯನ್ನು ಸಲುಭವಾಗಿ ಮನಗಾಣಿಸಬಹುದು. ಅದೇ ರೀತಿ ನಾಗರಿಕ ಸಮಾಜದಿಂದ ದೂರವಾಗಿ ಅರಣ್ಯಗಳಲ್ಲಿ ನೆಲೆಸಿರುವ ಬುಡಕಟ್ಟುಗಳಿಗೆ ಸೇರಿದ ಪರಿಶಿಷ್ಟ ಪಂಗಡದವರು ಆಧುನಿಕ ಸೌಲಭ್ಯಗಳಿಂದ ವಂಚಿತರಾಗಿರುವುದನ್ನು ಗುರುತಿಸಿ ತೋರಿಸಬಹುದು. ಆದರೆ ಸವರ್ಣೀಯರೆಂದು ಗುರುತಿಸಲಾಗುವ ವರ್ಗದಲ್ಲಿ, ಕ್ಷೌರಿಕರು ಮಡಿವಾಳರಂತಹ ಕೆಲವು ಸಮುದಾಯಗಳವರನ್ನು ಬಿಟ್ಟು, ಇತರರು ಹೇಗೆ ಜಾತಿ ಪದ್ಧತಿಯ ಮಡಿಮೈಲಿಗೆಯ ನಿಯಮಗಳಿಂದಾಗಿ ತಮ್ಮ ಮಾನವ ಹಕ್ಕುಗಳನ್ನು ಕಳೆದುಕೊಂಡು ಆಧುನಿಕ ಚಲನಶೀಲ ಸಮಾಜದಲ್ಲಿ ಹಿಂದುಳಿಯ ಬೇಕಾಗಿ ಬಂದಿದೆ ಎಂದು ತೋರಿಸಿಕೊಡುವುದು ಸಮಸ್ಯಾತ್ಮಕವಾಗಿದೆ. ಉದಾಹರಣೆಗೆ ನಮ್ಮ ರಾಜ್ಯದ ಸಮಾಜದಲ್ಲಿ ಇಂದು ಅತ್ಯಂತ ಮುಂದುವರೆದವರೆಂದು ಗುರುತಿಸಲ್ಪಡುವ ಬ್ರಾಹ್ಮಣ ಸಮುದಾಯದವರು ಕಳೆದ ಶತಮಾನದ ಆದಿಭಾಗದಲ್ಲಿ, ಹಳೆಯ ಮೈಸೂರು ಸಂಸ್ಥಾನದಲ್ಲಿ ಸರ್ಕಾರಿ ನೌಕರಿಗಳನ್ನು ಪಡೆಯುವಲ್ಲಿ, ಬ್ರಿಟಿಷರ ನೇರ ಆಡಳಿತವಿದ್ದ ಅಂದಿನ ಮದ್ರಾಸ್ ಪ್ರಾಂತ್ಯದ ಬ್ರಾಹ್ಮಣ ಅಭ್ಯರ್ಥಿಗಳೊಡನೆ ಪೈಪೋಟಿ ನಡೆಸಲಾಗದೆ ತಮಗೆ ಸರ್ಕಾರಿ ನೌಕರಿಯಲ್ಲಿ ಮೀಸಲಾತಿ ಬೇಕೆಂದು ಹೋರಾಟ ನಡೆಸಿದ್ದರು. ಈ ಹೋರಾಟ 'ಮೈಸೂರು ಫಾಲ್ ಮೈಸೂರಿಯನ್ಸ್' ಎಂಬ ಘೋಷಣೆಯೊಂದಿಗೆ ನಡೆಯಿತು. (ಈ ಎರಡು ಬ್ರಾಹ್ಮಣ ಗುಂಪುಗಳ ನಡುವೆ ನಡೆದ ಸಂಘರ್ಷದ ಬಗ್ಗೆ ಒಂದು ನೋಟವನ್ನು, ಎ.ಎನ್. ಮೂರ್ತಿರಾಯರ ಆತ್ಮಕತೆ

'ಸಂಜೆಗಣ್ಣಿನ ಹಿನ್ನೋಟ' (1990)ದಲ್ಲಿ ಪುಟ 228ರಲ್ಲಿ ದಾಖಲಾಗಿರುವ ಒಂದು ವಾಗ್ವಾದದಿಂದ ಪಡೆಯಬಹುದು.) ಈ ಎರಡು ಪ್ರಾಂತ್ಯಗಳ ಬ್ರಾಹ್ಮಣ ಪುರುಷರು ಎರಡು ಸಾವಿರ ವರ್ಷಗಳಿಂದ ವೈದಿಕ ಸಂಸ್ಕೃತಿ ಮಾನ್ಯ ಮಾಡಿದ್ದ ಶಿಕ್ಷಣ ಸೌಲಭ್ಯಗಳ ಲಾಭ ಪಡೆದಿದ್ದರು. ಆದರೂ ಮದ್ರಾಸ್ ಪ್ರಾಂತ್ಯದವರು ಮೈಸೂರು ಪ್ರಾಂತ್ಯ ದವರಿಗಿಂತ ಮುಂದುವರೆದವರಾಗಿದ್ದಕ್ಕೆ ಕಾರಣವೆಂದರೆ, ಮದ್ರಾಸ್ ಪ್ರಾಂತ್ಯದಲ್ಲಿ ಆಧುನಿಕ ಮಾದರಿಯ ಆಡಳಿತಾತ್ಮಕ, ಶೈಕ್ಷಣಿಕ ವ್ಯವಸ್ಥೆಗಳು ಒಂದು ಶತಮಾನಕ್ಕೂ ಮೊದಲೇ ಕೊಂಚ ಕೊಂಚವಾಗಿ ಜಾರಿಗೆ ಬಂದದ್ದು ಮತ್ತು ಅಲ್ಲಿಯ ಬ್ರಾಹ್ಮಣರು ಈ ವ್ಯವಸ್ಥೆಗಳ ಅಗತ್ಯಗಳಿಗೆ ತಕ್ಕಂತೆ ತಮ್ಮ ಬದುಕುಗಳನ್ನು ಬದಲಾಯಿಸಿಕೊಂಡು ಮುಂದುವರೆದವರಾಗಿ ರೂಪುಗೊಂಡದ್ದು.

ಬ್ರಿಟಿಷರ ಕಾಲದ ಮದ್ರಾಸ್ ಪ್ರಾಂತ್ಯದ ಬ್ರಾಹ್ಮಣರು ಹೀಗೆ ಮುಂದುವರೆದರೆ ಅದೇ ಸಮಯದಲ್ಲಿ ಈಗ ಕೇರಳ ರಾಜ್ಯದ ಭಾಗವಾಗಿರುವ ಪ್ರದೇಶಗಳಲ್ಲಿ, ಅತಿ ದೊಡ್ಡ ಭೂಮಾಲೀಕರಾಗಿದ್ದ ನಂಬೂದರಿ ಬ್ರಾಹ್ಮಣರು ಅತ್ಯಂತ ಕರ್ಮಠರಾಗಿದ್ದು ಆ ಪ್ರದೇಶಗಳಲ್ಲಿ ಮಿಷನರಿಗಳಿಂದ ಸ್ಥಾಪಿತವಾಗಿದ್ದ ಆಧುನಿಕ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಇಚ್ಛಿಸಲಿಲ್ಲ. ಆದರೆ ಆ ಪ್ರದೇಶಗಳಲ್ಲಿ ನಂಬೂದರಿ ಬ್ರಾಹ್ಮಣರಿಂದ ಶೂದ್ರರೆಂದು ಸಂಬೋಧಿಸಲ್ಪಡುತ್ತಿದ್ದ ನಾಯರ್‌ಗಳಂತಹ ಹಲವು ಬ್ರಾಹ್ಮಣೇತರ ಸಮುದಾಯಗಳವರು ಈ ಶೈಕ್ಷಣಿಕ ಸೌಲಭ್ಯಗಳನ್ನು ಪಡೆದುಕೊಂಡು ಮುಂದುವರೆದವರಾದರು. ಹತ್ತು ವರ್ಷಗಳ ಹಿಂದೆ ಯುಪಿಎ ಸರ್ಕಾರದಲ್ಲಿ ವಿದೇಶಾಂಗ ಇಲಾಖೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ನಾಯರ್ ಸಮುದಾಯದ ಶಿವಶಂಕರ್ ಮೆನನ್ ಅವರು ತಮ್ಮ ವಂಶದಲ್ಲಿ ಆ ಹುದ್ದೆಯನ್ನ ಪಡೆದ ಮೂರನೆಯವ ರಾಗಿದ್ದರು ಎಂಬುದನ್ನು ಇಲ್ಲಿ ಹೇಳಬಹುದು.

ಇಂದಿನ ಕೇರಳದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಸಮುದಾಯಗಳಲ್ಲಿ ಕ್ರಿಶ್ಚಿಯನ್ನರು ಮೊದಲ ಸ್ಥಾನವನ್ನು, ಮುಸಲ್ಮಾನರು ಎರಡನೆ ಸ್ಥಾನವನ್ನು ಮತ್ತು ಸವರ್ಣೀಯ ಹಿಂದುಗಳು ಮೂರನೆ ಸ್ಥಾನವನ್ನು ಪಡೆದಿದ್ದಾರೆ. ಆದರೆ ಅಲ್ಲಿನ ಮುಸ್ಲಿಮರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದರೂ, ಅವರು ತಾವು ಅವಲಂಬಿಸಿರುವ ವ್ಯಾಪಾರ ಮತ್ತು ಕೃಷಿ ಕ್ಷೇತ್ರಗಳಿಗೆ ಹೆಚ್ಚಿನ ಅಗತ್ಯವಿಲ್ಲವೆಂದು ಕಂಡು ಕೊಂಡಿರುವ ಆಧುನಿಕ ಶಿಕ್ಷಣವನ್ನು ಕಡೆಗಣಿಸಿದ್ದಾರೆ. ಉನ್ನತ ಶಿಕ್ಷಣದಲ್ಲಿ ಅವರು ಅಲ್ಲಿನ ದಲಿತರಿಗಿಂತ ಹಿಂದಿದ್ದಾರೆ ಎಂದು ಒಂದು ಅಧ್ಯಯನ ದಾಖಲಿಸಿದೆ. ಹೀಗಾಗಿ ಅವರಿಗೆ ಅಲ್ಲಿನ ಸರ್ಕಾರ ಹಿಂದುಳಿದ ಸಮುದಾಯದ ಸ್ಥಾನ ನೀಡಿ ಅವರಿಗೆ ಶಿಕ್ಷಣ ಮತ್ತು ಸರ್ಕಾರಿ ನೌಕರಿಗಳಲ್ಲಿ ಶೇಕಡ ಹನ್ನೆರಡರಷ್ಟು ಮೀಸಲಾತಿಯನ್ನು ನೀಡಿದೆ.

ಬ್ರಾಹ್ಮಣರಿಂದ ಶೂದ್ರರೆಂದು ಗುರುತಿಸಲ್ಪಟ್ಟರೂ ಇಂದು ನಮ್ಮ ದೇಶದಲ್ಲಿ ಮುಂದುವರೆದವರ ವರ್ಗಕ್ಕೆ ಸೇರಿರುವ ಒಂದು ಸಣ್ಣ ಆದರೆ ಬಹಳ ಪ್ರಭಾವಶಾಲಿ ಸಮುದಾಯ ಎಂದರೆ ಕಾಯಸ್ಥರದ್ದು. ಉತ್ತರ ಭಾರತದಾದ್ಯಂತ ಕರಣಿಕರ ಉದ್ಯೋಗದಲ್ಲಿ ತೊಡಗಿದ್ದ ಈ ಸಮುದಾಯದವರು ಆಧುನಿಕ ಶೈಕ್ಷಣಿಕ ಸೌಲಭ್ಯಗಳ ಲಾಭ ಪಡೆದು ಅಲ್ಲಿನ ರಾಜ್ಯ ಹಾಗೂ ಕೇಂದ್ರ ಸರ್ಕಾರದಲ್ಲಿ ದೊಡ್ಡ ಸಂಖ್ಯೆಯಲ್ಲಿ ದೊಡ್ಡ ಹುದ್ದೆಗಳಲ್ಲಿದ್ದಾರೆ. ಶ್ರೀವಾಸ್ತವ, ಮಾಥುರ್, ಸಕ್ಸೇನಾ, ಸಿನ್ಹಾ, ಸದಾಯ್ ಮುಂತಾದವು ಇವರ ಕುಲನಾಮಗಳು. ನಮ್ಮ ದೇಶದ ಮೊದಲ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್, ಎರಡನೆ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ (ಶ್ರೀವಾಸ್ತವ) ಜಯಪ್ರಕಾಶ್ ನಾರಾಯಣ್, ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಸಂಪೂರ್ಣಾನಂದ

(ಶ್ರೀವಾಸ್ತವ), ಇಪ್ಪತ್ತೈದಕ್ಕೂ ಹೆಚ್ಚು ವರ್ಷಗಳ ಕಾಲ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಯಾಗಿದ್ದ ಜ್ಯೋತಿ ಬಸು, ಮುಂಬೈಯ ಶಿವಸೇನಾದ ಸಂಸ್ಥಾಪಕ ಬಾಳ್ ಠಾಕ್ರೆ (ಇವರ ಸಮುದಾಯವನ್ನು ಚಂದ್ರ ಸೇನಿಯ ಕಾಯಸ್ಥ ಪ್ರಭು (ಸಿಕೆಪಿ) ಎಂದು ಗುರುತಿಸಲಾಗುತ್ತದೆ). ಹಿಂದಿ ಸಾಹಿತ್ಯದ ಪ್ರಮುಖ ಸಾಹಿತಿ ಪ್ರೇಮ್‌ಚಂದ್ (ನಿಜನಾಮ – ಧನ್‌ಪತ್ ರಾಯ್ ಶ್ರೀವಾಸ್ತವ) ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಒಡಿಯಾ ಸಾಹಿತಿ ಗೋಪಿನಾಥ್ ಮೊಹಂತೀ, ಹಿಂದಿ ಸಿನಿಮಾದ ಪ್ರಸಿದ್ಧ ಹಿನ್ನಲೆ ಗಾಯಕ ಮುಖೇರ್ (ಮಾಥುರ್) ಇವರುಗಳೆಲ್ಲಾ ಕಾಯಸ್ಥ ಸಮುದಾಯಕ್ಕೆ ಸೇರಿದವರು.

ಬ್ರಿಟಿಷರ ಆಡಳಿತದಿಂದ ರೈಲ್ವೇ ಇಲಾಖೆ, ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಒಂದು ರೀತಿಯ ಅನೌಪಚಾರಿಕ ಮೀಸಲಾತಿಯನ್ನು ಸುಮಾರು ತೊಂಬತ್ತು ವರ್ಷಗಳ ಕಾಲ ಪಡೆದೂ ಕೆಳವರ್ಗದ ನಡಾವಳಿಗೆ ಅಂಟಿಕೊಂಡು ಉನ್ನತ ಶಿಕ್ಷಣವನ್ನು ಕಡೆಗಣಿಸಿ ಕೆಲವು ಗೌರವಾನ್ವಿತ ಅಪವಾದಗಳನ್ನು ಬಿಟ್ಟರೆ, ಕ್ರೀಡೆ ಮತ್ತು ಮನರಂಜನಾ ಕ್ಷೇತ್ರವನ್ನು ಬಿಟ್ಟು ಇನ್ನಿತರ ಕಡೆ ಹೆಚ್ಚಿನದನ್ನೇನೂ ಸಾಧಿಸದ ಆಂಗ್ಲೊ–ಇಂಡಿಯನ್ ಸಮುದಾಯವನ್ನೂ ಇಲ್ಲಿ ಸ್ಮರಿಸಿಕೊಳ್ಳ ಬಹುದು. ಹಾಗೆಯೇ, ಗುಜರಾತಿನ ಹಳ್ಳಿಗಳ ಸಣ್ಣ ಹಿಡುವಳಿದಾರರಾಗಿದ್ದ ಪಾರ್ಸಿ ಸಮುದಾಯ ದವರು ಹತ್ತೊಂಬತ್ತನೆ ಶತಮಾನದಲ್ಲಿ ಬ್ರಿಟಿಷರ ಆಡಳಿತ ಸೃಷ್ಟಿಸಿದ ಶಾಂತಿ ಸುವ್ಯವಸ್ಥೆಯ ಲಾಭ ಪಡೆದು, ಮುಂಬೈ ನಗರಕ್ಕೆ ವಲಸೆ ಬಂದು ವ್ಯಾಪಾರೋದ್ಯಮಿಗಳಾಗಿ ತಮ್ಮ ಮಕ್ಕಳಿಗೆ ಒಳ್ಳೆಯ ಶಾಲಾ ಕಾಲೇಜು ಶಿಕ್ಷಣ ನೀಡಿ ಅವರು ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಗಳನ್ನು ಮಾಡಿ ಇಂದಿಗೂ ಭಾರತದ ಪ್ರತಿಷ್ಠಿತ ಸಮುದಾಯವಾಗಿದ್ದಾರೆ. ಅವರು ತಮಗೆ ಯಾವ ರೀತಿಯ ಮೀಸಲಾತಿಯೂ ಬೇಕಾಗಿಲ್ಲ ಎಂದು ಘೋಷಿಸಿದ್ದನ್ನು ಇಲ್ಲಿ ಹೇಳಬೇಕು.

ಇದೆಲ್ಲದರ ತಾತ್ಪರ್ಯ ಏನೆಂದರೆ ಇಂದು ಹಿಂದುಳಿದವರೆಂದು ಗುರುತಿಸಬೇಕಾಗಿ ಬಂದಿರುವ ಸಮುದಾಯಗಳ ಹಿಂದುಳಿದಿರುವಿಕೆಗೆ ನಮ್ಮ ಸಾಂಪ್ರದಾಯಿಕ ಜಾತಿ ಪದ್ಧತಿ ಸೃಷ್ಟಿಸಿರುವ ನಡಾವಳಿಗಳಷ್ಟೇ ಅಥವಾ ಅದಕ್ಕಿಂತ ಹೆಚ್ಚಾಗಿ, ಆಧುನಿಕ ಜೀವನವನ್ನು ರೂಪಿಸುತ್ತಿರುವ ಆಡಳಿತ, ಶಿಕ್ಷಣ ಹಾಗೂ ಉತ್ಪಾದನಾ ಕ್ಷೇತ್ರಗಳ ಅವಶ್ಯಕತೆಗಳಿಗೆ ಹೊಂದಿ ಕೊಳ್ಳಲುಬೇಕಾದ ನಡಾವಳಿಗಳನ್ನು ರೂಢಿಸಿಕೊಳ್ಳುವ ಜಾಣ್ಮೆಯ ಕೊರತೆಯೂ ಕಾರಣವಾಗುತ್ತದೆ. ಈ ಜಾಣ್ಮೆಯನ್ನು ಕಂಡುಕೊಳ್ಳುವ ಸಮುದಾಯಗಳು ಮುಂದುವರಿದವರ ಗುಂಪಿಗೆ ಸೇರುತ್ತವೆ ಮತ್ತು ಅಂತಹ ನಡಾವಳಿಗಳನ್ನು ಮೈಗೂಡಿಸಿಕೊಳ್ಳದ ಅಥವಾ ಅವರು ಹಾಗೆ ಮಾಡುವಲ್ಲಿ ಸಮಾಜದ ಇತರರಿಂದ ತಡೆಯಲ್ಪಟ್ಟ ಸಮುದಾಯಗಳು ಹಿಂದುಳಿದವೆಂದು ಗುರುತಿಸಲ್ಪಡುತ್ತವೆ. ನಮ್ಮ ಸಮಾಜದ ಅತ್ಯಂತ ಶೋಷಿತ ಹಾಗೂ ದಮನಿತ ವರ್ಗ ಎಂದು ಸಕಾರಣವಾಗಿ ಗುರುತಿಸಲಾಗಿರುವ ದಲಿತ ವರ್ಗದಲ್ಲಿ, ಬರೀ ಐವತ್ತು ವರ್ಷಗಳಿಂದ ಅವರು ಹೆಚ್ಚಿನ ಪ್ರಮಾಣದಲ್ಲಿ ಮೀಸಲಾತಿಯ ಮೂಲಕ, ಆಧುನಿಕ ಶಿಕ್ಷಣ ಮತ್ತು ಸರ್ಕಾರಿ ನೌಕರಿಗಳಿಗೆ ತೆರೆದುಕೊಂಡಷ್ಟರಲ್ಲೆ ಅವರಲ್ಲೇ ಕೆಲವು ಜಾತಿಗಳು ಮುಂದುವರೆದವರೆಂದು ಹಾಗೂ ಇನ್ನೂ ಕೆಲವು ಅವಕಾಶ ವಂಚಿತರಾಗಿ ಹಿಂದುಳಿದವರೆಂದು ಗುರುತಿಸಲ್ಪಡುತ್ತಿರುವುದು ಇದಕ್ಕೆ ಒಂದು ಒಳ್ಳೆಯ ಸಾಕ್ಷಿ. ಈಗ್ಗೆ ಹದಿನೈದು ವರ್ಷಗಳಿಂದ ದಲಿತರು ತಮಗೆ ನೀಡಿರುವ ಮೀಸಲಾತಿಯಲ್ಲಿ ಜಾತಿ ಆಧಾರಿತ ವರ್ಗೀಕರಣ ಅವಶ್ಯವಾಗಿ ಆಗಲೇ ಬೇಕೆಂದು ಹೇಳುತ್ತಿರುವುದನ್ನೂ ಗಮನಿಸಬಹುದು.

ಅವಶ್ಯವಾದ ಅಭಿವೃದ್ಧಿಯನ್ನು ತಡೆಯುತ್ತಿರುವ ಪ್ರಗತಿಪರರ ದ್ವಂದ್ವ ನಿಲುವು

ನಮ್ಮಲ್ಲಿ ಹಿಂದುಳಿದ ಸಮುದಾಯದಲ್ಲಿನ ಹೆಚ್ಚಿನ ಜಾತಿಗಳು ಅಪೇಕ್ಷಿತ ಮಟ್ಟದ ಪ್ರಗತಿಯನ್ನು ಸಾಧಿಸಲಾಗದಿರುವುದಕ್ಕೆ ಹಿಂದುಳಿದವರ ಏಳ್ಗೆಗಾಗಿ ಶ್ರಮಿಸುತ್ತಿರುವ ಪ್ರಗತಿಪರರು, ಆಧುನಿಕ ಯಂತ್ರ ನಾಗರಿಕತೆಯನ್ನು ಆಧರಿಸಿದ ವ್ಯಾಪಾರೋದ್ಯಮಗಳ ಬೆಳವಣಿಗೆಗಳ ಬಗ್ಗೆ ವಿರೋಧಿ ಧೋರಣೆ ಹೊಂದಿರುವುದು ಒಂದು ಮುಖ್ಯ ಕಾರಣವಾಗಿದೆ ಎಂದು ಹೇಳಬಹುದು.

ಆಧುನಿಕ ಕಚೇರಿಗಳಲ್ಲಿ ಮತ್ತು ವ್ಯಾಪಾರೋದ್ಯಮಗಳಲ್ಲಿ ಕೆಲಸ ಪಡೆಯಲು ಅವಶ್ಯವಿರುವ ಕೌಶಲಗಳನ್ನು ನೀಡುವ ಆಧುನಿಕ ಶಿಕ್ಷಣ ಸೌಲಭ್ಯಗಳು ಮೀಸಲಾತಿಯ ಮೂಲಕ ಹಿಂದುಳಿದವರಿಗೆ ಸಿಗುವಲ್ಲಿ ಪ್ರಗತಿಪರರು ಮುಖ್ಯ ಪಾತ್ರ ವಹಿಸಿದ್ದಾರೆ. ಆದರೆ ಹೀಗೆ ಶೈಕ್ಷಣಿಕ ಅರ್ಹತೆಗಳನ್ನು ಪಡೆದವರಿಗೆ ಉದ್ಯೋಗಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೃಷ್ಟಿಸುವ ವ್ಯಾಪಾರೋದ್ಯಮಗಳ ಬೆಳವಣಿಗೆಗೆ ಇವರು ಸಹಕರಿಸುತ್ತಿಲ್ಲ. ಹಿಂದೆ ವ್ಯಾಪಾರೋದ್ಯಮಗಳ ಬೆಳವಣಿಗೆಗಳನ್ನು ಸರ್ಕಾರಿ ಲೈಸೆನ್ಸ್, ಪರ್ಮಿಟ್, ಕೋರ್ಟುಗಳ ಮೂಲಕ ತಡೆದ ಇವರು ಈಗ ಪರಿಸರವಾದಿಗಳಾಗಿ ಇದೇ ಕೆಲಸವನ್ನು ಮಾಡಿ ಬೀಗುತ್ತಿದ್ದಾರೆ. ಇದರಿಂದಾಗಿ ಆಧುನಿಕ ಉದ್ಯೋಗಗಳನ್ನು ಪಡೆಯಲು ಹತ್ತರಿಂದ ಹದಿನಾರು ವರ್ಷಗಳ ಕಾಲ ಶಿಕ್ಷಣ ಪಡೆದವರು ಈಗ 'ವಿದ್ಯಾವಂತ ನಿರುದ್ಯೋಗಿ'ಗಳಾಗಿ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ.

ಹಾಗಾದರೆ ಹಿಂದುಳಿದವರ ಏಳ್ಗೆಯನ್ನು ಬಯಸುವ ಪ್ರಗತಿಪರರಿಗೆ ಏನು ಬೇಕು? ಆಧುನಿಕ ಯಂತ್ರ ನಾಗರಿಕತೆಯನ್ನು ಆಧರಿಸಿರುವ ವ್ಯಾಪಾರೋದ್ಯಮಗಳು ಜನರನ್ನು ಶೋಷಿಸುತ್ತವೆ, ಪರಿಸರವನ್ನು ನಾಶ ಮಾಡುತ್ತವೆ ಎಂದರೆ ಈ ವ್ಯವಸ್ಥೆಯನ್ನು ಸ್ಥಗಿತಗೊಳಿಸಲು ಅದು ಅವಲಂಬಿಸಿರುವ ಶಿಕ್ಷಣ ವ್ಯವಸ್ಥೆಯನ್ನೆ ನಾವು ನಿಷೇಧಿಸುವುದು ಸರಿಯಾಗುತ್ತದಲ್ಲವೇ? ಆದರೆ ನಮ್ಮ ಪ್ರಗತಿಪರರ್‍ಯಾರು ಇದನ್ನು ಒಪ್ಪಲಾರರು. ಒಟ್ಟಿನಲ್ಲಿ ಈಗ ನಮಗೆ ಸ್ಥಗಿತ ಸಮಾಜವೇ ಗತಿ ಎಂದು ಕಾಣುತ್ತದೆ.

ಬಯಲ ಸಂತೆಯ ಕಂಡು
ಬಯಸಿ ಎಲ್ಲವ ಕೊಂಡು
ಸಂತೆ ಸಾಕೆಂದು ನಡೆದ ಮೇಲೆ
ಸಂತ ನೀನಾಗಿ
ಕೊಂಡ ಲೆಕ್ಕವೆಲ್ಲ ಸೊನ್ನೆಯಾಗಿ
ಸಂತೆಯಿಲ್ಲದ ಬಯಲು ಬಿದ್ದಿತ್ತು ಎಲ್ಲೆಲ್ಲೂ.

ಅಭಿನವ ಗೀತಾರ್ಥ ಸಂಗ್ರಹ

ಚೈತನ್ಯ
C-903, Shanti Harmony, Kamdar Colony
Indira Marg Jamnagar, Gujarat - 361 005

ಗೀತೆಯ ಬೆಳಕು : ಗೀತೆ ಭರತ ಭೂಮಿಯ ಬಂಗಾರದ ಪುಸ್ತಕ. ಸಕಲ ಧೀರ–ಉದಾತ್ತ ಚಿಂತನೆಗಳ ಸಾರ–ಸಂಗ್ರಹದ ಫಲವೇ ಭಗವದ್ಗೀತೆ. ಅರ್ಜನನ್ನು ನಿಮಿತ್ತ ಮಾತ್ರನಾಗಿಸಿಕೊಂಡು ಲೋಕಕ್ಕೆಲ್ಲ ತಿಳಿವನ್ನು ಬೋಧಿಸಿದ ಕೃಷ್ಣನು ಓದಿದವರಿಗೆಲ್ಲ ಸನ್ಮತಿಯನ್ನು ದೊರಕಿಸಿಕೊಡುವ ಅಮೃತವನ್ನು ಸಂತತ ಹರಿಸುತ್ತಿರುವನು. ಇಂತಹ ಗೀತೆಯನ್ನು ತಮಗೆ ಸರಿಯೆನಿಸಿದ ರೀತಿಯಲ್ಲಿ ಅರ್ಥೈಸಿ ಹಲವಾರು ಪುಣ್ಯಪುರುಷರು ಅದರ ಕುರಿತಾಗಿ ತಮ್ಮ ಅನುಭವಪೂರ್ಣ ವ್ಯಾಖ್ಯಾನ ವನ್ನು ಮಂಡಿಸಿದ್ದಾರೆ. ಶಂಕರ, ಮಧ್ವ ಮತ್ತು ರಾಮಾನುಜಾಚಾರ್ಯರು ತಂತಮ್ಮ ಮತ ಸೂತ್ರಗಳು ಅನಾದಿಯಿಂದಲೂ ಸ್ವಯಂ ಸಿದ್ಧವೆಂದು ತೋರಿಸಲು ಪ್ರಸ್ಥಾನತ್ರಯಗಳಲ್ಲಿ ತಾವು ಮಂಡಿಸುತ್ತಿರುವ ಸಿದ್ಧಾಂತವೇ ಮೊದಲಿಂದ ಇದೆಯೆಂದು ಹೇಳಲಿಕ್ಕಾಗಿ ಅವುಗಳಿಗೆ ಭಾಷ್ಯಗಳನ್ನು ಬರೆದರು. ಪ್ರಸ್ಥಾನತ್ರಯ ಅಂದರೆ ಮೂರು ಆಧಾರ ಗ್ರಂಥಗಳು. ಪ್ರತಿಯೊಂದು ಧರ್ಮಕ್ಕೂ ಅದರದ್ದೇ ಆದ ಪವಿತ್ರ ಗ್ರಂಥಗಳಿವೆ. ಖುರಾನ್, ಬೈಬಲ್, ಧರ್ಮಪದ ಇತ್ಯಾದಿ. ಆದರಲ್ಲಿ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡ ವ್ಯಕ್ತಿಗಳ ವಾಣಿ ಇರುತ್ತದೆ. ಭಾರತೀಯ ಸನಾತನ ಧರ್ಮದಲ್ಲಿ ಒಬ್ಬ ವ್ಯಕ್ತಿ ಅಥವಾ ಒಂದು ಧರ್ಮಗ್ರಂಥ ಎಂಬುದಿಲ್ಲ. ಹಾಗಾಗಿ ಈ ಸತ್ಯ ಸಾಕ್ಷಾತ್ಕಾರದ ದೃಷ್ಟಿಯಿಂದ ಪ್ರಸ್ಥಾನತ್ರಯ ಎಂದು ಮೂರು ಗ್ರಂಥಸಂಪುಟಗಳನ್ನು ಆಧಾರವಾಗಿ ನಮ್ಮ ಹಿರಿಯರು ಅಂಗೀಕರಿಸಿದ್ದಾರೆ. ಅವುಗಳೆಂದರೆ ಬ್ರಹ್ಮಸೂತ್ರ, ಉಪನಿತ್ತುಗಳು ಮತ್ತು ಭಗವದ್ಗೀತೆ. ಬ್ರಹ್ಮಸೂತ್ರಗಳನ್ನು ವ್ಯಾಸರು ರಚಿಸಿದ್ದಾರೆ. ಬಹಳ ಚುಟುಕಾದ ವಾಕ್ಯಗಳಿಂದ ಸೂತ್ರದಂತೆ ಆಧ್ಯಾತ್ಮದ ಸತ್ಯವನ್ನು ತಿಳಿಸಿರುವ ಬ್ರಹ್ಮಸೂತ್ರವು ಸಾಮಾನ್ಯರಿಗೆ ಬಿಡಿ, ವಿದ್ವಾಂಸರಿಗೂ ಕಬ್ಬಿಣದ ಕಡಲೆಯೇ. ಬೀಜದಲ್ಲಿ ಅವಿತಿರುವ ವೃಕ್ಷದಂತೆ ಪ್ರತೀ ಸೂತ್ರದಲ್ಲೂ ಬ್ರಹ್ಮಾಂಡವೇ ಅಡಗಿದೆ. ಆದರೂ ಅದರಲ್ಲಿ ಉಪನಿಷತ್ತಿನಲ್ಲಿಲ್ಲದ ಯಾವ ವಿಷಯವೂ ಇಲ್ಲ. ಅದು ಉಪನಿಷತ್ತಿನ ಸಾರ ಸಂಗ್ರಹವೆನ್ನಬಹುದಾದರೂ ಸಾಮಾನ್ಯನ ಮನೆಬಾಗಿಲಿಗೆ ಬಂದಿಲ್ಲ. ಬ್ರಹ್ಮಸೂತ್ರಕ್ಕಿಂತಲೂ ಉಪನಿಷತ್ತಿನ ಅರ್ಥೈಸುವಿಕೆ ಸುಲಭ. ವೇದದಲ್ಲಿ ಸ್ಥೂಲವಾಗಿ 2 ಭಾಗಗಳಿವೆ. ಮೊದಲನೆಯದು ಕರ್ಮಕಾಂಡ. ಎರಡನೆಯದು ಜ್ಞಾನಕಾಂಡ. ಶುದ್ಧಾಂಗವಾಗಿ ಜ್ಞಾನಕ್ಕಾಗಿ ತಹತಹಿಸುವ ಈ ಜ್ಞಾನಕಾಂಡಗಳನ್ನೇ ಉಪನಿಷತ್ತುಗಳೆಂದು ಕರೆಯುತ್ತಾರೆ. (ಇದನ್ನು ವೇದಾಂತ–ವೇದದ ಕೊನೆ ಎಂತಲೂ ಕರೆಯುವುದುಂಟು). ಆದರೆ ಈ ಉಪನಿಷತ್ತುಗಳ ಹರಹು ಬಹಳ ದೊಡ್ಡದು ಶಂಕರಾಚಾರ್ಯರು ಮುಖ್ಯವಾಗಿ 14 ಉಪನಿಷತ್ತು ಗಳನ್ನು ಪ್ರಮಾಣವಾಗಿ ಅಂಗೀಕರಿಸಿ ಭಾಷ್ಯ ಬರೆದಿದ್ದಾರೆ. ಸಾಮಾನ್ಯವಾಗಿ 10 ಉಪನಿಷತ್ತುಗಳು ದಶೋಪನಿಷತ್ತುಗಳೆಂದು ಪ್ರಸಿದ್ಧವಾಗಿವೆ. ಉಪನಿಷತ್ತುಗಳು 108 ಇವೆಯೆಂದು ಮುಕ್ತಿಕೋಪನಿಷತ್ ಹೇಳುತ್ತದೆ. ವೇದದ ಒಂದೊಂದು ಶಾಖೆಗೊಂದರಂತೆ 1180 ಉಪನಿಷತ್ತುಗಳಿವೆಯೆಂದೂ ಒಂದು ಲೆಕ್ಕವಿದೆ! ಹೀಗೆ ಸಾಕ್ಷಾತ್ಕಾರದ ಹಾದಿಯಲ್ಲಿ ನೂರಾರು ಉಪನಿಷತ್ತುಗಳು ಲೋಕಕ್ಕೆ ಅರ್ಪಿತವಾಗಿವೆ.

ಆದರೆ ಭಗವದ್ಗೀತೆಯು 500 ಶ್ಲೋಕಗಳ ಪುಟ್ಟಗ್ರಂಥ. ಅರ್ಥೈಸಿಕೊಳ್ಳಲು ಬೇರೆರಡಕ್ಕಿಂತಲೂ ಸುಲಭ. ಗೀತೆಯ ಧ್ಯಾನಶ್ಲೋಕವೊಂದರಲ್ಲಿ ಉಪನಿಷತ್ತುಗಳು ಗೋವುಗಳು, ಗೋಪಾಲನಾದ ಕೃಷ್ಣನು ಅದರ ಹಾಲು ಕರೆಯುವನು ಪಾರ್ಥನು ಕರು. ಮಹತ್ತಾದ ಗೀತಾಮೃತವೇ ಹಾಲು. ಜ್ಞಾನಿಗಳು ಅದನ್ನು ಕುಡಿಯುವರು ಎಂಬ ಶ್ಲೋಕವಿದೆ. ಹಾಗಾಗಿಯೇ ಗೀತೆಯ ಮೇಲೆ ಪ್ರವಚನಗಳೂ, ಉಪನ್ಯಾಸಗಳೂ ನಿರಂತರವಾಗಿ ನಡೆಯುತ್ತಿರುವುವು. ಅದನ್ನು ಕುರಿತು ಚಿಂತನೆ ನಡೆಸಿರುವ ಗ್ರಂಥಗಳೂ ಅಸಂಖ್ಯಾತವಾಗಿರುವುವು.

ಗೀತೆಯ ಬೆಳಕು ಮಾತ್ರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಗೀತೆಯ ಅರ್ಥವನ್ನು ತನ್ನ ಬೌದ್ಧಿಕ ಅರಿವಿನ ಹರಿತ ವಿಶ್ಲೇಷಣೆಯ ಅಡಿಯಲ್ಲಿಟ್ಟು ಅದನ್ನು ದಕ್ಕಿಸಿಕೊಂಡ ಓರ್ವ ಅಪೂರ್ವ ಅವತಾರ ಪುರುಷ ಅಭಿನವ ಗುಪ್ತಪಾದ. ಅಭಿನವಗುಪ್ತ ದೂರದ ಕಾಶ್ಮೀರದವನು. ದಕ್ಷಿಣದವರಿಗೆ ಅಷ್ಟಾಗಿ ಪರಿಚಿತನಲ್ಲ. ತಂತ್ರ ಹಾಗೂ ತತ್ವಶಾಸ್ತ್ರವಷ್ಟೇ ಅಲ್ಲದೆ, ಸಂಗೀತ ಮತ್ತು ಅಲಂಕಾರ ಶಾಸ್ತ್ರಗಳನ್ನು ತನ್ನ ಸ್ವಯಂ ಅನುಭವದಿಂದ ಕಂಡುಕೊಂಡ, ಹೊಸ ಪರಿಭಾಷೆಯ ಪದಗಳಿಂದ ಪುನರ್ನವೀಕರಿಸಿದ ಅಭಿನವಕೃತ ಗ್ರಂಥಸಂಪತ್ತಿನ ಮೇಲೊಮ್ಮೆ ಕಣ್ಣಾಡಿಸಿದರೆ ಮನಕ್ಕೆ ದಿಟಕ್ಕೂ ಆಶ್ಚರ್ಯವೆನಿಸುವುದು.

ಅಭಿನವ ಗುಪ್ತನ ವ್ಯಾಪ್ತಿಯನ್ನು ತೋರಿಸುವ ಉದ್ದೇಶವನ್ನು ನೆವವಾಗಿಟ್ಟು ತಂತ್ರ–ತತ್ವಶಾಸ್ತ್ರಗಳ ಪರಿಚಯ, ಅದರ ನಡುವಣ ಸಂಬಂಧ–ಭೇದಗಳನ್ನು ಈಗ ಕೂಲಂಕಷವಾಗಿ ಪರಿಶೀಲಿಸೋಣ.

ಆಗಮ–ತಂತ್ರಶಾಸ್ತ್ರ; ದರ್ಶನ–ತತ್ವಶಾಸ್ತ್ರ: ಅಭಿನವಗುಪ್ತನು ಬಹುದ್ರಷ್ಟನಾಗಿದ್ದನು. ತಂತ್ರವೇ ಆತನ ಮೊದಲ ಲೋಕ. ತಂತ್ರಾಲೋಕ, ತಂತ್ರಸಾರ, ತಂತ್ರೋಚ್ಚಯ, ತಂತ್ರವಟಧಾನಿಕಾ, ಪರಾತ್ರಿಂಶಿಕಾವಿವರಣಃ, ಮುಂತಾದ ಆತನ ಅನೇಕ ಕೃತಿಯ ಹೆಸರುಗಳೇ ಅವನ ತಂತ್ರಶಾಸ್ತ್ರದ ಒಲವನ್ನು ತೋರಿಸುತ್ತದೆ. ಕಾಶ್ಮೀರ ಶೈವ ತಂತ್ರದ/ತತ್ವದ ಪ್ರತಿಪಾದಕನಾದ ಅಭಿನವನಿಗೆ ಮತ್ತು ಆತನ ಮಹತ್ಕೃತಿ ತಂತ್ರಾಲೋಕಕ್ಕೆ ಕಾಶ್ಮೀರದ ಸಂಪ್ರದಾಯಸ್ಥ ಮನೆಗಳಲ್ಲಿ ಇಂದಿಗೂ ಪರಮೋಚ್ಚ ಸ್ಥಾನವಿದೆ. ನಮ್ಮಲ್ಲಿ ಶಂಕರಾಚಾರ್ಯರಿಗೆ ಎಷ್ಟು ಮಹತ್ತಿದೆಯೋ ಉತ್ತರದಲ್ಲಿ ಅಭಿನವನೂ ಅಂತೆಯೇ ಶ್ರೀಕಂಠನ ಅವತಾರವೆಂದೇ ಅವನ ಶಿಷ್ಯಂದಿರಿಂದ ಸ್ತುತಿಸಲ್ಪಟ್ಟಿದ್ದಾನೆ.

ಈಗ ಮೊದಲು ತಂತ್ರ ಎಂದರೇನೆಂದು ನೋಡುವ. ತಂತ್ರ ಎಂಬ ಪದಕ್ಕೆ ಹಲವಾರು ಸಾಮಾನ್ಯ ಮತ್ತು ಅಸಾಮಾನ್ಯ ಅರ್ಥಗಳಿವೆ. ಪ್ರಾಥಮಿಕವಾಗಿ ತಂತ್ರ ಎಂದರೆ ಮಗ್ಗದಲ್ಲಿ ಬಟ್ಟೆ ನೇಯುವ ಎಂಬ ಅರ್ಥವಿದೆ. ಹರಡಿಕೊಂಡಿರುವ ಅಥವಾ ವಿಸ್ತಾರಗೊಳ್ಳುತ್ತಿರುವ ವಿಶಿಷ್ಟ ವಿನ್ಯಾಸಗಳನ್ನೊಳಗೊಂಡ ನೇಯ್ಗೆ ಅಂತಲೂ ಹೇಳಬಹುದು. ಅವನು ಹೆಣೆದ ತಂತ್ರ, ಆ ತಂತ್ರಗಾರಿಕೆಯ ಬಲೆಯಲ್ಲಿ, ಈ ರೀತಿಯ ಪದ ಪ್ರಯೋಗವನ್ನು ನಾವು ನೋಡಿದ್ದೇವೆ. ಅಂದರೆ ಅದೊಂದು ರೀತಿಯ ಕಲೆ. ಯಾವುದೋ ಒಂದು ಉದ್ದೇಶವನ್ನಿಟ್ಟುಕೊಂಡು ರಚಿಸಿದ ವಿನ್ಯಾಸ ಎನ್ನಬಹುದು. ಅದು ಭೌತಿಕವೇ ಇರಬಹುದು. ಉದಾಃಸೀರೆಗಳಲ್ಲಿನ ತರಹೇವಾರಿ ವಿನ್ಯಾಸಗಳು. ಅಥವಾ ಬೌದ್ಧಿಕವೇ ಇರಬಹುದು; ಉದಾಃ ಬೇರೊಬ್ಬರಿಗೆ ಮೋಸಮಾಡಲು ತಂತ್ರ ರೂಪಿಸುವುದು, ಅವನ ಆ ತಂತ್ರದಿಂದ ಎಲ್ಲರಿಗೂ ಒಳ್ಳೆಯದಾಯಿತು. ಮುಂತಾದವು. ಪಂಚತಂತ್ರ, ರಾಜತಾಂತ್ರಿಕ, ಕುತಂತ್ರ, ತಾಂತ್ರಿಕ ಶಿಕ್ಷಣ ಮುಂತಾದ ಹತ್ತು ಹಲವು ಪದಪ್ರಯೋಗದಿಂದ ಈ ಶಬ್ದವು ಯೋಗ, ಸಂಸ್ಕಾರ ಮುಂತಾದ ಪದಗಳಿಗಿರುವಂತೆ ಪ್ರಸ್ತುತ ವರ್ತಮಾನ ಪ್ರಪಂಚದಲ್ಲೂ ಬಹು ವಿಶಾಲವಾದ ಅರ್ಥವ್ಯಾಪ್ತಿಯನ್ನು ಹೊಂದಿ ಪ್ರಚಲಿತವಾಗಿದೆ. ಈಗ ತಂತ್ರಶಾಸ್ತ್ರ ಎಂಬ ವಿಷಯಕ್ಕೆ ಬರೋಣ. ಮಹರ್ಷಿ ಕಾತ್ಯಾಯನರು ತಂತ್ರ ಎಂದರೆ ಅನುಕ್ರಮವಾಗಿ ಜರುಗುವ ಕರ್ಮ/ಕ್ರಿಯೆಗಳು ಎಂದಿದ್ದಾರೆ. ಅಂದರೆ ಅಲ್ಲಿಯೂ ಘಟನಾವಳಿಗಳನ್ನು ವ್ಯವಸ್ಥಿತವಾಗಿ ನೇಯಲಾಗಿದೆ.

ಅದೊಂದು ನಡಾವಳಿಯೆನ್ನ ಬಹುದೇನೋ? ಇದಾದಮೇಲೆ ಇದು ಎಂಬ ಸಂಯೋಜನೆ ಅಲ್ಲಿದೆ. ಆಯುರ್ವೇದದಲ್ಲಿ ತಂತ್ರ ಎಂಬ ಪದಕ್ಕೆ ದೇಹ ಎಂಬ ಅರ್ಥವಿದೆ. ದೇಹ ಎಂದರೆ ಹಲವಾರು ಧಾತುಗಳು, ದೋಷಗಳು, ಮಲಗಳು ಮುಂತಾದುವುಗಳಿಂದ ರಚಿತವಾದದ್ದು. ಇಲ್ಲಿಯೂ ರಚನೆಯೇ ಅಡಗಿದೆ. ಒಟ್ಟಿನಲ್ಲಿ ತಂತ್ರಶಾಸ್ತ್ರ ಎಂದರೆ ರಚನೆಗಳ ಆಚರಣೆ. ಆಧ್ಯಾತ್ಮಿಕ ಅರ್ಥದಲ್ಲಿ ಹೇಳುವುದಾದರೆ ಎಲ್ಲೆಡೆ ದೈವಿಕತೆಯ ಸಾಕ್ಷಾತ್ಕಾರವನ್ನು ಸಕಲ ಕ್ರಿಯೆಗಳಲ್ಲಿಯೂ ಸಾಧ್ಯವಾಗಿಸುವುದು ಅದರ ಮುಖ್ಯ ಧ್ಯೇಯ. ತಂತ್ರವು ಲೌಕಿಕ, ಆಧ್ಯಾತ್ಮಿಕ ಮುಂತಾಗಿ ಬದುಕಿನ ಅನುಭವಗಳನ್ನು ಬಿಡಿ ಬಿಡಿ ಮಾಡುವುದಿಲ್ಲ. ಇಡೀ ಬದುಕೇ ಪವಿತ್ರ, ಸುಂದರ, ದೈವಿಕ ಎಂಬುದು ತಂತ್ರದ ಮುಖ್ಯ ನಿಲುವು.

ಶ್ರೀ ಬನ್ನಂಜೆಯವರ ಅಭಿಪ್ರಾಯವನ್ನು ಹೇಳುವುದಾದರೆ ತಂತ್ರ ಶಬ್ದವನ್ನು ನಾವು ಈವತ್ತಿಗೂ ಬಹುವ್ಯಾಪಕವಾದ ಅರ್ಥದಲ್ಲಿ ಬಳಸುತ್ತಿದ್ದೇವೆ. ಜೀವನತಂತ್ರ, ರಾಜ್ಯತಂತ್ರ ಮೊದಲಾದೆಡೆಗಳಲ್ಲಿ ಈ ಶಬ್ದ ಬಹುದೊಡ್ಡ ಅರ್ಥವನ್ನು ಕೊಡುವ ಶಕ್ತಿಯನ್ನು ಪಡೆದಿದೆ. ಯಾವುದೇ ಒಂದರ ಎಲ್ಲ ವಿಧದ ಸುಗಮತೆಗೆ ಬೇಕಾದ ಸಾಧನಗಳನ್ನು ಉಪಾಯಗಳನ್ನು ವಿಧಾನಗಳನ್ನು 'ತಂತ್ರ' ಶಬ್ದ ವಿವರಿಸುತ್ತದೆ. ಇಹದ ಸಾಧಕವಾದ ವ್ಯವಹಾರಜ್ಞಾನ ಮತ್ತು ಪರದ ಸಾಧಕವಾದ ಆಧ್ಯಾತ್ಮವಿದ್ಯೆಗಳನ್ನು ಯಾವುದು ಪ್ರತಿಪಾದಿಸುವುದೋ ಅವೆಲ್ಲವೂ ತಂತ್ರಶಾಸ್ತ್ರ ವೆನಿಸುತ್ತದೆ. ತಂತ್ರ ಮತ್ತು ಆಗಮ ಶಬ್ದಗಳು ಕೆಲವೊಮ್ಮೆ ಒಂದೇ ಅರ್ಥದಲ್ಲಿ ಬಳಕೆಯಾಗಿವೆ. ತಂತ್ರ ಅಥವಾ ಆಗಮ ಎಂದರೆ ಒಂದು ನಿರ್ದಿಷ್ಟವಾದ ಗ್ರಂಥರಾಶಿಯಲ್ಲ. ಜೀವನೋಪ ಯೋಗಿಯಾದ ಎಲ್ಲ ಬಗೆಗಳನ್ನೂ ಬೋಧಿಸುವ ಜೀವನತಂತ್ರವೇ ತಂತ್ರಶಾಸ್ತ್ರ. ಯಾವುದು ನಮಗೆ ಅರಿವನ್ನು ತಂದುಕೊಡುವುದೋ, ಕಷ್ಟಕಾಲದಲ್ಲಿ ಆಸರೆಯಾಗುವುದೋ ಅದೆಲ್ಲವೂ ತಂತ್ರವೇ. ಪ್ರಾಚೀನರ ದೃಷ್ಟಿಯಲ್ಲಿ ಜೀವನೋಪಯೋಗಿ ಎನಿಸಿದ್ದೆಲ್ಲ ತಂತ್ರ ಎಂದು ಅವರು ಪರಿಗಣಿಸಿದ್ದಾರೆ. ತಂತ್ರ ಪದದ ನಿರುಕ್ತಿಯನ್ನು (ಅರ್ಥ) ತಂತ್ರ ಗ್ರಂಥಗಳಲ್ಲಿ ಹೇಳುವುದಾದರೆಃ ತತ್ವಜ್ಞಾನವನ್ನು, ಮಂತ್ರಜ್ಞಾನವನ್ನು ನಮ್ಮಲ್ಲಿ ಹರಡಿಸಿ ಸಿದ್ಧಿಯ ಪಥಕ್ಕೆ ನಮ್ಮನ್ನು ಕರೆದೊಯ್ಯುವ ಶಾಸ್ತ್ರ ತಂತ್ರಶಾಸ್ತ್ರ. ಆಪತ್ತಿನಲ್ಲಿ ಬಾಂಧವನಂತೆ ಬೆಂಗಾವಲಾಗಿ ಕಾಪಾಡುವ ಶಾಸ್ತ್ರ ತಂತ್ರಶಾಸ್ತ್ರ.

ಇದು ಬನ್ನಂಜೆಯವರ ಮಾತಾದರೆ, ನಮ್ಮ ನಡುವೆ ಇರುವ ಅಪರೂಪದ ಅನುಭಾವಿ ಲಕ್ಷ್ಮೀಶ ತೋಳ್ಪಾಡಿಯವರ ನುಡಿಗಳು ಹೀಗಿವೆ. 'ತಂತ್ರ' ಕರ್ಮಕಾಂಡವೂ ಅಲ್ಲ, ಬರಿಯ ಜ್ಞಾನಕಾಂಡವೂ ಅಲ್ಲ. ಇವೆರಡರ ಅರ್ಥಪೂರ್ಣ ಸಮನ್ವಯದಿಂದ ಹುಟ್ಟಿಕೊಂಡ ಉಪಾಸನಾಕಾಂಡ. ನಮಗೆ ಬೇಕಾದುದನ್ನು ಪರೋಕ್ಷಶಕ್ತಿಗಳ ನೆರವಿನಿಂದ ಪಡೆದು ಕೊಳ್ಳಬಹುದು. ಪಡೆದುಕೊಳ್ಳ ಬೇಕೆನ್ನುವ ಕರ್ಮಕಾಂಡವು ಪ್ರತ್ಯಕ್ಷ–ಪರೋಕ್ಷಗಳಿಗೆ, ಕೊಡು–ಕೊಳೆ ಸಂಬಂಧವಲ್ಲದೆ ಅದಕ್ಕಿಂತ ಬೇರೆಯಾದ ಸಂಬಂಧವನ್ನು ಬಗೆಯಲು ಅಶಕ್ತವಾಗಿದೆ. 'ತಂತ್ರ'ವಾದರೋ ಈ ಕೊಡು–ಕೊಳೆ ಸಂಬಂಧವನ್ನೊಪ್ಪಿಯೂ ಪರೋಕ್ಷಶಕ್ತಿಗಳ ಜತೆ ಬೇರೆಯೇ ಆದ ಸಂಬಂಧವನ್ನು ಕಂಡರಿಸುತ್ತದೆ ಮತ್ತು ಆ ಪರೋಕ್ಷಶಕ್ತಿಗಳು ನಮ್ಮಿಂದ ಬೇರೆಯಲ್ಲ ಎಂಬಷ್ಟು ದೂರ 'ತಂತ್ರ' ನಮ್ಮನ್ನು ಒಯ್ಯುತ್ತದೆ. ಹಾಗೆಯೇ ನಮ್ಮ ಪ್ರಜ್ಞೆಯನ್ನು (ಸಂವಿತ್) ಎಲ್ಲ ಉಪಾಧಿಗಳಿಂದ ಬಿಡುಗಡೆಗೊಳಿಸಬೇಕೆನ್ನುವ ಜ್ಞಾನಕಾಂಡದ ಆದರ್ಶ ವನ್ನೊಪ್ಪಿಯೂ ತಂತ್ರವು ಈ ಬಿಡುಗಡೆ ಯನ್ನು ಸೃಷ್ಟಿಮುಖದಿಂದ ಸಾಧಿಸಬಹುದೆನ್ನುತ್ತದೆ. ಹೀಗೆ 'ತಂತ್ರ'ಕ್ಕೆ ಯಾವುದೂ ಹೊರತಲ್ಲ.

'ತಂತ್ರ' ಪದದ ಅನೇಕಾರ್ಥಗಳಲ್ಲಿ 'ವಿಸ್ತಾರಗೊಳ್ಳುವಿಕೆ' ಎನ್ನುವುದು ಮುಖ್ಯವಾದ ಅರ್ಥವಾಗಿದೆ ಎಂದು ಲಕ್ಷಿಸಬೇಕು ಮತ್ತು ವಿಸ್ತಾರ, ವೈವಿಧ್ಯ, ಬಹುರೂಪತೆ ಎನ್ನುವುದು ಸೃಷ್ಟಿಯ ಗುಣ ಎನ್ನುವುದನ್ನು ಲಕ್ಷಿಸಬೇಕು. ವಿಸ್ತರಿಸುವುದೆಂದರೆ (ವಿಸ್ತರಿಸುತ್ತ ಹೋದಂತೆ) ವಿರೋಧಗಳನ್ನು, ತಡೆಗಳನ್ನು ಮೀರುವುದು ಎಂದೇ ಅರ್ಥವಾಗುತ್ತದೆ. ಇದಕ್ಕನುಗುಣ

ವಾಗಿಯೇ 'ಭೋಗ' ಮತ್ತು 'ಮೋಕ್ಷ'ಗಳು ಪರಸ್ಪರ ವಿರುದ್ಧ ಸ್ಥಿತಿಗಳೆಂದು 'ತಂತ್ರ' ಬಗೆಯುವುದಿಲ್ಲ. ಅವು ವಿರುದ್ಧ ಸ್ಥಿತಿಗಳೆಂದು, ಒಂದಿದ್ದರೆ ಇನ್ನೊಂದಿಲ್ಲವೆಂದು ಬಗೆಯುವ ಶ್ರದ್ಧೆಗಳೇ ಇರುವಾಗ, 'ತಂತ್ರ'ದ ಈ ನಿಲುವು ಕ್ರಾಂತಿಕಾರಕವಾದ ಹೊಸ ಕಾಣ್ಕೆಯಾಗಿದೆ. 'ಶ್ರೀಸುಂದರೀ ಸೇವನತತ್ಪರಾಣಾಂ ಭುಕ್ತಿಶ್ಚ, ಮುಕ್ತಿಶ್ಚ ಕರಸ್ಥ ಏವ'– ಶ್ರೀವಿದ್ಯೆಯ ಉಪಾಸಕನಿಗೆ ಭುಕ್ತಿ, ಮುಕ್ತಿ ಗಳೆರಡೂ ಅಂಗೈಯಲ್ಲಿ ನೆಲಸಿವೆ– ಎನ್ನುವುದು 'ತಂತ್ರ'ದ ಮಾತು. ಭರವಸೆ, ಕಾಣ್ಕೆ. ಅದೇ ಉಪಾಸನಾಕಾಂಡದ ನೆಲೆ. ವ್ಯಾಸ–ಕುಮಾರವ್ಯಾಸರು ಚಿತ್ರಿಸಿದ ಕೃಷ್ಣನಂತೆ, ನಮ್ಮ ರತ್ನಾಕರವರ್ಣಿ ಚಿತ್ರಿಸಿದ ಭರತನಂತೆ, ಭೋಗ–ಯೋಗ ಸಮನ್ವಯದ ಹಿಂದಿನ ಅವಿಭಜನೀಯ ಅಖಂಡದೃಷ್ಟಿಯೇ ತಂತ್ರೋಪಾಸನೆಯ ಸಾಧ್ಯತೆಯಾಗಿದೆ.

ಈ ಮೇಲಿನ ವಾಗೋದ್ಧರಣೆಯನ್ನು ಪರಿಶೀಲಿಸುವಾಗ ತಂತ್ರಾಗಮಗಳ ಮಹತ್ವ ಹಿಂದೆ ಎಷ್ಟಿತ್ತೆಂಬುದು ನಮ್ಮ ಅರಿವಿಗೆ ಬರಬಹುದೇನೋ? ಸನಾತನ ಸಂಪ್ರದಾಯದ ದೈವಗಳನ್ನು ಅನುಸರಿಸಿ ಬಂದ ತಂತ್ರಮಾರ್ಗಗಳ ಬಗ್ಗೆ ಹೇಳುವುದಾದರೆ : ಶಿವೋಪಾಸನೆಯನ್ನು ಕುರಿತ ಶೈವ ತಂತ್ರ, ಶಕ್ತಿ ಉಪಾಸನೆಯನ್ನು ಕುರಿತ ಶಾಕ್ತ, ವೈಷ್ಣವರ– ಪಾಂಚರಾತ್ರ, ವೈಖಾನಸ, ಭಾಗವತಗಳು, ಗಣಪತಿಯನ್ನು ಕುರಿತ ಗಾಣಪತ್ಯ ಮುಂತಾಗಿ ಅನೇಕ ಮಾರ್ಗಗಳಿವೆ. ಇದಲ್ಲದೆ ಜೈನ ಬೌದ್ಧರ ತಂತ್ರಗಳೂ ಸಹ ಅವರ ಸಮುದಾಯದೊಳಗೆ ಆಚರಣೆಯಲ್ಲಿವೆ. ಒಟ್ಟಿನಲ್ಲಿ ತಂತ್ರಶಾಸ್ತ್ರವೆಂದರೆ ದೈವೀ ಸಾಕ್ಷಾತ್ಕಾರದ ಅನುಭೂತಿಗೆ ಇರುವ ವಿಸ್ತೃತ ಕೈಪಿಡಿ. ಸಾಕ್ಷಾತ್ಕರಿಸಿ ಕೊಂಡವರ ಮಾರ್ಗಗಳಿಗನುಸಾರಿಯಾಗಿ ವಿಧ ವಿಧವಾಗಿ ಅದು ರೂಪುಗೊಂಡಿದೆ. ಆಗಮ ಎಂಬ ಪದವು ಹೆಚ್ಚಾಗಿ ದೇವಾಲಯಗಳ ಸಮಸ್ತ ವಿಧಿ, ವಿಧಾನಗಳನ್ನು ಕುರಿತೇ ಬಳಕೆಯಾಗಿದೆ ಯೆನ್ನಬಹುದು. ದೇವಾಲಯವನ್ನು ಕಟ್ಟಲು ಪ್ರಶಸ್ತವಾದ ಭೂಮಿ, ಕಟ್ಟಲು ತೊಡಗುವ ಮೊದಲು ಮಾಡಬೇಕಾದ ಶುದ್ಧೀಕರಣ, ವಾಸ್ತು ವಿನ್ಯಾಸ, ನಕ್ಷೆ, ಗುಡಿ ಎದುರಿಸ ಬೇಕಾದ ದಿಕ್ಕು, ಕಟ್ಟಡದ ವಿವಿಧ ಅಂಗಗಳ ಪ್ರಮಾಣ, ಮೂಡಿಸಬಹುದಾದ ಅಲಂಕರಣ, ವಿಗ್ರಹ ಪ್ರತಿಷ್ಠೆ, ಗರ್ಭಗುಡಿಯಲ್ಲಿ ಮತ್ತು ಆವರಣದಲ್ಲಿ ಇರಿಸಬೇಕಾದ ಮೂರ್ತಿಗಳು, ನಿತ್ಯಾರ್ಚನೆಯ ವಿವರಗಳು, ಉತ್ಸವಗಳು, ಮೊದಲಾದ ವಿಷಯಗಳೆಲ್ಲ ಆಗಮ ಗ್ರಂಥಗಳಲ್ಲಿ ಬರುತ್ತವೆ.

ಐತಿಹಾಸಿಕವಾಗಿ ನೋಡುವಾಗ ಮೊದಲಿಗೆ ಶಂಕರರು ದೇಶದಲ್ಲಿ ಹಲವು ಕಡೆ ದೇವತಾ ಮೂರ್ತಿಗಳ ಪ್ರತಿಷ್ಠಾಪನೆ; ಸ್ತೋತ್ರಮಾಲೆಗಳ ರಚನೆ, ಪಂಚಾಯತನ (ಆದಿತ್ಯ, ಅಂಬಿಕಾ, ವಿಷ್ಣು, ಗಣನಾಥ, ಮಹೇಶ್ವರ) ಪೂಜೆಯ ಮುಖಾಂತರ ದೈವದ ಉಪಾಸನೆ, ಮುಂತಾಗಿ ಹಲವಾರು ವಿಧಗಳಿಂದ ತಂತ್ರಪ್ರಕಾರವಾದ ಪೂಜೆಯನ್ನು ಹೊಸರೀತಿಯಲ್ಲಿ ಪುನರುಜ್ಜೀವನ ಗೊಳಿಸಿದರು. ಆನಂತರ ರಾಮಾನುಜಾಚಾರ್ಯರ ಗುರುಗಳಾದ ಯಮುನಾಚಾರ್ಯರು ಆಗಮ ಪ್ರಾಮಾಣ್ಯವೆಂಬ ಗ್ರಂಥದ ಮುಖಾಂತರವಾಗಿ ಆಗಮ ವಿಧಿಗೂ ನಿಗಮದಷ್ಟೇ ಬೆಲೆಯಿದೆಯೆಂದು ಪ್ರತಿಪಾದಿಸಿದರು. ನಿಗಮಗಳೆಂದರೆ ವೇದ–ಶ್ರುತಿ, ಸ್ಮೃತಿಗಳು. ಹಾಗಾಗಿ ವೇದಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತಂತ್ರಗಳನ್ನು ಕೀಳಾಗಿ ಕಂಡಿರುವ ಸಂದರ್ಭಗಳೂ ಕೂಡ ಬಹಳ ಹಿಂದೆಯೇ ಕಂಡುಬಂದಿದೆ. ರಾಮಾನುಜಾಚಾರ್ಯರ ಕಾಲದಲ್ಲಿ ನೂರಾರು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡವು. ಆಚಾರ್ಯ ಮಧ್ವರಂತೂ ತಂತ್ರಸಾರ–ಸಂಗ್ರಹ ಎಂಬ ಕೃತಿಯನ್ನು ರಚಿಸಿ ಅದರೊಳಗೆ ಪೂಜಾವಿಧಿ, ಹೋಮ–ಹವನದ ರಚನೆ–ಆಚರಣಾ ವಿಧಿಗಳು, ದೇವಾಲಯದ ಆರಾಧನೆಯ ಕುರಿತಾದ ಸಮಸ್ತ ವಿಧಿಗಳು, ದೇವತೆಗಳ ಧ್ಯಾನ ಮಂತ್ರಗಳು, ನ್ಯಾಸಗಳು ಮುಂತಾಗಿ ತಂತ್ರಶಾಸ್ತ್ರದ ಸಕಲ ಸ್ವರೂಪವನ್ನೂ ಅದರೊಡಲಲ್ಲಿ ತುಂಬಿದ್ದಾರೆ. ಹೀಗೆ ಇನ್ನೂ ಅನೇಕಾನೇಕ ಆಚಾರ್ಯರುಗಳು ತಂತ್ರಾಗಮಗಳ ಕುರಿತಾಗಿ ತಮ್ಮ ಕಾಣ್ಕೆಯನ್ನು ನೀಡಿದ್ದಾರೆ.

ತಂತ್ರದ ಮೂಲ ಮತ್ತು ವಿಕಾಸಕ್ಕೆ ಸರಿಯಾದ ಇತಿಹಾಸವು ಇನ್ನೂ ಸ್ಪಷ್ಟವಾಗಿ ದೊರೆತಿಲ್ಲ

ವಾದರೂ ಇದು ವೇದಕಾಲದ ಜೊತೆ ಜೊತೆಗೇ ಬೆಳವಣಿಗೆ ಹೊಂದಿತೆನ್ನಲಡ್ಡಿಯಿಲ್ಲ. ವೇದಗಳಲ್ಲಿ ವೈರಾಗ್ಯವು ಮೋಕ್ಷಕ್ಕೆ ಮುನ್ನುಡಿಯಾಗಿದ್ದರೆ ತಂತ್ರದಲ್ಲಿ ಕೆಲವೊಮ್ಮೆ ವಿಲಾಸವೂ ಸಾಧನೆಗೆ ನೆರವಾಗುವಂತಿದೆ. ಉಪನಿಷತ್ತುಗಳು ಆಧ್ಯಾತ್ಮದ ಮಜಲಿನಲ್ಲಿ ಮಾತ್ರ ಚಲಿಸಿದರೆ ತಂತ್ರಗಳು ಭೌತಿಕ, ಮಾನಸಿಕ ಮಟ್ಟದಲ್ಲಿಯೂ ಆಧ್ಯಾತ್ಮ ಪ್ರಜ್ಞೆಯ ಅರಿವು ಸಾಧ್ಯವಿದೆ ಯೆಂಬುದರ ಕುರಿತು ಒಲವು ತೋರುತ್ತವೆ. ಭಾವನೆಗಳನ್ನು ತಿರಸ್ಕರಿಸುವ ನಿಗಮ ಅಥವಾ ವೇದಗಳಿಗೆ ವಿವಾದಿಯಾಗಿ ಆಗಮ ಅಥವಾ ತಂತ್ರ ಬೆಳೆದಿದೆ. ಎರಡರ ಉದ್ದೇಶವೂ ಮೋಕ್ಷವೇ ಆಗಿದೆ. ಸೌಂದರ್ಯಲಹರಿ, ಶ್ಯಾಮಲಾದಂಡಕ ಮುಂತಾದ ಪ್ರಸಿದ್ಧ ಸ್ತೋತ್ರಗಳಿಂದ ತಾಂತ್ರಿಕ ಕ್ಷೇತ್ರದ ಅದ್ವಿತೀಯರಾಗಿ, ಉಪನಿಷತ್ತುಗಳಿಗೆ ಭಾಷ್ಯವನ್ನು ರಚಿಸಿ ದರ್ಶನಶಾಸ್ತ್ರದಲ್ಲಿಯೂ ಆಚಾರ್ಯರಾಗಿರುವ ಶಂಕರರಂತೆಯೇ ತಂತ್ರಾಲೋಕ ಮತ್ತು ಪ್ರತ್ಯಭಿಜ್ಞಾದರ್ಶನಗಳನ್ನು ರಚಿಸಿ ಅಭಿನವನೂ ಉಭಯಶಾಸ್ತ್ರ ವಿಶಾರದನಾಗಿದ್ದಾನೆ.

ನಮ್ಮಲ್ಲಿ ತಂತ್ರ ಪದವೆತ್ತುತ್ತಿದ್ದಂತೆಯೇ ಒಂದು ರೀತಿಯ ಗಾಬರಿಗೊಳ್ಳುವ, ಅಸಹ್ಯವೆಂದು ಮಡಿಯಾಗುವ ಸನ್ನಿವೇಶ ಸಾಮಾನ್ಯವೆಂಬಂತೆ ಚಾಲ್ತಿಯಲ್ಲಿದೆ. ಅದಕ್ಕೆ ಕಾರಣ ನಮಗೆ ವಿಕೃತವೆನಿಸಿರುವ ಆದರೆ ಆ ಮಾರ್ಗದಲ್ಲಿ ನಡೆಯುವ ಸಾಧಕರಿಗೆ ಅಗತ್ಯವೆನಿಸಿದ ಕೆಲವು ಆಚರಣೆಗಳು. ಪಂಚ'ಮ'ಕಾರಗಳಿಂದ (ಮದ್ಯ, ಮಾಂಸ, ಮತ್ಸ್ಯ, ಮುದ್ರಾ, ಮೈಥುನ) ಕೂಡಿದ ಸಾಧನೆಗಳು ಯಾಕೆ ಕಾಲಾಂತರದಲ್ಲಿ ದುರ್ಗತಿಗೀಡಾಯಿತು ಎಂದು ಅಭಿನವಗುಪ್ತನನ್ನು ಕುರಿತು ಬರೆದಿರುವ ಖ್ಯಾತ ವಿದ್ವಾಂಸರಾದ ಜಿ.ಟಿ.ದೇಶಪಾಂಡೆಯವರು ತಮ್ಮ (ಅಭಿನವಗುಪ್ತ: ಅನುವಾದ: ಎನ್. ಬಾಲಸುಬ್ರಹ್ಮಣ್ಯ) ಗ್ರಂಥದಲ್ಲಿ ಸವಿಸ್ತಾರವಾಗಿ ವಿಶದಪಡಿಸಿದ್ದಾರೆ. ತಂತ್ರದ ಕುರಿತಾದ ಪೂರ್ವಗ್ರಹಗಳನ್ನು ಹೋಗಲಾಡಿಸಲು ಅವರ ಮಾತುಗಳನ್ನೇ ಇಲ್ಲಿ ನೇರವಾಗಿ ಉದ್ಧರಿಸುವುದು ನನಗೆ ಬಹಳ ಉಚಿತವೆಂದೇ ತೋರುತ್ತದೆ.

"ಅದ್ವೈತ ತಂತ್ರಗಳು ವಾಸ್ತವಿಕ ಜೀವನದಲ್ಲಿ ಜೀವಬ್ರಹ್ಮರ ಐಕ್ಯವನ್ನು ಕಂಡುಕೊಳ್ಳುವ ಎಂದರೆ ಪರಿಪೂರ್ಣ ಯೋಗಿಯ ಸ್ಥಾನವನ್ನು ಪಡೆಯುವ ಸಾಧನೆಯ ತಿಳಿಸುತ್ತವೆ. ಅಭಿನವ ಗುಪ್ತನು ಅನುಸರಿಸಿದ ಕ್ರಮ ಮತ್ತು ಕುಲ ಸಿದ್ಧಾಂತಗಳು ಅದ್ವೈತ ತಂತ್ರದ ಸೋದರ ಸಿದ್ಧಾಂತಗಳು. ಎರಡೂ ಅದ್ವೈತ ಭಾವನೆಯನ್ನು ಪ್ರತಿಪಾದಿಸುತ್ತದೆ. ದ್ವಾದಶಕಾಳಿಯರ ಕಲ್ಪನೆ ಎರಡಕ್ಕೂ ಸಮಾನ. ಆದರೆ ಕೆಲವು ಅಂಶಗಳಲ್ಲಿ ವ್ಯತ್ಯಾಸವೂ ಇದೆ. ಉದಾಹರಣೆಗೆ, ಕುಲ ಸಿದ್ಧಾಂತದಲ್ಲಿ ಬ್ರಹ್ಮ ಸಾಕ್ಷಾತ್ಕಾರದ ನೇರ ಸಾಧನವೆಂದರೆ ಅಹಂನ ಮೇಲೆ ಧ್ಯಾನ (ಅಹಂ ಪರಾಮರ್ಶ). ಇದನ್ನು ಶಾಂಭವೋಪಾಯ ಎಂದು ಕರೆದಿದೆ. ಆದರೆ ವಿಕಲ್ಪಭಾವನೆಯ ಶೋಧನೆಯ (ವಿಕಲ್ಪ ಸಂಸ್ಕಾರದ) ಕ್ರಮವಾದ ಹಂತಗಳ ಮೂಲಕ ಸಾಕ್ಷಾತ್ಕಾರದ ಮಾರ್ಗವನ್ನು ಕ್ರಮ ಸಿದ್ಧಾಂತ ಸಮರ್ಥಿಸುತ್ತದೆ. ಇದನ್ನು ಶಾಕ್ತೋಪಾಯ ಎಂದು ಕರೆದಿದೆ. ಈ ಸಿದ್ಧಾಂತವನ್ನು "ಕ್ರಮ" ಎಂದು ಕರೆದಿರುವುದಕ್ಕೆ ಕಾರಣ ಅದು ಮೋಕ್ಷವನ್ನು ಹಂತಗಳ ಮೂಲಕ ಮಾತ್ರ ಒಪ್ಪುವುದು. ದ್ವಾದಶಕಾಳಿಯರ ಪೂಜೆ ಕ್ರಮದ ಒಂದು ಮುಖ್ಯ ಅಂಶ. ಆದ್ದರಿಂದ ಈ ಸಿದ್ಧಾಂತದಲ್ಲಿ ಕರ್ಮಾಚರಣೆಗೆ ಬಹಳ ಪ್ರಾಮುಖ್ಯವಿದೆ. ಆದರೆ ಕುಲಸಿದ್ಧಾಂತ ತನ್ನ ಅನುಯಾಯಿಗಳಿಗೆ ಯಾವುದೇ ಕ್ರಮಾಚರಣೆಗಳನ್ನು ನಿಷೇಧಿಸುತ್ತದೆ.

ಕ್ರಿ.ಶ.7 ರಿಂದ 12ನೆಯ ಶತಮಾನದವರೆಗಿನ ಅವಧಿ ಕಾಶ್ಮೀರದಲ್ಲಿ ತೀವ್ರ ತಾತ್ವಿಕ ಚಟುವಟಿಕೆಗಳ ಅವಧಿಯಾಗಿದ್ದಿತು. ಆಗಮಗಳನ್ನು ಆಧರಿಸಿದ ಅನೇಕ ಸಿದ್ಧಾಂತಗಳು ಉದಯಿಸಿದವು ಮತ್ತು ಆಧ್ಯಾತ್ಮಿಕ ಪ್ರಯೋಗಗಳ ಫಲಿತಾಂಶಗಳು ಆ ಅವಧಿಯಲ್ಲಿ ತಂತ್ರಗಳೆಂಬ ವಿಭಿನ್ನ ಸಿದ್ಧಾಂತಗಳಾಗಿ ರಚಿತವಾದವು. ಕೆಲವು ಸಿದ್ಧಾಂತಗಳು ಶಿವನನ್ನು ಪರತತ್ವವೆಂದು ಪರಿಗಣಿಸಿದರೆ, ಇತರ ಸಿದ್ಧಾಂತಗಳು ಶಕ್ತಿಯನ್ನು ಪರತತ್ವವೆಂದು ಪರಿಗಣಿಸಿದವು. ಕಾಮರೂಪ

(ಅಸ್ಸಾಂ)ದಲ್ಲಿ ಜನಿಸಿದ ಕುಲ ಎಂಬ ಹೊಸ ಸಿದ್ಧಾಂತವು ಕ್ರಮೇಣ ಕಾಶ್ಮೀರಕ್ಕೆ ಪ್ರವೇಶ ಪಡೆಯಿತು. ಕಾಶ್ಮೀರದಲ್ಲಿ ಅಸ್ಸಾಂನ ಕುಲ ಸಿದ್ಧಾಂತವನ್ನು ಪ್ರತಿಪಾದಿಸುವ "ಪರಾತ್ರಿಂಶಿಕಾ"ದ ಮೇಲೆ ಅನೇಕ ವ್ಯಾಖ್ಯಾನಗಳು ರಚಿತವಾದ ಸಂಗತಿ ಕಾಶ್ಮೀರದ ಸಿದ್ಧರು ಕುಲಸಿದ್ಧಾಂತವನ್ನು ಒಂದು ಮುಖ್ಯ ಸಿದ್ಧಾಂತವನ್ನಾಗಿ ಪರಿಗಣಿಸಿದ್ದನ್ನು ತೋರಿಸುತ್ತದೆ.

ಕ್ರಮಸಿದ್ಧಾಂತದಲ್ಲಿಯೇ ಎರಡು ಸಂಪ್ರದಾಯಗಳಿವೆ. ಒಂದು ಶಿವನನ್ನು ಪರತತ್ವವನ್ನಾಗಿ ಪರಿಗಣಿಸಿತು. ಇನ್ನೊಂದು ಕಾಳಿ ಅಥವಾ ಕಾಲಸಂಕರ್ಷಿಣಿ ಎಂಬ ಶಕ್ತಿಯನ್ನು ಪರಮ ಸತ್ಯವನ್ನಾಗಿ ಭಾವಿಸಿತು. ಕ್ರಮಸಿದ್ಧಾಂತದ ಆಗಮಗಳನ್ನು ಪಾರ್ವತಿ ಅಥವಾ ಭೈರವ ಪ್ರಕಾರ ಗೊಳಿಸಿದ್ದಾರೆ. ಶಕ್ತಿಯನ್ನು ಪರತತ್ವವೆಂದು ಪರಿಗಣಿಸಿದ ಶಾಖೆ ಕಾಲ ಕ್ರಮದಲ್ಲಿ ಶಾಕ್ತಮಾರ್ಗ ಎಂದು ಪ್ರಸಿದ್ಧವಾಯಿತು.

ಶಾಕ್ತಸಿದ್ಧಾಂತದಲ್ಲಿ ಎರಡು ವಿಲಕ್ಷಣ ಪ್ರವೃತ್ತಿಗಳಿವೆ. ಒಂದನೆಯದು ಪರತತ್ವವು ಸ್ತ್ರೀ ರೂಪವಾಗಿ ಪರಿಗಣಿಸುತ್ತದೆ ಮತ್ತು ಎರಡನೆಯದು, ಅದು ತನ್ನ ಆಚಾರದಲ್ಲಿ "ಪಂಚ ಮಕಾರ"ಗಳನ್ನು ಬಳಸುತ್ತದೆ. ಕ್ರಮ ಮತ್ತು ಕುಲಪದ್ಧತಿಗಳು ಎರಡೂ ಈ ವೈಲಕ್ಷಣ್ಯಗಳನ್ನು ಹೊಂದಿವೆ. ಪಂಚ ಮಕಾರಗಳೆಂದರೆ 'ಮ'ದಿಂದ ಪ್ರಾರಂಭವಾಗುವ ಐದು ಈ ಶಬ್ದಗಳು. ಅವು 1.ಮತ್ಸ್ಯ (ಮೀನು), 2.ಮುದ್ರಾ (ಕೈಗಳು ಮೊದಲಾದುವುಗಳ ಸಾಂಕೇತಿಕ ಪ್ರದರ್ಶನ), 3.ಮಾಂಸ, 4. ಮದಿರಾ (ಮದ್ಯ), 5.ಮೈಥುನ (ಸಂಭೋಗ). ಕಾಳಿಯನ್ನು ಪರತತ್ವವನ್ನಾಗಿ ಅಂಗೀಕರಿಸಿದ ಸಂಪ್ರದಾಯವು ಕರ್ಮಾಚರಣೆಯಲ್ಲಿ ಮದ್ಯ, ಮಾಂಸ ಮತ್ತು ಮಹಿಳೆಯ ಬಳಕೆಯನ್ನು ಪ್ರತಿಪಾದಿಸಿತು. ಆದ್ದರಿಂದ ಶಾಕ್ತಮಾರ್ಗ ಪ್ರಾಚೀನ ಮತ್ತು ಸಮಕಾಲೀನ ಚಿಂತಕರ ಖಂಡನೆಗೆ ಒಳಗಾಯಿತು. ಏಕೆಂದರೆ ಅವರ ಪ್ರಕಾರ ಕರ್ಮಾಚರಣೆಯಲ್ಲಿ ಪಂಚಮಕಾರಗಳ ಉಪಯೋಗ ನೈತಿಕ ಪಾತಿತ್ಯವನ್ನು ಒಳಗೊಳ್ಳುತ್ತದೆ ಎಂದು. ಅಭಿನವಗುಪ್ತನ ದಿನಗಳಲ್ಲಿ ಅಥವಾ ಅವನಿಗೂ ಹಿಂದೆಯೇ ಕ್ರಮ ಮತ್ತು ಕುಲ ಪದ್ಧತಿಗಳ ವಿರುದ್ಧ ಈ ಆಕ್ಷೇಪ ಎದ್ದಿತ್ತು.

ಆಧ್ಯಾತ್ಮಿಕ ಜ್ಞಾನಾನ್ವೇಷಣೆಯಲ್ಲಿ ಅಭಿನವಗುಪ್ತನು ಎರಡೂ ತಂತ್ರಗಳ ಸಾಧನೆಯನ್ನು ಮಾಡಿದ್ದ. ಅವುಗಳ ಮೇಲೆ ಬರೆದೂ ಇದ್ದ. ಆದ್ದರಿಂದ ಈ ಕರ್ಮಾಚರಣೆಯಲ್ಲಿ ಮಾಂಸ, ಮದ್ಯ ಮತ್ತು ಮಹಿಳೆಯ ಉಪಯೋಗದ ಮೇಲೆ ಅವನು ಏನು ಹೇಳುತ್ತಾನೆ ಎನ್ನುವುದನ್ನು ನೋಡೋಣ: ಮಾಂಸ ಮತ್ತು ಮದ್ಯದ ಬಳಕೆ ವೈದಿಕಕರ್ಮಗಳಿಗೂ ಸಮಾನವಾಗಿವೆ. ಆದ್ದರಿಂದ ನೈತಿಕಪಾತಿತ್ಯದ ಆಕ್ಷೇಪವನ್ನು ವೈದಿಕಕರ್ಮಗಳ ವಿರುದ್ಧವೂ ಮಾಡಬೇಕಾಗುತ್ತದೆ ಎಂದು ಅಭಿನವಗುಪ್ತನು ಹೇಳುತ್ತಾನೆ. ವೇದ ಮತ್ತು ಶೈವದರ್ಶನಗಳಿಗೆ ಸಮಾನವಾದ ಈ ಸಮಸ್ಯೆಯಲ್ಲಿ ಏಳುವ ಮೂಲಭೂತ ಪ್ರಶ್ನೆ ಏನೆಂದರೆ: ವಸ್ತುವೊಂದು ಸ್ವರೂಪತಃ ಪವಿತ್ರ ಮತ್ತು ಶುದ್ಧವೇ ಅಥವಾ ಅಪವಿತ್ರ ಅಥವಾ ಅಶುದ್ಧವೇ? ನೈತಿಕ ಭಾಷೆಯಲ್ಲಿ ಹೇಳುವುದಾದರೆ ಕಾರ್ಯವೊಂದು ಸ್ವರೂಪತಃ ಸರಿಯಾದುದೇ ಅಥವಾ ತಪ್ಪಾದುದೇ? ಎಂಬುದು ಇದಕ್ಕೆ ಅಭಿನವನು "ಶುದ್ಧತೆ ಅಥವಾ ಅಶುದ್ಧವೇ ವಸ್ತುವೊಂದರ ಸಹಜ ಗುಣವಾಗಲಿ, ಸ್ವರೂಪವಾಗಲಿ ಆಗಿರುವುದಿಲ್ಲ" ಎಂದು ಪ್ರತಿಕ್ರಿಯೆ ಕೊಡುತ್ತಾನೆ. ವಾಸ್ತವವಾಗಿ ಶುದ್ಧ ಅಥವಾ ಅಶುದ್ಧ ಎಂಬ ಭಾವನೆಗಳು ಆ ವಸ್ತುವಿಗೆ ಸಂಬಂಧಿಸಿದಂತೆ ವಿಶಿಷ್ಟ ವ್ಯಕ್ತಿಯೊಬ್ಬ ಹೊಂದಿರುವ ದೃಢವಾದ ಅಭಿಪ್ರಾಯಗಳು ಎಂದು ಅಂಗೀಕರಿಸಬೇಕು. ಒಬ್ಬನಿಗೆ ಶುದ್ಧವಾಗಿರುವುದು ಇನ್ನೊಬ್ಬನಿಗೆ ಏಕೆ ಆಗಿರುವುದಿಲ್ಲ ಎನ್ನುವುದನ್ನು ಇದು ಮಾತ್ರವೇ ವಿವರಿಸಬಲ್ಲುದು. ಒಂದರ ಶುದ್ಧತೆಯ ಮತ್ತು ಇನ್ನೊಂದರ ಅಶುದ್ಧತೆಯ ಭಾವನೆ ಒಬ್ಬನು ನಂಬಿರುವ ಶಾಸ್ತ್ರದಿಂದ ಪ್ರೇರಿತವಾಗುತ್ತದೆ.

(ವಿವೇಕಾನಂದರ ಕರ್ಮಯೋಗದ ಕುರಿತ ಉಪನ್ಯಾಸದಲ್ಲಿ ಈ ರೀತಿಯ ತಾತ್ವಿಕತೆಗೆ ಪೂರಕವಾಗಿರುವ ಸಂಗತಿಗಳ ಕುರಿತು ಹೇಳಿರುವುದನ್ನು ಗಮನಿಸಿ: "ನಮ್ಮೆಲ್ಲರಿಗೂ ನೀತಿ

ಅಥವಾ ಸದಾಚಾರಗಳೆಂದರೆ ಏನೆಂಬುದು ಗೊತ್ತು. ಆದರೆ ಈ ನೀತಿಯ ವಿಷಯವಾಗಿ ಬೇರೆ ಬೇರೆ ದೇಶದಲ್ಲಿ ಬೇರೆ ಬೇರೆ ಅಭಿಪ್ರಾಯಗಳಿರುವುವು. ಒಂದು ದೇಶದ ನೀತಿ–ಸದಾಚಾರಗಳು ಮತ್ತೊಂದು ದೇಶದವರಿಗೆ ಶುದ್ಧ ಅನಾಚಾರವಾಗಿ ತೋರಬಹುದು. ಇದಕ್ಕೆ ದೃಷ್ಟಾಂತವೆಂದರೆ: ಒಂದು ದೇಶದಲ್ಲಿ ಅಣ್ಣ ತಮ್ಮಂದಿರ ಮಕ್ಕಳಲ್ಲಿ ಪರಸ್ಪರ ವಿವಾಹ ನಡೆಯಬಹುದು. ಮತ್ತೊಂದು ದೇಶದಲ್ಲಿ ಇದು ಅನಾಚಾರವೆಂದು ಭಾವನೆ. ಒಂದು ದೇಶದಲ್ಲಿ ಓರ್ವನು ತನ್ನ ಹೆಂಡತಿಯ ಅಕ್ಕ ತಂಗಿಯರನ್ನು ಮದುವೆಯಾಗಬಹುದು. ಮತ್ತೊಂದು ದೇಶದಲ್ಲಿ ಅದು ಕೂಡದು. ಒಂದು ದೇಶದಲ್ಲಿ ಜನಗಳಿಗೆ ಮದುವೆ ಒಂದೇ ಸಾರಿ ಮಾತ್ರ. ಮತ್ತೊಂದರಲ್ಲಿ ಎಷ್ಟು ಸಲ ಬೇಕಾದರೂ ಆಗಬಹುದು. ಹೀಗೆಯೇ ನೀತಿಯ ಇತರ ಪ್ರಕರಣಗಳಲ್ಲಿಯೂ ಕೂಡ. ನೀತಿಯ ಪ್ರಮಾಣ–ಎಂದರೆ ಇದು ನೀತಿ, ಇದಲ್ಲ, ಇದು ಸದಾಚಾರ, ಇದು ದುರಾಚಾರ ಎಂಬುದನ್ನು ತಿಳಿಸತಕ್ಕಂತಹ, ಎಂದರೆ ನೀತಿಯನ್ನಳೆಯುವ ಅಳತೆಯ ಕೋಲು– ಭಿನ್ನಭಿನ್ನವಾಗಿರುತ್ತದೆ. ಆದರೂ ಸಾರ್ವತ್ರಿಕ ಎಂದರೆ ಸರ್ವತ್ರ ಪ್ರಯೋಗ ಮಾಡಬಹುದಾದ ಒಂದು ನೈತಿಕ ಪ್ರಮಾಣ ವಿರಲೇಬೇಕೆಂಬ ಭಾವನೆ ನಮಗೆಲ್ಲರಿಗೂ ಉಂಟು.")

ಕ್ರಿಯೆಯೊಂದು ಸ್ವರೂಪತಃ ಸರಿಯಾದುದೇ ತಪ್ಪಾದುದೇ ಎಂದು ನಾವು ಕೇಳಬಹುದು. ಕುಲಪದ್ಧತಿಯು ಎರಡು ಹಂತಗಳ ಕರ್ಮಾಚರಣೆಗಳನ್ನು ಹೊಂದಿದೆ: ಬಾಹ್ಯ ಮತ್ತು ರಹಸ್ಯ. ರಹಸ್ಯ ಕುಲಾಚರಣೆಗಳನ್ನು ನಡೆಸಲು ಅರ್ಹತೆಗಳು ಇಂತಿವೆ:

1. ಯಾರು ಮೂಲತಃ ನಿರ್ವಿಶೇಷ ಸ್ವರೂಪವುಳ್ಳ ಪರತತ್ವವನ್ನು ಗ್ರಹಿಸಿರುವರೋ ಮತ್ತು ಯಾರ ಗುರಿ ಭೌತಿಕವೋ ಸಾಮಾಜಿಕವೋ ಆಗಿರದೆ ಕೇವಲ ಆಧ್ಯಾತ್ಮಿಕವಾಗಿದೆಯೋ ಆ ಮಹಾತ್ಮರು ಮಾತ್ರವೇ ಆಚರಣೆಗೆ ಮದ್ಯ, ಮಾಂಸ ಮತ್ತು ಮಹಿಳೆಯನ್ನು ಅಪೇಕ್ಷಿಸುವ ಕುಲಯಾಗ ಕರ್ಮವನ್ನು ಮಾಡಲು ಅರ್ಹರಾಗಿರುತ್ತಾರೆ.
2. ಅವನು ರಾಜಯೋಗವನ್ನು ಅಭ್ಯಾಸ ಮಾಡುವ ಮೂಲಕ ಅತ್ಯಂತ ಪ್ರಚೋದಕವಾದ ವೈಷಯಿಕ ಪರಿಸ್ಥಿತಿಯ ಯಾವುದೇ ಹಂತದಲ್ಲಿ ತನ್ನ ಮನಸ್ಸನ್ನು ವಿಮುಖಿಗೊಳಿಸಬಲ್ಲ ಪರಿಪೂರ್ಣತೆಯನ್ನು ಈಗಾಗಲೇ ಪಡೆದಿರಬೇಕು.
3. ಕೇವಲ ಸಂಕಲ್ಪಬಲದಿಂದ ಅವನು ಪ್ರಾಣವನ್ನು ಮಧ್ಯನಾಡಿಯನ್ನು ಅಥವಾ ಸುಷುಮ್ನೆಯನ್ನು ಹೋಗುವಂತೆ ಮಾಡಬಲ್ಲವನಾಗಿರಬೇಕು ಮತ್ತು ಇಂದ್ರಿಯಕಾಮದಿಂದ ಸಂಪೂರ್ಣವಾಗಿ ಮುಕ್ತನಾಗಿರಬಲ್ಲವನಾಗಿರಬೇಕು.
4. ಅವನ ಇಂದ್ರಿಯಗಳು ಅತ್ಯಂತ ಆನಂದಮಯವಾದ ವಸ್ತುವಿನ ಸಂಪರ್ಕದಲ್ಲಿರುವಾಗ ಆ ಸಂಪರ್ಕವನ್ನು ಕಡಿದು ಹಾಕಿ ಪರಮಾತ್ಮನೊಡನೆ ತಾದಾತ್ಮ್ಯ ಪಡೆಯುವಷ್ಟು ಆತ್ಮ ಸಂಯಮವನ್ನು ಅವನು ಹೊಂದಿರಬೇಕು.

ಮಾಂಸ, ಮದ್ಯ ಮತ್ತು ಮಹಿಳೆಯ ಬಳಕೆಗೆ ಅಗತ್ಯವಾದ ಕುಲಯಾಗ ಅಥವಾ ಆದಿಯಾಗವನ್ನು ಆಚರಿಸಲು ಈ ಗುಣಗಳನ್ನು ಹೊಂದಿರುವ ವ್ಯಕ್ತಿಗಳು ಮಾತ್ರವೇ ಅರ್ಹರು. ಆದ್ದರಿಂದ ಈ ರಹಸ್ಯಕರ್ಮವು ಇಚ್ಛಿಸಿದಾಗ ನಿರ್ವಿಕಲ್ಪಸಮಾಧಿಯ ಹಂತಕ್ಕೆ ಏರಬಲ್ಲ ಮತ್ತು ಅಲ್ಲಿ ಸ್ಥಿರವಾಗಿ ನಿಲ್ಲಬಲ್ಲವರಿಗಾಗಿ ಮಾತ್ರವೇ ಹೇಳಿದೆ.

ಕುಲಪದ್ಧತಿಯ ಈ ರಹಸ್ಯಕರ್ಮದ ಗುರಿ ಮತ್ತು ಉದ್ದೇಶ ಹೆಂಗಸನ್ನು ಭೋಗಿಸುವುದಲ್ಲ. ಅದಕ್ಕೆ ಬದಲಾಗಿ ಇದನ್ನು ಮಾಡುವವನು ಮನಸ್ಸನ್ನು ಅತ್ಯಂತ ಆನಂದಕಾರಿ ವಸ್ತುವಿನಿಂದ ಹಿಂಸೆಳೆದು ಅದನ್ನು ಶುದ್ಧ ಆತ್ಮದ ಮೇಲೆ ಏಕಾಗ್ರಗೊಳಿಸುವಷ್ಟು ಅದರ ಮೇಲೆ ನಿಯಂತ್ರಣ ಹೊಂದಿದ್ದಾನೆಯೇ ಎಂಬುದನ್ನು ಕಂಡುಹಿಡಿಯುವುದು.

ಶೈವದರ್ಶನದಲ್ಲಿ ಸಿದ್ಧಾಂತ ಮತ್ತು ಧರ್ಮಗಳ ವಿಭಾಗವಿಲ್ಲ. ಅದರ ಧಾರ್ಮಿಕ ಅಂಶ ಸಿದ್ಧಾಂತವು

ನಿರ್ದೇಶಿಸಿದ ಅತ್ಯುನ್ನತ ಸ್ಥಾನಕ್ಕೆ ಒಯ್ಯುವ ಸಾಧನವನ್ನು ಕುರಿತಿದೆ. ಭಾರತೀಯ ಚಿಂತನೆಯ ಪ್ರಕಾರ ಪರತತ್ವ ಕೇವಲ ಒಂದು ತಾರ್ಕಿಕ ಪ್ರತಿಜ್ಞಾವಾಕ್ಯವಷ್ಟೇ ಅಲ್ಲ. ಅದು ಸಾಧನೆಯ ಮೂಲಕ ಸಾಕ್ಷಾತ್ಕಾರ ಮಾಡಿಕೊಂಡ ಪ್ರತಿಜ್ಞಾವಾಕ್ಯ. ಸಾಧನೆಯು ಎಲ್ಲಾ ಅನುಯಾಯಿಗಳಿಗೂ ಒಂದೇ ಅಲ್ಲ. ಪ್ರತಿ ವ್ಯಕ್ತಿಗೂ ಭಿನ್ನ ಹಂತಗಳಲ್ಲಿ ಅದು ಭಿನ್ನವಾಗಿರುತ್ತದೆ. ಕೌಲಧರ್ಮದಲ್ಲಿ ಮೂರುಮಟ್ಟಗಳ ಅನುಯಾಯಿಗಳಿರುತ್ತಾರೆ:

1. ಯಾರಿಗೆ ವ್ಯಾವಹಾರಿಕ ಮಟ್ಟದಲ್ಲಿಯೂ ಇಡೀ ಬಾಹ್ಯವಿಷಯ ಆತ್ಮರೂಪವಾಗಿ ಪ್ರಕಾಶಿಸುತ್ತದೆಯೋ ಅವರು;
2. ಸವಿಕಲ್ಪದ ಕೆಳಹಂತವನ್ನು ತಲುಪಿದವರು; ಮತ್ತು
3. ಸವಿಕಲ್ಪದ ಹಂತಕ್ಕೆ ಏರಲಾಗದವರು ಮತ್ತು ಯಾವುದೂ ಆತ್ಮರೂಪವಾಗಿ ಪ್ರಕಾಶಿಸದೇ ಇರುವವರು.

ಈ ಕುಲಯಾಗ ಯಾ ಆದಿಯಾಗದ ಆಚರಣೆ ಅತ್ಯುನ್ನತ ಮಟ್ಟವನ್ನು ತಲುಪಿದವರಿಗೆ ಮಾತ್ರವೇ ಆಗಿದೆ ಮತ್ತು ಅದರ ಗುರಿ ಸಾಧಕನು ನಿಜವಾಗಿ ಆ ಮಟ್ಟವನ್ನು ಪಡೆದಿರುವನೇ ಎಂಬುದನ್ನು ಕಂಡುಕೊಳ್ಳುವುದೇ ಆಗಿದೆ.

ಶಿವನ ಪರಮಸ್ಥಾನವನ್ನು ತಲುಪಲು ಈ ಉಗ್ರಪರೀಕ್ಷೆಯಲ್ಲಿ ಯಶಸ್ವಿಯಾದವರು ಮಾತ್ರವೇ ಮತ್ತೆ ಕೆಳಕ್ಕಿಳಿಯುವುದಿಲ್ಲ. ಆಧುನಿಕ ಯುಗದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಈ ಸ್ಥಿತಿಗೆ ಒಂದು ದೃಷ್ಟಾಂತ. ಅವರು ವಿಭಿನ್ನ ಧರ್ಮಗಳ ವಿಭಿನ್ನ ಸಾಧನಗಳೆಲ್ಲವೂ ಅನುಸರಿಸಿದ್ದನ್ನು ನಾವು ಕಾಣುತ್ತೇವೆ. ಭೈರವಿ ಬ್ರಾಹ್ಮಣಿಯ ಮಾರ್ಗದರ್ಶನದಲ್ಲಿ ಅವರು ಮಾಂಸ, ಮದ್ಯ ಮತ್ತು ಹೆಂಗಸನ್ನು ಒಳಗೊಂಡಿದ್ದ ಕರ್ಮಾಚರಣೆಯೂ ಸೇರಿದ ತಂತ್ರ ಸಾಧನೆಯನ್ನು ಅಭ್ಯಾಸ ಮಾಡಿದರು. ತಂತ್ರದಲ್ಲಿ ಅವರ ಮಾರ್ಗದರ್ಶಿ ಅಥವಾ ಗುರುವಾಗಿದ್ದ ಬ್ರಾಹ್ಮಣಿಯು ರಾಮಕೃಷ್ಣರು ಈ ವೈಷಯಿಕ ಪದಾರ್ಥಗಳನ್ನು ಕಂಡಕೂಡಲೇ ನಿರ್ವಿಕಲ್ಪ ಸಮಾಧಿಯ ಸ್ಥಿತಿಯನ್ನು ಹೊಕ್ಕು ಅಲ್ಲಿ ಸ್ಥಿರವಾಗಿ ನೆಲೆಸಿಬಿಡುತ್ತಿದ್ದುದನ್ನು ಕಂಡು ಆಶ್ಚರ್ಯಪಟ್ಟಳು.

ಸಾಮಾನ್ಯ ವ್ಯಕ್ತಿಗೆ ಈ ಸ್ಥಿತಿಯನ್ನು ಸಾಧಿಸುವುದು ಅಸಾಧ್ಯ. ಇದು ಅವನ ಕೈಗಳಿಗೆ ಬಿದ್ದಲ್ಲಿ ಅದು ದುರುಪಯೋಗವಾಗುವುದು ಖಂಡಿತ. ಆದ್ದರಿಂದ ಅದನ್ನು ರಹಸ್ಯವಾಗಿಟ್ಟಿದ್ದಿತು ಮತ್ತು ಅದಕ್ಕೆ ಶಕ್ತಿಯಿದ್ದ ಶಿಷ್ಯರಿಗೆ ಗುರುಮುಖೇನ ನೀಡಲಾಗುತ್ತಿತ್ತು. ಆದರೆ ಅಯೋಗ್ಯ ವ್ಯಕ್ತಿಗಳ ಕೈಗೆ ಬೀಳುವ ಇತರ ಎಲ್ಲಾ ವಿಷಯಗಳಂತೆಯೇ ಅದು ಕೂಡ ದುರುಪಯುಕ್ತ ವಾಯಿತು. ಈ ಅಯೋಗ್ಯ ಅನುಯಾಯಿಗಳಿಂದ ಇಡೀ ತಂತ್ರಸಾಧನೆಯೇ ಅಪಖ್ಯಾತಿಗೆ ಒಳಗಾಯಿತು. ದಿನಗಳು ಕಳೆದಂತೆ ಈ ಮಾರ್ಗ ಇಂಥ ಜನಗಳಿಂದ ತುಂಬಿತು. ಸಾಧನೆಯ ಸ್ಥಿತಿಯನ್ನು ಪೂರ್ತಿಯಾಗಿ ನಿರೂಪಿಸಿ ನಿಜವಾದ ಮತ್ತು ಸಮರ್ಥ ಸಾಧಕರು ಅಂತಿಮ ಹಂತವನ್ನು ತಲುಪಿದ್ದಾರೆಂದು ಘೋಷಿಸುತ್ತಿದ್ದ ಪರೀಕ್ಷೆಯು ಸಾಧಕವೇಷಿಗಳು ತಮ್ಮನ್ನೂ ಇತರರನ್ನೂ ನರಕಕ್ಕೆ ಒಯ್ಯುವ ಒಂದು ಸಾಧನವಾಯಿತು. ಒಂದು ಕಾಲದಲ್ಲಿ ಧರ್ಮಸಾಧನೆಯ ಉಗ್ರಪರೀಕ್ಷೆಯಾಗಿದ್ದ ಒಂದು ಕರ್ಮಾಚರಣೆಯು ವಂಚಿಸುವ ಮತ್ತು ಮೋಸಮಾಡುವ ಒಂದು ಸಾಧನವಾಗಿ ಪರಿವರ್ತಿತವಾಯಿತು. "ಸಾಧನೆ ಮತ್ತು ಉದ್ದೇಶಗಳ ನಡುವಣ ವ್ಯತ್ಯಾಸವನ್ನು ಗಮನಿಸಲಾಗದ ಮತ್ತು ಅವುಗಳನ್ನೇ ತಮ್ಮ ಸ್ವಾರ್ಥೋದ್ದೇಶಗಳನ್ನು ಸಾಧಿಸಿ ಕೊಳ್ಳಲು ಬಳಸಿಕೊಳ್ಳುವ ಸಾಧಕರು ಎನಿಸಿಕೊಳ್ಳುವವರ ಸ್ವಾರ್ಥಕಾಮನೆಯಿಂದಾಗಿ ಒಳ್ಳೆಯ ಧರ್ಮಾಚರಣೆಗಳು ಅಧರ್ಮಸಾಧನಗಳಾಗಿ ಪರಿವರ್ತಿತವಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ" ಎಂಬ ಶಂಕರಾಚಾರ್ಯರ ಮಾತುಗಳ ಸತ್ಯಕ್ಕೆ ಇದೊಂದು ಜ್ವಲಂತ ಉದಾಹರಣೆ. ಇಂಥ ಪರಿಸ್ಥಿತಿಗಳಲ್ಲಿ ದೇವೀಶಕ್ತಿಯು ಯಾವುದೋ ಒಂದು ಯೋಗ್ಯ ಮಾಧ್ಯಮದ ಮೂಲಕ

ತನ್ನನ್ನು ಪ್ರಕಟಿಸಿಕೊಳ್ಳಲು ಪ್ರಾರಂಭಿಸಿ ಜೀವನವನ್ನೂ ಶಾಸ್ತ್ರವನ್ನೂ ಪುನರುಜ್ಜೀವನ ಗೊಳಿಸುತ್ತದೆ. ಅಂಥ ಒಂದು ಮಾಧ್ಯಮ ಅಭಿನವಗುಪ್ತ ಆಗಿದ್ದ. ಅವನು ಎಲ್ಲಾ ತಂತ್ರ ಗಳನ್ನೂ ಒಂದು ಸಿದ್ಧಾಂತವನ್ನಾಗಿ ಮಾಡಿದ. ತಾಂತ್ರಿಕ ವಿಧಾನಗಳನ್ನು ತನ್ನ ಅನುಭವದ ಪರೀಕ್ಷೆಗೆ ಒಳಪಡಿಸಿದ ಮತ್ತು ತನ್ನ ವಿವಿಧ ಗ್ರಂಥಗಳ ಮೂಲಕ, ಮುಖ್ಯವಾಗಿ ಅವನ ಸಾರಸಂಗ್ರಹ ಕೃತಿಯಾದ ತಂತ್ರಾಲೋಕದಲ್ಲಿ ನಿಜವಾದ ಸಾಧಕರಿಗೆ ಒಂದು ಶಾಸ್ತ್ರ ಮತ್ತು ಆಚಾರ ಒದಗಿಸಿದ.

ಈ ರೀತಿಯಾಗಿ ಬೆಳವಣಿಗೆ ಹೊಂದಿದ ತಂತ್ರಶಾಸ್ತ್ರ ಕ್ಷೇತ್ರವು ಅಭಿನವನ ಮೊದಲು ಮತ್ತು ನಂತರವೂ ಅಪಚಾರಕ್ಕೊಳಗಾಗಿದೆ. ಈ ನಿಟ್ಟಿನಲ್ಲಿ ತಂತ್ರದ ಆಚರಣೆ ಮತ್ತು ಅಸ್ತಿತ್ವದ ಕುರಿತಾಗಿ ಶ್ರೀ ಅರವಿಂದ ಘೋಷರು ಹೇಳಿರುವ ಮಾತುಗಳು ಸರ್ವಕಾಲಕ್ಕೂ ಮನನೀಯ ವಾಗಿದೆ. "ಮೂಲ ಅಸ್ತಿತ್ವಗಳು ಎರಡು: ಬ್ರಹ್ಮ ಮತ್ತು ಶಕ್ತಿ. ಈ ಸರ್ವಮಾನ್ಯ ತತ್ವವನ್ನೇ ತಂತ್ರ ಆಧರಿಸಿದೆ. ಇವೆರಡರ ಅನಿವಾರ್ಯ ಮಿಲನವೇ ವಿಶ್ವದ ರಹಸ್ಯ. ಚೈತನ್ಯ ಶಕ್ತಿಯ ಪ್ರಕಟರೂಪ ವಾಗುವಂತೆ ಮಾನವ ಸ್ವಭಾವವನ್ನು ಉದಾತ್ತೀಕರಿಸುವುದೇ ತಂತ್ರದ ವಿಧಾನ ಹಾಗೂ ಈ ಪರಿವರ್ತನೆಗಾಗಿ ಅದು ಅವನ ಸಮಗ್ರ ಸ್ವಭಾವವನ್ನೇ ಉಪಯೋಗಿಸುತ್ತದೆ. ಶಕ್ತಿಯುತ ಹಠಯೋಗದ ವಿಧಾನವನ್ನೂ–ವಿಶೇಷವಾಗಿ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸುವ ಹಾಗೂ ಅದನ್ನು ಬ್ರಹ್ಮದೊಡನೆ ವಿಲೀನೀಕರಿಸುವ ವಿಧಾನವನ್ನು ಪರಿಶುದ್ಧತೆ, ಮನನ ಹಾಗೂ ಏಕಾಗ್ರತೆಗಳ ಬಗ್ಗೆ ಇರುವ ರಾಜಯೋಗದ ಸೂಕ್ಷ್ಮ ಒತ್ತಾಯವನ್ನೂ, ಇಚ್ಛಾಶಕ್ತಿಯ ಸೂತ್ರವನ್ನೂ, ಭಕ್ತಿಯ ಪ್ರೇರಕ ಶಕ್ತಿಯನ್ನೂ, ಜ್ಞಾನಮಾರ್ಗವನ್ನೂ ತಂತ್ರ ತನ್ನ ಪರಿಧಿಯಲ್ಲಿ ಅಳವಡಿಸಿ ಕೊಂಡಿದೆ."

ಈ ತಂತ್ರವೆಂಬ ಪದದ ಜೊತೆಜೊತೆಯಾಗಿ ಬರುವ ಮತ್ತು ಇರುವ ಪದದ್ವಯಗಳೆಂದರೆ ಮಂತ್ರ ಮತ್ತು ಯಂತ್ರ. ಮಂತ್ರವೆಂದರೆ ಅದು ಶಬ್ದಸೂತ್ರ ಅಥವಾ ಶಾಬ್ದಿಕ ಸಂಕೇತ. ಆಚರಣೆಗೆ ಕೊಡುವ ಮೂರ್ತರೂಪ. ದೇಹದಲ್ಲಿ ಹುದುಗಿರುವ ಆಕಾಂಕ್ಷೆಗಳ ಪ್ರಬಲ ಮತ್ತು ಸಂಶಯಾತೀತ ಶ್ರದ್ಧೆಗಳು ಶಬ್ದತರಂಗಗಳ ಮೂಲಕ ಆಚರಣೆಯ ಪ್ರಕ್ರಿಯೆಯನ್ನು ಪ್ರಭಾವಿಸುತ್ತವೆ. ಮಂತ್ರದಿಂದ ಉದ್ದೇಶಿತ ದೈವವು ಜಾಗೃತವಾಗುತ್ತದೆ ಮತ್ತು ಆ ಸ್ವರೂಪವನ್ನು ಪಡೆಯುತ್ತದೆ ಎನ್ನಬಹುದು. ಯಂತ್ರಗಳು ತಂತ್ರ ಸಾಧಕನ ಸ್ವಯಂ ಆಲೋಚನೆಗಳ ಏಕಾಗ್ರತೆಯ ಕ್ರಿಯೆಯಾಗಿದ್ದು, ಬಾಹ್ಯ ಪ್ರಪಂಚದಲ್ಲಿನ ಶಕ್ತಿಗಳು ಏಕತ್ರಗೊಳ್ಳುವ ಸ್ಥಾನವನ್ನು ಕಂಡರಿಯುವ ಮೂರ್ತರೂಪವೆಂದು ತಿಳಿಯಲಾಗಿದೆ. ಚಕ್ರ, ಮಂಡಲ, ಯಂತ್ರ ಈ ಮೂರೂ ಹತ್ತಿರ ಹತ್ತಿರ ಸಮಾನಾರ್ಥಕ ಪದಗಳು. ರೇಖೆಯ ಸ್ವರೂಪವು ಯಾವುದೇ ಆದರೂ ಅದೊಂದು ಪ್ರಭಾವಲಯ. ಪವಿತ್ರ ಸ್ಥಾನ. ಸಾಧಕನ ಒಳಹೊರಗಿನ ಆಲೋಚನೆ, ಭಾವನೆ ಮತ್ತು ಶಕ್ತಿಗೆ ಅದು ರಂಗಸ್ಥಳ. ಮಂತ್ರವು ಶಬ್ದ ಘಟಕಗಳ ಮೂಲಕ ಅಮೂರ್ತ ಶಕ್ತಿಯನ್ನು ವ್ಯಕ್ತಿಯ ಇಷ್ಟಾರ್ಥಕ್ಕನುಗುಣವಾಗಿ ಮಣಿಸುತ್ತದೆ. ಮಂತ್ರದ ಸಮರ್ಥ ಉಚ್ಚಾರಣೆಯಿಂದ ವ್ಯಕ್ತಿಯ ಶಕ್ತಿಯನ್ನು ಸಮೃದ್ಧಗೊಳಿಸಲಾಗುತ್ತದೆ. ಸಂಘಟಿಸ ಲಾಗುತ್ತದೆ. ಮಂತ್ರವು ಶಾಬ್ದಿಕ ಸಂಕೇತಗಳನ್ನು ಬಳಸಿದರೆ ಯಂತ್ರವು ಚಿತ್ರವಿನ್ಯಾಸಗಳನ್ನು ಬಳಸುತ್ತದೆ. ಮಂತ್ರದಲ್ಲಿ ಇಡೀ ಭಾಷಿಕ ವರ್ತನೆಯು ಅತ್ಯಗತ್ಯವಾದ ಮತ್ತು ಅಕ್ಷಯವಾದ ಶಬ್ದಘಟಕಗಳಾದರೆ (ಬೀಜಾಕ್ಷರಗಳು). ಯಂತ್ರದಲ್ಲಿ ಮನುಷ್ಯನಿಗೆ ದಕ್ಕುವ ಇಡೀ ದೃಗ್ಗೋಚರ ಜಗತ್ತೇ ರೂಪ ಘಟಕಗಳಾಗುತ್ತವೆ (ಬಿಂದು, ವೃತ್ತ, ತ್ರಿಕೋನ, ಚೌಕ ಇತ್ಯಾದಿ).

ಆದ್ದರಿಂದ ಮಂತ್ರವೆಂದರೆ ಶಬ್ದಶಕ್ತಿಯನ್ನು ಅಂತರ್ಗತಗೊಳಿಸಿಕೊಂಡಿರುವ ಅಸಾಮಾನ್ಯ ಸೂತ್ರವಾಗಿದೆ. ಯಂತ್ರವೆಂದರೆ ಬಯಲನ್ನು ಆಲಯವನ್ನಾಗಿಸಿ ರೇಖಾಚಿತ್ರದ ಆವರಣ ಶಕ್ತಿಯನ್ನು ತನ್ನೊಳಗೆ ತುಂಬಿಕೊಂಡಿರುವ ಅಸಾಮಾನ್ಯ ಸೂತ್ರವಾಗಿದೆ. ತಂತ್ರವು ಈ ಎರಡೂ ಅಸಾಮಾನ್ಯ ಶಕ್ತಿಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವ ತಂತ್ರಜ್ಞಾನವೇ ಆಗಿದೆ. ಈ ಎರಡೂ ಅಸಾಮಾನ್ಯ ಶಕ್ತಿಗಳು ಸ್ಫೋಟಗೊಳ್ಳುವ ಅಥವಾ ಕಾರ್ಯ ಸಾಧಿಸುವ

ಕ್ರಿಯೆಗೆ ಈ ಜೀವವೇ ಮೂಲಸಾಧನವಾಗಿದೆ. ಯಂತ್ರಗಳು ವ್ಯಕ್ತಿಯ ಅಥವಾ ಸಾಧಕನೊಳಗಿನ ಆಂತರಿಕ ಶಕ್ತಿಯ ವಿಸ್ತೃತ ಸ್ವರೂಪದ ಪ್ರತೀಕವಾದರೆ, ಮಂತ್ರಗಳು ಆ ಪ್ರತೀಕ ಅಥವಾ ಅಮೂರ್ತತೆಗೆ ಮೂರ್ತರೂಪವನ್ನು, ಶಾಸ್ತ್ರರೂಪವನ್ನು ನೀಡಿ ವಿಧ್ಯುಕ್ತವಾಗಿ ಆಚರಣೆಗೆ ಒಳಪಡಿಸುವಲ್ಲಿ ನೆರವಾಗುತ್ತವೆ. ತಂತ್ರವು ಈ ಎರಡನ್ನೂ ಒಳಗೊಂಡು ಶಕ್ತಿಯುತವಾಗಿ ಬೆಳೆಯುವ ಜೀವವಾಗಿದೆ. ಜೀವವೆಂದರೆ ದೇಹವಷ್ಟೇ ಅಲ್ಲ, ಜೀವಾತ್ಮವಾಗಿದೆ. ತಂತ್ರಾಚರಣೆ ಯಿಂದ ಅದು ತನ್ನ ವಿಶ್ವರೂಪವಾದ ಪರಮಾತ್ಮನಲ್ಲಿ ಲೀನವಾಗಲು ಸದಾ ಪ್ರಯತ್ನಿಸುತ್ತದೆ.

ಅಭಿನವನ ಗೀತಾರ್ಥ ಸಂಗ್ರಹ ಗ್ರಂಥದ ನೆಪದಲ್ಲಿ ಭಾರತೀಯ ತಂತ್ರಲೋಕದೆಡೆಗೊಮ್ಮೆ ಕಣ್ಣು ಹಾಯಿಸಿದ್ದಾಯಿತು. ಇನ್ನು ಕಾಶ್ಮೀರದ ಶೈವ ದರ್ಶನಗಳ ಕುರಿತು ಮತ್ತು ಅಭಿನವಗುಪ್ತರ ಗೀತಾರ್ಥದೆಡೆಗೂ ಗಮನ ಹರಿಸೋಣ.

ಕಾಶ್ಮೀರ ಶೈವ ದರ್ಶನ : ಕಾಶ್ಮೀರವು ಮೊದಲಿನಿಂದಲೂ ದರ್ಶನ–ಆಗಮಗಳ ನೆಲೆಬೀಡು. ಬುದ್ಧನ ಕಾಲಾನಂತರದಲ್ಲಿ ಬೌದ್ಧ ಧರ್ಮವು ಅಲ್ಲಿ ಉನ್ನತಿ ಹೊಂದಿದರೂ ಆಚಾರ್ಯ ಶಂಕರರ ಭೇಟಿಯ ತರುವಾಯ ಶೈವ ಮತ್ತು ಶಾಕ್ತ ಸಂಪ್ರದಾಯಗಳು ಪ್ರಬಲವಾಗಿ ಬೇರೂರಿತು. ತಂತ್ರ–ಆಗಮಗಳು ಸನಾತನವಾಗಿ ನಡೆದು ಬಂದ ಸಂಪ್ರದಾಯಿಕ ಆಚರಣೆಯನ್ನು ಮುನ್ನಡೆಸಿಕೊಂಡು ಹೋಗುತ್ತವೆ. ದರ್ಶನವು ಆಚರಣೆಯ ಹಿಂದಿನ ಪರಿಕಲ್ಪನೆಗೆ ವಿಮರ್ಶಾತ್ಮಕವಾದ ತತ್ವರೂಪವನ್ನು ಕೊಟ್ಟು, ತರ್ಕ ಮೀಮಾಂಸೆಗಳಲ್ಲಿ ಅವನ್ನು ಶೋಧಿಸಿ ಪುಟಕ್ಕಿಟ್ಟು, ಒಂದು ಸಾರ್ವಕಾಲಿಕವಾದ ಆಯಾಮವನ್ನೂ, ಸಿದ್ಧಾಂತವನ್ನೂ ರೂಪಿಸುತ್ತದೆ ಅಥವಾ ಕಟ್ಟಿಕೊಡುತ್ತದೆ. ದರ್ಶನ ಅಥವಾ ಆಗಮ ಇವುಗಳಲ್ಲಿ ಯಾವುದೂ ಮೊದಲಾಗಿರ ಬಹುದು. ಆನಂತರ ಒಂದಕ್ಕೊಂದು ಬೆಸೆದುಕೊಂಡು ಬೆಳೆಯುತ್ತವೆಂದು ಊಹಿಸಬಹುದು. ದರ್ಶನಗಳನ್ನು Pure Science ಎಂದೂ ಅದರಿಂದ ಪ್ರಯೋಜನ ಪಡೆದು ರೂಪುಗೊಂಡ Technology ಯನ್ನು ಆಗಮಗಳೆಂದೂ ಅರ್ಥೈಸಬಹುದು.

ಕಾಶ್ಮೀರ ಶೈವ ದರ್ಶನದಲ್ಲಿ ಸ್ಪಂದ, ಕುಲ, ಕ್ರಮ ಮತ್ತು ಪ್ರತ್ಯಭಿಜ್ಞಾ ಎಂಬ ದರ್ಶನ ಶಾಖೆಗಳಿವೆ. ಅಭಿನವಗುಪ್ತನು ಪ್ರತ್ಯಭಿಜ್ಞಾದರ್ಶನದ ಬಗ್ಗೆ ತತ್ವಶಾಸ್ತ್ರೀಯ ಗ್ರಂಥಗಳನ್ನು ರಚಿಸಿರುವನಾದರೂ ಅವನು ಎಲ್ಲ ಶಾಖೆಗಳಲ್ಲೂ ಉತ್ತಮ ಪಾಂಡಿತ್ಯ, ಪ್ರಭುತ್ವವನ್ನು ಹೊಂದಿ ಬರೆದಿರುವುದರಿಂದ ಆತನ ಗ್ರಂಥಗಳು ಈ ಎಲ್ಲ ದರ್ಶನಗಳ ಸಂಗಮದಂತಿವೆ ಎಂದು ವಿದ್ವಾಂಸರುಗಳು ಅಭಿಪ್ರಾಯಪಡುತ್ತಾರೆ. ಪ್ರತ್ಯಭಿಜ್ಞಾದರ್ಶನವು ಶಂಕರಾಚಾರ್ಯರ ಅದ್ವೈತ ಸಿದ್ಧಾಂತಕ್ಕೆ ಹತ್ತಿರ ಸಂಬಂಧಿಯಾಗಿದೆ. ಪ್ರತ್ಯಭಿಜ್ಞಾ ಎಂದರೆ ಮೂಲಸ್ವರೂಪದ ಬಗ್ಗೆ ಸ್ಮರಣೆ ಅಥವಾ ಅರಿವು. ಅಂದರೆ ಆತ್ಮದ ಸಾಕ್ಷಾತ್ಕಾರ ಅಥವಾ ಆತ್ಮದ ಸ್ಮೃತಿ. ಈ ಜಗತ್ತಿನ ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವ ಜೀವಾತ್ಮನಿಗೆ ತಾನೂ ಪರಮಾತ್ಮನೂ ಒಂದೇ ಎಂಬ ಅರಿವು ಮುಸುಕಾಗಿರುತ್ತದೆ. ಯಾವಾಗ ಆತ್ಮದ ಸಾಕ್ಷಾತ್ಕಾರದಿಂದ ಆ ಅರಿವು ಮೂಡುತ್ತದೆಯೋ ಯಾವಾಗ ಜೀವಾತ್ಮವು ಪರಮಾತ್ಮನೊಡನೆ ಐಕ್ಯತೆಯ ಆನಂದವನ್ನು ಅನುಭವಿಸುವುದೋ ಅದೇ ಪ್ರತ್ಯಭಿಜ್ಞೆ. ಈ ಅಂಶವನ್ನು ಅರಿತುಕೊಳ್ಳುವಂತೆ ಮಾಡುವುದೇ ಪ್ರತ್ಯಭಿಜ್ಞಾದರ್ಶನದ ಗುರಿ. ಉದಾಹರಣೆಗೆ ಕಾಳಿದಾಸನ ಅಭಿಜ್ಞಾನ ಶಾಕುಂತಲದಲ್ಲಿ ದುಷ್ಯಂತನಿಗೆ ಅವನ ರಾಜಮುದ್ರೆ ಉಂಗುರ ನೋಡುತ್ತಲೇ ಶಕುಂತಲೆಯೊಟ್ಟಿಗಿದ್ದ ಘಟನೆಗಳ ಪೂರ್ವಸ್ಮರಣೆ ಉಂಟಾಯಿತು. ಅಂತೆಯೇ ಸ್ಮೃತಿವಿಷಯವಾಗುವ ವಸ್ತುವು ತನ್ನಲ್ಲಿರುವ ಯಾವುದೋ ಒಂದು ಖಚಿತ ಲಕ್ಷಣವನ್ನು ಪ್ರಕಟಿಸಿದರೆ ಸಾಕು, ನೆನಪು ಸಾಧ್ಯವಾಗುತ್ತದೆ. ಅಂತಹ ಸಂದರ್ಭದಲ್ಲಿನ ನೆನಪುಗಳನ್ನು ಪ್ರತ್ಯಭಿಜ್ಞಾನ ಎಂದು ಕರೆಯಲಾಗಿದೆ. ಸ್ಮೃತಿಗೆ ಕಾರಣವಾಗುವ ವಿಷಯವು ಇಂತಹುದೇ ಆಗಬೇಕೆಂದಿಲ್ಲ. ಅದು ಗುರುವಿನ ಉಪದೇಶದಲ್ಲಿಯೂ ಇರಬಹುದು, ಶತ್ರುವಿನ

ತೆಗಳಿಕೆಯಲ್ಲಿಯೂ ಇರಬಹುದು, ಸ್ವರ್ಗೀಯ ಆನಂದಾನುಭವದಲ್ಲಿಯೂ ಇರಬಹುದು, ಅಸಹನೀಯ ನರಕಾನುಭವವೂ ಇರಬಹುದು. ಅರಿವಿನ ಜಾಗೃತಿಯನ್ನು ಪ್ರತ್ಯಭಿಜ್ಞಾನವು ಅವಲಂಬಿಸಿದೆ. ಇದು ಪ್ರತ್ಯಭಿಜ್ಞಾದರ್ಶನದ ಸಂಕ್ಷೇಪ ಸ್ವರೂಪ. ಈ ದರ್ಶನದ ಪೂರ್ಣಪಾಠಕ್ಕೆ ಅಭಾಸವಾದ, ಪ್ರಕಾಶ, ವಿಮರ್ಶ, ಅಭಾಸವಾದದ ಮೂವತ್ತಾರು ತತ್ವಗಳು ಮುಂತಾದ ಅನೇಕ ಪರಿಭಾಷೆಗಳ ಕುರಿತು ತಿಳಿಯಬೇಕು. ಅಷ್ಟು ಗಹನವಾದ ತತ್ವಶಾಸ್ತ್ರದ ವಿಷಯವನ್ನು ಇಲ್ಲಿ ವಿಶದ ಪಡಿಸಲು ನಾನು ಅಶಕ್ತನಿರುವುದರಿಂದ ಶೈವದರ್ಶನದ ವಿಷಯದಲ್ಲಿ ಇಲ್ಲಿಗೇ ವಿರಮಿಸುತ್ತೇನೆ.

ಅಭಿನವಗುಪ್ತನು ಭಗವದ್ಗೀತೆಗೆ ಬರೆದಿರುವ ಭಾಷ್ಯವಾದ ಗೀತಾರ್ಥ ಸಂಗ್ರಹವು ಪೂರ್ತಿಯಾಗಿ ಶೈವದರ್ಶನದ ಪಾತಳಿಯ ಮೇಲೆಯೇ ನಿಂತಿದ್ದರೂ ಅವನ ವ್ಯಾಖ್ಯಾನವು ಬಹಳ ಅನನ್ಯವಾಗಿದೆ. ಯಾಕೆಂದರೆ ಆತನ ಪರಿಣತಿಯು ಬರಿಯ ದರ್ಶನಶಾಸ್ತ್ರವಷ್ಟೇ ಅಲ್ಲದೆ ಕಲೆಯ ಶುದ್ಧ ಸ್ವರೂಪವನ್ನು ತೋರ್ಪಡಿಸುವ ಸಂಗೀತ ಮತ್ತು ನಾಟ್ಯಶಾಸ್ತ್ರಗಳಲ್ಲಿ ಹಾಗೂ ಕಾವ್ಯಶಾಸ್ತ್ರದ ಅಂಗಗಳಾದ ಅಲಂಕಾರ ಮತ್ತು ಧ್ವನಿಶಾಸ್ತ್ರಗಳಲ್ಲೂ ಇರುವುದರಿಂದ ಅದು ಸಾಧ್ಯವಾಗಿದೆ.

ಅಭಿನವನ ಸಿದ್ಧಾಂತ ತತ್ವಗಳ ಕುರಿತು ಆಧುನಿಕ ಕಾಲಮಾನದಲ್ಲಿ ಪ್ರಭುತ್ವದಿಂದ ಮಾತಾಡಬಲ್ಲವರಲ್ಲಿ ಪ್ರಮುಖರಾಗಿದ್ದವರು ಕಾಶ್ಮೀರದವರೇ ಆದ ಸ್ವಾಮಿ ಲಕ್ಷ್ಮಣ ಜೂ (ಲಾಲ್ ಸಾಹಿಬ್ ಅವರ ಅನುಯಾಯಿಗಳು ಕರೆಯುತ್ತಿದ್ದ ಹೆಸರು. ಜೀವಿತಾವಧಿ: 1907–1991). ಅವರಿಗೆ ಅಭಿನವನ ಕೃತಿಗಳೆಲ್ಲವೂ ಕಂಠೋಕ್ತವಾಗಿದ್ದವು. ಅಭಿನವನ ಗ್ರಂಥಗಳ ಕುರಿತು ಮತ್ತು ಇಡೀ ಕಾಶ್ಮೀರ ಶೈವದರ್ಶನದ ವಿವಿಧ ಶಾಖೆಗಳ ಕುರಿತು ಅತ್ಯಂತ ನಿಖರವಾಗಿ ವಸ್ತುನಿಷ್ಠವಾಗಿ ಮಾತನಾಡಬಲ್ಲವರಾಗಿದ್ದರು. ಗೀತಾರ್ಥ ಸಂಗ್ರಹದ ಶ್ಲೋಕಗಳ ಕುರಿತ ಅವರ ಇಂಗ್ಲೀಷ್ ಪ್ರವಚನವನ್ನು ಬಳಸಿಕೊಂಡು ಕನ್ನಡದಲ್ಲಿ ವಿವರಿಸಲು ಯಥಾಶಕ್ತಿ ಪ್ರಯತ್ನಿಸಿದ್ದೇನೆ. ವಿನೋಬಾ ಭಾವೆ ಅವರ ಗೀತಾ ಪ್ರವಚನ ಮತ್ತು ವಿದ್ವಾನ್ ರಂಗನಾಥಶರ್ಮರ ಗೀತಾರ್ಥ ಪ್ರಕಾಶವನ್ನು ಬಳಸಿಕೊಂಡಿದ್ದೇನೆ. ವಿವರಿಸುವಾಗ ಕೆಲವು ಕಡೆ ಮಹಾರಾಜರು, ಗುರುಗಳು ಅಂತ ಪದಬಳಕೆ ಮಾಡಿದ್ದೇನೆ. ಅದು 18–19ನೇ ಶತಮಾನದಲ್ಲಿ ಜೀವಿಸಿ ರಾಮನಾಮವನ್ನು ಆಧ್ಯಾತ್ಮಕ್ಕೆ ಜೋಡಿಸಿದ, ಸಮರ್ಥ ರಾಮದಾಸರ ಅವತಾರವೆಂದು ಲೋಕಪ್ರಸಿದ್ಧರಾದ ಬ್ರಹ್ಮಚೈತನ್ಯ ಗೋಂದಾವಲೇಕರ ಮಹಾರಾಜರನ್ನು ಕುರಿತದ್ದು.

ಅಭಿನವನು ತನ್ನ ಭಗವದ್ಗೀತಾ ವ್ಯಾಖ್ಯಾನ ಕುರಿತ **"ಗೀತಾರ್ಥ ಸಂಗ್ರಹ"** ಗ್ರಂಥದಲ್ಲಿ ಬೇರೆ ಭಾಷ್ಯಕಾರರಂತೆ ಎಲ್ಲ ಶ್ಲೋಕಗಳಿಗೂ ಅರ್ಥವಿವರಣೆ ನೀಡಿಲ್ಲ. ಎಲ್ಲಿ ಅಗತ್ಯವಿದೆಯೋ ಅಲ್ಲಿ ಮಾತ್ರ ವಿಷಯಗಳನ್ನು ಬಿಡಿಸಿ ಬಿಡಿಸಿ ವಿವರಿಸಿದ್ದಾನೆ. ಹಾಗಾಗಿ ತನ್ನ ಗ್ರಂಥವನ್ನು ಗೀತೆಯ ಅರ್ಥ ಸಂಗ್ರಹವೆಂಬುದಾಗಿ ಹೆಸರಿಸಿದ್ದಾನೆ. ಪ್ರತಿ ಅಧ್ಯಾಯಕ್ಕೆ ವಿವರಣೆ ಬರೆದ ನಂತರ ಆ ಅಧ್ಯಾಯದ ಸಾರವನ್ನು ತಿಳಿಸುವಂತಹ ಉದ್ದೇಶದಿಂದ ಅದರ ಕೊನೆಯಲ್ಲಿ ಶ್ಲೋಕವೊಂದನ್ನು ರಚಿಸಿ ಅದನ್ನು ಸಂಗ್ರಹ ಶ್ಲೋಕವೆಂದು ಕರೆದಿದ್ದಾನೆ. ಆತನ ಇತರ ಮಹತ್‌ಕೃತಿಗಳಾದ ಅಭಿನವಭಾರತೀ, ಧ್ವನ್ಯಾಲೋಕಾಲೋಚನ ಮತ್ತು ತಂತ್ರಾಲೋಕದಲ್ಲಿಯೂ ಈ ರೀತಿಯಾದ ಸಂಗ್ರಹ ಶ್ಲೋಕಗಳಿವೆ.

ಪ್ರಥಮ ಅಧ್ಯಾಯ–ವಿಷಾದಯೋಗದ ಸಂಗ್ರಹ ಶ್ಲೋಕ:

ವಿದ್ಯಾ ವಿದ್ಯೋ ಭಯಾಘಾತಸಂಘಟ್ಟ ವಿವಶೀಕೃತಃ।
ಯುಕ್ತಯಾ ದ್ವಯಮಪಿ ತ್ಯಕ್ತ್ವಾ ನಿರ್ವಿವೇಕೋ ಭವೇನ್ಮುನಿಃ ॥1॥

ವಿದ್ಯೆ ಮತ್ತು ಅವಿದ್ಯೆಗಳೆರಡರ ಸುಳಿಯಲ್ಲಿ ಪರಿಸ್ಥಿತಿಯ ವಶನಾಗಿ ಮನುಷ್ಯನು ಸಿಲುಕಿ ಕೊಂಡಾಗ ಎರಡನ್ನೂ ನಿರಾಕರಿಸಿ ನಿರ್ವಿವೇಕ (ಯೋಚನಾರಹಿತ) ಸ್ಥಿತಿಯನ್ನು ತಲುಪಿ ನಿಲ್ಲುವುದರಲ್ಲಿಯೇ ಮನುಜನ ನಿಜವಾದ ಯುಕ್ತಿ ಅಡಗಿದೆ.

ಇಲ್ಲಿ ವಿದ್ಯೆ–ಅವಿದ್ಯೆ ಎಂಬುವ ಎರಡೂ ಬೌದ್ಧಿಕವಾದುದೇ ಆಗಿದೆ. ಭಗವದ್ಗೀತೆಯಲ್ಲಿ ನಡೆಯುವ ಯುದ್ಧವು ಸತ್ಯ–ಸುಳ್ಳುಗಳ, ಧರ್ಮ–ಅಧರ್ಮಗಳ ನಡುವೆ ನಡೆಯುತ್ತಿರುವ ಯುದ್ಧವೇ ಆಗಿದೆ ಎಂದು ನಮ್ಮ ಬುದ್ಧಿಯು ಗ್ರಹಿಸುತ್ತದೆ. ನಾನೀಗ ಯಾವುದನ್ನು ಬೆಂಬಲಿಸಬೇಕು? ಯಾವುದನ್ನು ಅಲ್ಲ? ಎಂಬ ಗೊಂದಲದಲ್ಲಿ ಸಿಕ್ಕಿ ಬೀಳುತ್ತೇವೆ. ಸುಖ ಮತ್ತು ದುಃಖಗಳೆರಡೂ ಗೊಂದಲಮಯವಾಗಿ ಮತ್ತು ಮಮಕಾರಯುತವಾಗಿರುವುದರಿಂದ ಮನೋವಿಕಾರವಾಗುವುದು ಸಹಜವೇ ಆಗಿದೆ. ಬುದ್ಧಿಗಮ್ಯವಾದ ಮನೋವ್ಯಾಪಾರದಿಂದ ಸುಖದಿಂದ ಇದ್ದೇವೆ ಎಂದು ಖುಷಿ ಪಡುತ್ತಿರುವಾಗಲೇ ಮಗದೊಮ್ಮೆ ದುಃಖವೂ ಪ್ರಾಪ್ತ ವಾಗುತ್ತದೆ. ಹಾಗಾಗಿ ಈ ಎರಡೂ ಅವಸ್ಥೆಗಳ ಜಂಜಾಟದಿಂದ ಮುಕ್ತವಾಗಿ ನಿರ್ವಿಕಾರದಿಂದ, ನಿರ್ಮಮಕಾರದಿಂದ, ನಿರ್ವಿವೇಕದಿಂದ (ವಿವೇಕ ಶೂನ್ಯನಾಗಿ ಅಲ್ಲ) ಇರುವುದೇ, ಯುದ್ಧದಲ್ಲಿ ಸಾಕ್ಷಿಪ್ರಜ್ಞೆಯಿಂದ ಭಾಗವಹಿಸುವುದೇ ಮಾನವನಿಗೆ ಉಳಿದಿರುವ ಏಕೈಕ ಯುಕ್ತ ಮಾರ್ಗವಾಗಿದೆ. ಪ್ರಜ್ಞಾವಾದದಿಂದ ಹೊರಗುಳಿಯುವುದೇ ಮನುಜನಿಗಿರುವ ಏಕೈಕ ಮಾರ್ಗ. "ಸೇನೆಯೋರು ಭಯೋಮಧ್ಯೆ– ಎರಡು ಸೇನೆಗಳ ನಡುವೆ" ಅರ್ಜುನನ ರಥ ನಿಂತಿದೆ. ಅಂದರೆ ವಿದ್ಯೆ–ಅವಿದ್ಯೆಗಳೆರಡರ ನಡುವೆ ಜೀವಾತ್ಮ ನಿಂತಿದೆ. ಅದಕ್ಕೀಗ ಯಾವ ರೀತಿ ಗ್ರಹಿಸಬೇಕೆಂಬ ಗೊಂದಲ. ಈ ಗೊಂದಲದ ಮೂಲವು ಅವಲಂಬನೆಯಿಂದ ಹುಟ್ಟಿದೆ. ವಿದ್ಯೆ ಎಂಬುವ ತತ್ವವು ಅವಿದ್ಯೆ ಎಂಬ ನೆಲಗಟ್ಟಿಗೆ ವಿರುದ್ಧವಾಗಿ ನಿಂತಿದೆ. ಹಾಗೆಯೇ ಅವಿದ್ಯೆ ಎಂಬುದೂ. ಹಾಗಾಗಿ ಈ ಎರಡರಿಂದ ಪಾರಾಗುವ ಯುಕ್ತಿ ಎಂದರೆ ಎರಡನ್ನೂ ನಿರಾಕರಿಸುವುದೇ ಆಗಿದೆ.

ಹನ್ನೊಂದು ಅಕ್ಷೌಹಿಣಿಗಳಿಂದ ವಿಜೃಂಭಿಸುತ್ತಿರುವ ದುರ್ಯೋಧನನು ನಾನು ಗೆದ್ದೇ ತೀರುತ್ತೇನೆಂಬ ಅತಿ ವಿಶ್ವಾಸದಲ್ಲಿದ್ದರೆ, ಎದುರಾಳಿಗಳೆನಿಸಿಕೊಂಡವರು ಗುರು–ಹಿರಿಯರು, ಅಣ್ಣ–ತಮ್ಮಂದಿರಾದ್ದರಿಂದ ಕುಲಕ್ಷಯವಾಗುತ್ತದೆ, ಕುಲಘಾತಕ ಕಾರ್ಯವು ಪಾಪಕರ ಮುಂತಾಗಿ ಅರ್ಜುನನು ಹಲುಬಲು ಶುರುವಿಟ್ಟಿದ್ದಾನೆ. ಹೀಗಿರುವ ಸನ್ನಿವೇಶವು ಹೀಗೇ ನಮಗೆ ಎದುರಾಗುವುದಿಲ್ಲ. ಗೀತೆಯು ನಮಗಿಂದು ಚಿರಪರಿಚಿತ ಕೃತಿಯಾಗಿರಬಹುದು. ಕೃಷ್ಣನು ಅರ್ಜುನನಿಗೆ ಯುದ್ಧ ಮಾಡೆಂದು ಆದೇಶಿಸಿದ್ದೇ ಗೀತೆಯ ತಿರುಳು; ಅದನ್ನ ಎಷ್ಟೂಂತ ಕೇಳೋದು? ಅಂತ ತೇಲಿಸಿಬಡಬಹುದು. "ತನ್ನ ಕೆಲಸವೀಗ ಕೇವಲ ಯುದ್ಧ ಮಾಡುವುದಷ್ಟೇ; ಅದರಿಂದ ಕೊನೆಯಲ್ಲಿ ಉಂಟಾಗುವ ಸೋಲು–ಗೆಲುವು ಮತ್ತು ಯುದ್ಧ ಮಾಡುವಾಗಿರುವ ಸಂಬಂಧಗಳ ತೊಡಕುಗಳನ್ನು ನಾನು ಗಮನಕ್ಕೆ ತಂದುಕೊಳ್ಳುವ ಅಗತ್ಯವಿಲ್ಲ" ಎಂಬುದು ಅರ್ಜುನನ ಮನಸ್ಸಿನಲ್ಲಿ ಸ್ಥಿರವಾಗಲು ಗೀತೆ ಹುಟ್ಟಿತೆಂಬ ಐತಿಹ್ಯವಿರಬಹುದು. ಆದರೆ ಇಂದಿನ ಬದಲಾದ ಪರಿಸ್ಥಿತಿಯಲ್ಲೂ ಕೂಡ ಗೀತೆ ನಮ್ಮ ಬದುಕಿನ ಅತೀತಗಳನ್ನು, ದ್ವಂದ್ವಗಳನ್ನು ತಿಳಿಗೊಳಿಸಲು ಎಷ್ಟು ಅತ್ಯಗತ್ಯ ಎಂಬುದು ಮೇಲೆ ಉದ್ಧರಿಸಿದ ಸಂಗ್ರಹ ಶ್ಲೋಕವನ್ನು ಗಮನಿಸಿದರೆ ತಿಳಿಯುತ್ತದೆ. ಶ್ರೀಮಂತಿಕೆ ಮತ್ತು ಬಡತನ ಎರಡೂ ಒಂದೇ ನಾಣ್ಯದ ಎರಡು ಮುಖ. ಚಿನ್ನದ ಬೇಡಿಯಲ್ಲಿ ಕೈಕಟ್ಟಿದ್ದರೂ ಖುಷಿಯೇನೂ ಆಗುವುದಿಲ್ಲ!! ಮತ್ತು ನಾವು ಅನುಭವಿಸಬೇಕಾದ್ದು ತಪ್ಪುವುದಿಲ್ಲ. ಹಾಗಾಗಿ ಅವಸ್ಥೆಗಳಿಗೆ ಅತೀತವಾಗಿ, ಅನಾಸಕ್ತನಾಗಿ ಪದ್ಮಪತ್ರದ ಮೇಲಿನ ಬಿಂದುವಿನಂತೆ ಇರುವುದರಲ್ಲಿಯೇ ಮನುಜನ ನಿಜವಾದ ಯುಕ್ತಿ ಅಡಗಿದೆ.

ದ್ವಿತೀಯ ಅಧ್ಯಾಯ–ಸಾಂಖ್ಯಯೋಗದ ಸಂಗ್ರಹ ಶ್ಲೋಕ:

ಅಹೋ ನು ಚೇತಸಸ್ಚಿತ್ರಾ ಗತಿಸ್ತ್ಯಾಗೇನ ಯತ್ಕಿಲ।

ಆರೋಹತ್ಯೇವ ವಿಷಯಾಂಶ್ಚ್ರಯಂಸ್ತಾಂಶ್ಚ ಪರಿತ್ಯಜೇತ್॥2॥

ಎಲ್ಲಕ್ಕಿಂತ ಅಚ್ಚರಿಯ ಸಂಗತಿಯೆಂದರೆ ಮನಸ್ಸಿನ ನಡೆಯಾಗಿದೆ. ಅದು ಒಂದು ಆಲೋಚನೆಯನ್ನು ಬಿಡಬೇಕೆಂದು ಹೊರಡುತ್ತಲೇ ಇನ್ನೊಂದು ಆಲೋಚನೆಯ ಬಂಧಕ್ಕೆ ಒಳಗಾಗಿರುತ್ತದೆ.

"ಬಿಟ್ಟೆನೆಂದರೂ ಬಿಡದೀ ಮಾಯೆ" "ಇದ್ದುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ" ಮುಂತಾದ ಅನುಭವದ ನುಡಿಗಳು ಮನಸ್ಸಿನ ಅಜ್ಞಾತ, ಅನಿರ್ದಿಷ್ಟ ಮತ್ತು ಅನೂಹ್ಯ ನಡೆಯನ್ನು ಕುರಿತಾದುದೇ ಆಗಿದೆ. ಎರಡನೇ ಅಧ್ಯಾಯವು ಮನೋವ್ಯಾಪಾರದ ವ್ಯಾಖ್ಯಾನವನ್ನು ಮಾಡಿ ಅದನ್ನು ಸ್ಥಿಮಿತದಲ್ಲಿಡಬೇಕಾದ ಅನಿವಾರ್ಯತೆಯ ಬಗ್ಗೆ ಹೇಳಿದೆ. ಇಲ್ಲಿ ಸ್ಥಿತಪ್ರಜ್ಞೆಯ ವಿಷಯವಾಗಿ ಬಹಳ ಪ್ರಮುಖವಾದ ವಿಷಯಗಳು ನಿರೂಪಿತವಾಗಿವೆ. ರಾಗ–ದ್ವೇಷಗಳಲ್ಲಿ, ಸಿದ್ಧಿ–ಅಸಿದ್ಧಿಗಳಲ್ಲಿ, ಕರ್ಮ–ಅಕರ್ಮಗಳಲ್ಲಿನ ಸಮತ್ವವೇ, ಸಮಾಹಿತ ಚಿತ್ತವೇ ಸ್ಥಿತಪ್ರಜ್ಞನ ಪ್ರಮುಖ ಲಕ್ಷಣ. ಒಮ್ಮೆ ಸಂಸಾರಿಯಾಗಿರುವವನೊಬ್ಬ ಜೀವನದ ತಾಮತ್ರಯಗಳಿಗೆ ಅಂಜಿ ಬೇಸತ್ತು ಸಂನ್ಯಾಸ ಇದಕ್ಕಿಂತ ಉತ್ತಮವೆಂದು ತಿಳಿದು ಕಾಡಿಗೆ ಹೋಗಿ ಸಂನ್ಯಾಸಿಯಾದನು. ಅಲ್ಲಿ ಅವನ ಕೌಪೀನವನ್ನು ದಿನವೂ ಇಲಿಯು ಒಂದಿಷ್ಟು ಕಚ್ಚಿ ತೂತ ಮಾಡಿ ಬಿಡುತ್ತಿತ್ತು. ಅದು ಅವನಿಗೊಂದು ದೊಡ್ಡ ತಲೆನೋವಾಗಿ ಪರಿಣಮಿಸಿ ಕೊನೆಗೆ ಇಲಿ ಹಿಡಿಯಲು ಬೆಕ್ಕೊಂದನ್ನು ಸಾಕಿದನು. ಬೆಕ್ಕಿನ ಆಹಾರಕ್ಕಾಗಿ ಹಾಲು ಬೇಕಾಯಿತು–ಹಸು ಕಟ್ಟಿದನು. ತಾನು ಉಳಿದುಕೊಳ್ಳಲು ಗುಡಿಸಲು ಹಾಗು ಹಸುವಿಗೊಂದು ಕೊಟ್ಟಿಗೆ ಕಟ್ಟಿದನು. ಹಾಲು ತನಗೆ ಕರೆಯಲಾಗದೆಂದು ತಿಳಿದು ಹೆಂಗಸೊಬ್ಬಳನ್ನು ನೇಮಿಸಿದನು. ದಿನಗಳೆದಂತೆ ಇವನಿಗೆ ಅವಳಲ್ಲಿ ಮೋಹವುಂಟಾಗಿ ಮದುವೆಯೂ ಆದನು! ನೋಡಿ ಹೇಗಿದೆ ಕಥೆ!! ಮುಕ್ತನಾಗಿ ಜೀವಿಸಲು ಬಂದವನು ಮತ್ತೊಂದು ಬಂಧದಲ್ಲಿ ಪರಿವೃತನಾದ. ಹಾಗಾಗಿ ಬಂಧ/ಮೋಕ್ಷವೆಂಬುದು ಬದುಕುವ ರೀತಿಯನ್ನು ಅವಲಂಬಿಸಿದೆ.

ಅನಾಸಕ್ತನಾಗಿಯೂ ಜಗತ್ತಿನಲ್ಲಿ ಶ್ರದ್ಧೆಯಿಂದ ಬದುಕುವುದು ಸಾಧ್ಯವಿದೆ. ಬದುಕಲ್ಲಿ ಸಂಸಾರ ಹೀನವಲ್ಲ, ಸಂನ್ಯಾಸವೇ ಶ್ರೇಷ್ಠವೂ ಅಲ್ಲ. ಮನಸ್ಥಿತಿಯು ಮುಖ್ಯವಾದುದು. ಜೀವನ್ಮುಕ್ತತೆ ಎಲ್ಲವನ್ನು ಬಿಡುತ್ತೇನೆಂದು ಹೊರಟರೂ ಇಲ್ಲ. ಎಲ್ಲವನ್ನೂ ಹಿಡಿದರೂ ಇಲ್ಲ. ಮಣಿಮಾಲೆಯನ್ನು ಹಿಡಿದು ಹತ್ತು ನೂರಾವರ್ತ ಸುತ್ತುವವರ ಮನಸು ದಿನಕ್ಕಿಷ್ಟು ಎಂಬ ಲೆಕ್ಕಾಚಾರದ ಆಧಾರದಲ್ಲೇ ಮುಗಿಯುತ್ತಿದ್ದರೆ ಅದು ತಪಸ್ಸಾಗುತ್ತದೆಯೇ? ಈ ವಿಷಯದ ಬಗ್ಗೆ ಒಂದು ಕಥೆಯಿದೆ. ಒಮ್ಮೆ ದೇವರ್ಷಿ ನಾರದರಿಗೆ ತಾನೇ ವಿಷ್ಣುವಿನ ಪರಮ ಭಕ್ತ, ತನಗಿಂತಲೂ ಉತ್ತಮ ಭಕ್ತರಿರಲು ಸಾಧ್ಯವಿಲ್ಲವೆಂಬ ಅಹಂ ಬಂತು. ಇದನ್ನು ಹರಿಯ ಬಾಯಿಯಿಂದಲೇ ಹೇಳಿಸಿ ಆನಂದ ಪಡೋಣವೆಂದು ತೀರ್ಮಾನಿಸಿ ಕೂಡಲೇ ವೈಕುಂಠಕ್ಕೆ ಧಾವಿಸಿದರು. "ಪರಮಾತ್ಮ, ಮೂರುಲೋಕಗಳೊಳಗೆ ನಿನ್ನನ್ನೇ ಭಜಿಸುತ್ತಲಿರುವ ಪರಮ ಭಕ್ತನನ್ನು ನೋಡಬೇಕೆಂದು ನನಗೆ ಆಸೆ" ಎಂದರು. ಅದಕ್ಕೆ ಭಗವಂತನು ಒಂದು ಸಾಮಾನ್ಯ ಹಳ್ಳಿಯಲ್ಲಿರುವ ಕೃಷಿಕನನ್ನು ಕುರಿತು ಹೇಳಿ "ಆತನೇ ನನ್ನ ಪರಮ ಭಕ್ತ" ಎಂದನು. ನಾರದರಿಗೆ ಪರಮಾಶ್ಚರ್ಯವಾಗಿ ಅವನನ್ನು ನೋಡಲು ಹೊರಟರು. ಅವನಾದರೋ ದಿನನಿತ್ಯ ತನ್ನ ಕೃಷಿ ಕೆಲಸಗಳನ್ನು ಮಾಡುತ್ತ ನಡುವಿನಲ್ಲೆಲ್ಲೋ ಒಮ್ಮೆ ಹರಿಯನ್ನು ಸ್ಮರಿಸುತ್ತಿದ್ದನು. ನಾರದರು ವಾಪಸ್ಸು ಹರಿಯ ಬಳಿ ಬಂದು ಆತನ ಭಕ್ತಿ ಪಾರಮ್ಯದ ಮಾನದಂಡದ ಬಗ್ಗೆ ಪ್ರಶ್ನಿಸಿದರು. ಆಗ ಹರಿಯು "ನಾರದ, ಆತನು ಕೃಷಿಕನಾಗಿ ತನ್ನ ಕಾರ್ಯವನ್ನು ತನ್ಮಯನಾಗಿ ಮಾಡುತ್ತಿದ್ದರೂ ತನ್ನ ಸ್ಥಿತಿಯ ಬಗ್ಗೆ ಸಂತುಷ್ಟನಾಗಿ, ಅದನ್ನು ಒದಗುವಂತೆ ಮಾಡಿದ್ದಕ್ಕೆ ಕೃತಜ್ಞನಾಗಿ ನನ್ನನ್ನು ಸ್ಮರಿಸುತ್ತಾನೆ. ಅವನಲ್ಲಿ ತಿಲಮಾತ್ರವೂ ಅಹಂಕಾರವಿಲ್ಲ. ಆದುದರಿಂದಲೇ ಆತ ನನ್ನ ಪರಮ ಭಕ್ತ" ಎಂದನು. ಉತ್ಕೃಷ್ಟವಾದ ಫಲವು ಕರ್ಮದ ಫಲತ್ಯಾಗದಲ್ಲಿದೆ/ಸಮರ್ಪಣೆಯಲ್ಲಿದೆ. ಆನಂದದಿಂದ ಆಟ ಆಡುವವನ ಮನಸ್ಸಿಗೆ ಸೋಲು–ಗೆಲುವು ನಗಣ್ಯ. ಆದರೆ ಆತನು ಗೆಲ್ಲಲೇಬೇಕೆಂದು ಆಡುತ್ತಿರುವ ಬೇರೆಲ್ಲರಿಗಿಂತ ಚೆನ್ನಾಗಿ ಆಡುವನು. ಹಾಗಾಗಿ ಮನಸ್ಸಿನ ನಡೆಯಲ್ಲಿ ಸಿಗುವಂತಹ ಯಾವುದೇ ಮನೋಭಾವಗಳನ್ನು ತ್ಯಜಿಸಿ ಅದರ ದಾಸನಾಗದಿರುವುದೇ ಅತ್ಯಂತ ಉತ್ತಮ ಮಾರ್ಗ ವೆಂಬುದು ಅಭಿನವಗುಪ್ತನ ಅಭಿಪ್ರಾಯ. (ಮುಂದಿನ ಸಂಚಿಕೆಯಲ್ಲಿ ಮುಂದುವರಿಯುತ್ತದೆ.)

ಸಾಂಸ್ಕೃತಿಕ ರಾಜಕಾರಣ ಮತ್ತು ಯೋಗ ಇತ್ಯಾದಿ

ಅಜಕ್ಕಳ ಗಿರೀಶ ಭಟ್
ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಂಟ್ವಾಳ, ದಕ್ಷಿಣಕನ್ನಡ

'ಕೈಲಾಗದವರು ಮೈ ಪರಚಿಕೊಂಡರು' – ಗಾದೆ

ಭಾರತದ ಮುಂದಾಳುತ್ವದಲ್ಲಿ ಜಗತ್ತಿನ ದೇಶಗಳು ಜೂನ್ 21ನೇ ದಿನಾಂಕವನ್ನು ಅಂತಾರಾಷ್ಟ್ರೀಯ ಯೋಗ ದಿನವನ್ನಾಗಿ ಮಾನ್ಯ ಮಾಡಿದವು. ಭಾರತ ಸರಕಾರವೇ ವ್ಯಾಪಕವಾಗಿ ಯೋಗದ ಪ್ರಚಾರ ಹಾಗೂ ಪ್ರಸಾರಕ್ಕೆ ಪ್ರೋತ್ಸಾಹ ಕೊಟ್ಟುದರ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ರಾಜಕಾರಣದ ಪ್ರಶ್ನೆ ಹುಟ್ಟಿಕೊಂಡಿತು. ಯೋಗವನ್ನು ಈ ಪರಿಯಲ್ಲಿ ಪ್ರಚಾರ ಮಾಡುವುದು ಸಾಂಸ್ಕೃತಿಕ ರಾಜಕಾರಣದ ಭಾಗ ಎಂದು ಸೆಕ್ಯುಲರ್‌ವಾದಿಗಳು ಎಂದು ಕರೆದುಕೊಳ್ಳುವವರು ಹೇಳಲಾರಂಭಿಸಿದ್ದಾರೆ. ಎಷ್ಟೋ ಲೇಖಕರು ಈ ಮೂಲಕ ತಮ್ಮ ಸಂಕುಚಿತ ದೃಷ್ಟಿಕೋನವನ್ನು ಹೊರಹಾಕಿದ್ದಾರೆ. ಯೋಗ ಪ್ರಚಾರದ ಬಗ್ಗೆ ಆಕ್ಷೇಪ ಎತ್ತುವ ಬಹಳಷ್ಟು ಮಂದಿ ಯೋಗದ ಬಗ್ಗೆ ತಮಗೆ ಒಳ್ಳೆಯ ಅಭಿಪ್ರಾಯವೇ ಇದೆ ಎನ್ನುತ್ತಾರೆ. ಆದರೆ ಅವರಿಗೆ ಗೌರವವಿರುವುದು ಈಗ ಪ್ರಚಾರದಲ್ಲಿರುವ ಯೋಗದ ಬಗ್ಗೆ ಅಲ್ಲ. ಹಾಗೆಯೇ ಬಹಳ ಜನರಿಗೆ ಪತಂಜಲಿಯ ಸೂತ್ರಗಳಲ್ಲಿ ಹೇಳಿದ್ದು ಹೊರತಾಗಿ ಬೇರೆ ಯೋಗವಿಲ್ಲ. ಮುಖ್ಯವಾಗಿ ಹೀಗೆ ಆಕ್ಷೇಪ ಮಾಡುವವರಿಗೆ ಯೋಗವನ್ನು ಪ್ರಚಾರ ಮಾಡುವವರ ಬಗ್ಗೆ ಸಿಟ್ಟಿದೆ. ಹೀಗೆ 'ಒಳ್ಳೆಯ' ಯೋಗ ವನ್ನು 'ಕೆಟ್ಟವರು' ಪ್ರಚಾರ ಮಾಡುತ್ತಿರುವುದರಿಂದ ಒಳ್ಳೆಯದನ್ನು ಕೂಡ ಉಪಯೋಗಕ್ಕಿಲ್ಲದ್ದು ಎಂದು ವಾದಿಸುವ ಅನಿವಾರ್ಯ ಪರಿಸ್ಥಿತಿಯೂ ನಮ್ಮ ಸೆಕ್ಯುಲರ್ ಮಂದಿಗೆ ಒದಗಿ ಬಂದಿದೆ. ಯೋಗಕ್ಕೆ ಸಂಬಂಧಿಸಿದಂತೆ ಅಥವಾ ನಿರ್ದಿಷ್ಟವಾಗಿ ಯೋಗದ ಪ್ರಚಾರಕ್ಕೆ ಸಂಬಂಧಿಸಿದಂತೆ ಇರುವ ಆಕ್ಷೇಪಗಳ ಹಿಂದಿರುವ ನೆಲೆ ಮತ್ತು ಗ್ರಹಿಕೆಗಳನ್ನು ಅರ್ಥ ಮಾಡಿಕೊಳ್ಳಲು ಈ ಲೇಖನದಲ್ಲಿ ಯತ್ನಿಸಲಾಗಿದೆ.

ಯೋಗ ಪ್ರಚಾರದ ಹಿಂದಿನ ಸಾಂಸ್ಕೃತಿಕ ರಾಜಕಾರಣದ ಬಗ್ಗೆ ದಿನೇಶ್ ಅಮೀನ್ ಮಟ್ಟು ಅವರು ಪ್ರಜಾವಾಣಿಯಲ್ಲಿ ಕಿರುಲೇಖನವೊಂದನ್ನು ಬರೆದಿದ್ದರು.[1] ಈ ಲೇಖನ ವೈರುಧ್ಯ ಹಾಗೂ ಸಂಕುಚಿತ ಮನೋಭಾವದಿಂದ ಕೂಡಿದೆ. ಯೋಗವು ವೈದ್ಯಕೀಯ ವಿಜ್ಞಾನದ ಒಂದು ಭಾಗ ಹಾಗೂ ಅದು ಹಲವು ರೋಗಗಳಿಗೆ ಯಶಸ್ವಿ ಚಿಕಿತ್ಸೆ ಎಂಬುದನ್ನು ದಿನೇಶ್ ಅಮೀನ್ ಮಟ್ಟು ಒಪ್ಪುತ್ತಾರೆ. ಆದರೆ, ಯೋಗದ ಉಪಯೋಗದ ಬಗ್ಗೆ ಹೇಳುವಾಗ ಕತ್ತಿಯ ಸದುಪಯೋಗ ಮತ್ತು ದುರುಪಯೋಗದ ಹೋಲಿಕೆಯನ್ನು ನೀಡುತ್ತಾರೆ. ಯೋಗವನ್ನು ಕತ್ತಿಗೆ ಹೋಲಿಸಿರುವುದನ್ನು ನೋಡಿದರೆ, ಯೋಗವು ಪ್ರಯೋಜನಕರ ಎಂಬುದನ್ನು ಅವರು ಬೇರೆ ಉಪಾಯವಿಲ್ಲದ್ದರಿಂದ ಒಪ್ಪಿದ್ದೆಂದು ಸ್ಪಷ್ಟವಾಗುತ್ತದೆ. ಇರಲಿ. ಯೋಗ ಒಳ್ಳೆಯದೇ, ಆದರೆ ಅದನ್ನು ಪ್ರಚಾರ ಮಾಡುವವರು ಸರಿಯಿಲ್ಲ ಎಂಬ ಆರೋಪ ಅವರದು. ಯೋಗದ ಪ್ರಚಾರಕರು ಸಾಂಸ್ಕೃತಿಕ ರಾಜಕಾರಣ ಮಾಡುತ್ತಿದ್ದಾರೆ ಎಂದು ಅವರು ದೂರುತ್ತಾರೆ. ಇಲ್ಲಿ ಮಟ್ಟು ಅವರು ಒಂದು ಮುಖ್ಯವಾದ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಆ ಪ್ರಶ್ನೆ ಇದು : ಯಾವುದೇ ಗುಪ್ತ ಅಜೆಂಡಾಗಳಿಲ್ಲದ ಸಾಂಸ್ಕೃತಿಕ ರಾಜಕಾರಣ ಮಾಡದ, ಸೆಕ್ಯುಲರ್‌ವಾದಿಗಳಾದ ಒಳ್ಳೆಯವರು ಯಾಕೆ ಇಂಥ ಪ್ರಯೋಜನಕಾರಿಯಾದ ಯೋಗವನ್ನು ಈವರೆಗೆ ಪ್ರಚಾರ ಮಾಡಲಿಲ್ಲ? ಅದಕ್ಕೆ

ಅಂತಾರಾಷ್ಟ್ರೀಯ ಮಾನ್ಯತೆ ಸಿಗುವಂತೆ ಮಾಡಲು ಯತ್ನಿಸಲಿಲ್ಲ? ಆ ಹೊಣೆಯನ್ನು ಯಾಕೆ ಸಾಂಸ್ಕೃತಿಕ ರಾಜಕಾರಣವನ್ನು ಮಾಡುವವರಿಗೆ ಮೀಸಲಾಗಿಟ್ಟರು?

ಯೋಗವು ಭಾರತೀಯ ಸಂಸ್ಕೃತಿಯ ಭಾಗ ಎಂಬುದರ ಬಗ್ಗೆ ಮಟ್ಟು ಅವರ ಆಕ್ಷೇಪವಿದೆ. 'ಸಂಸ್ಕೃತಿ–ಪರಂಪರೆಯ ಭಾಗ' ಎನ್ನುವಲ್ಲಿ 'ಭಾಗ' ಎಂಬ ಪದದ ಅರ್ಥ ಗೊತ್ತಿರುವವರು ಯೋಗವನ್ನು ಭಾರತೀಯ ಪರಂಪರೆಯ ಭಾಗ ಅಲ್ಲ ಎನ್ನಲಾರರು. ಬಹು ಸಂಸ್ಕೃತಿಗಳುಳ್ಳ ಭಾರತದಲ್ಲಿ ಯಾವುದೇ ಆಚರಣೆ, ನಂಬಿಕೆ, ಭಾಷೆ ಇತ್ಯಾದಿ ಸಾಂಸ್ಕೃತಿಕ ದ್ರವ್ಯಗಳು ಇಡೀ ಭಾರತದ ಎಲ್ಲರಿಗೂ ತಿಳಿದಿರಬೇಕೆಂದಿಲ್ಲ. ಅದು ಎಲ್ಲರ ಬದುಕಿನ ಭಾಗವಾಗಿರಬೇಕೆಂದು ನಿರೀಕ್ಷಿಸುವುದೂ ಸಾಧ್ಯವಿಲ್ಲ. ಹಾಗೆಂದು ಒಂದು ಸಣ್ಣ ಭೌಗೋಳಿಕ ಪ್ರದೇಶಕ್ಕೆ ಅಥವಾ ಒಂದು ಸಾಮಾಜಿಕ ಸಮೂಹಕ್ಕೆ ಸೀಮಿತವಾದುದನ್ನು ಭಾರತೀಯ ಸಂಸ್ಕೃತಿಯ ಭಾಗ ಅಲ್ಲ ಎನ್ನಲು ಸಾಧ್ಯವಿಲ್ಲ. ಈ ನೆಲೆಯಿಂದ ನೋಡಿದಾಗ ವೈದಿಕ–ಅವೈದಿಕ ಇವೆಲ್ಲ ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯ ಭಾಗಗಳೇ ಆಗಿವೆ. ಸಾಂಸ್ಕೃತಿಕ ರಾಜಕಾರಣದ ಬಗ್ಗೆ ಮಾತನಾಡುವವರು ಬಹುಸಂಸ್ಕೃತಿಗಳುಳ್ಳ ದೇಶದ ಬಗ್ಗೆ ಹೊಂದಿರಬೇಕಾದ ಪ್ರಾಥಮಿಕ ಜ್ಞಾನ ಇದು.

ಇದೇ ಲೇಖನದಲ್ಲಿ ಮಟ್ಟು ಅವರು, ದೇಶದ ಜನಸಂಖ್ಯೆಯಲ್ಲಿ 'ಶೇಕಡ 80ರಷ್ಟಿರುವ ಹಿಂದೂಗಳು' ಎಂದು ಸಾಂದರ್ಭಿಕವಾಗಿ ಹೇಳುತ್ತಾರೆ. ಆ ಶೇಕಡ 80ರಲ್ಲಿ ಒಳಗೊಂಡಿರುವ ದಲಿತರೂ ಬ್ರಾಹ್ಮಣರೂ ಸೇರಿದಂತೆ ಎಲ್ಲಾ ಸಮುದಾಯಗಳು ಹಾಗೂ ಸಂಪ್ರದಾಯಗಳಲ್ಲಿ ಯಾವ ಸಮಾನ ಅಂಶಗಳನ್ನು ಕಂಡು, ಬಹುಸಂಸ್ಕೃತಿಗಳ ಪ್ರತಿಪಾದಕರಾದ ಲೇಖಕರು ಅವರನ್ನೆಲ್ಲ 'ಹಿಂದೂ' ಎಂಬ 'ಏಕ' ವಿಭಾಗಕ್ಕೆ ಸೇರಿಸುತ್ತಾರೆ? ಇದೂ ಕೂಡ ಏಕ ಸಂಸ್ಕೃತಿಯ ಪ್ರತಿಪಾದನೆಯಲ್ಲವೇ?

ಹಿಂದಿನ ಕಾಲದಲ್ಲಿ ಬ್ರಾಹ್ಮಣರು ತಾವು ಪಡೆದಿದ್ದ ವೇದ ಇತ್ಯಾದಿ ಜ್ಞಾನವನ್ನು ಶೂದ್ರರಿಗೆ ನೀಡುತ್ತಿದ್ದರೆ ಅದೂ ಕೂಡ ತಮ್ಮ ಸಂಸ್ಕೃತಿಯನ್ನು ಹೇರುವ ಸಾಂಸ್ಕೃತಿಕ ರಾಜಕಾರಣವೇ ಆಗುತ್ತಿತ್ತು ಎಂದೇಕೆ ಇವರು ಅಂದುಕೊಳ್ಳುವುದಿಲ್ಲ? ಅಂಥ ಸಾಂಸ್ಕೃತಿಕ ರಾಜಕಾರಣ ಮಾಡದ ಬ್ರಾಹ್ಮಣರನ್ನು ಇವರೇಕೆ ಕೊಂಡಾಡುವುದಿಲ್ಲ? ಶತಾಯಗತಾಯ ಯೋಗವನ್ನು ಅಲ್ಲಗಳೆಯಬೇಕೆಂದುಕೊಳ್ಳುವವರ ವಿತಂಡವಾದಗಳಿಗೆ ಇನ್ನಷ್ಟು ಉದಾಹರಣೆಗಳಿವೆ. "ನಿಮ್ಮ ಉಜ್ವಲ ಯೋಗ ಬಯಲು ಓಟಕ್ಕಿಂತ ಉತ್ತಮವೇನಲ್ಲ" ಎಂಬ ಶೀರ್ಷಿಕೆಯುಳ್ಳ ಲೇಖನ ವೊಂದನ್ನು ಜಿ. ಪ್ರಮೋದ್ ಕುಮಾರ್ ಎಂಬವರು ಬರೆದಿದ್ದಾರೆ.[2] ಅದೇ ಲೇಖನದ ಉಪ ಶೀರ್ಷಿಕೆಯು "ಕ್ಷಮಿಸಿ, ಯೋಗಾಭಿಮಾನಿಗಳೇ ಇಲ್ಲಿದೆ ಸತ್ಯಾಂಶ ಪರೀಕ್ಷೆ" ಎಂದೂ ಹೇಳುತ್ತದೆ. ಬಯಲು ಓಟ ಓಡಲಾರದ ವೃದ್ಧರು, ಅಶಕ್ತರು, ಕಾಲು ನೋವಿನವರು ಯೋಗ ಮಾಡಲು ಸಾಧ್ಯವಿದೆ ಎಂಬ ಸರಳ ವಿಚಾರ ಕೂಡ ಈ ವಿತಂಡವಾದಿಗಳಿಗೆ ಹೊಳೆಯುವುದಿಲ್ಲ! ವಿರೋಧಕ್ಕಾಗಿ ವಿರೋಧ ಎಂದು ಹೊರಟಾಗ ಇಂಥ ಹೇಳಿಕೆಗಳೇ ಬರುತ್ತವೆ.

ಯೋಗದಿಂದ ಪ್ರಯೋಜನವಿಲ್ಲವೆಂದು ನಿರೂಪಿಸಲಿಕ್ಕಾಗಿ ಅವರು ಕೆಲವು ಅಧ್ಯಯನ ವರದಿಗಳನ್ನು ಉಲ್ಲೇಖ ಮಾಡುತ್ತಾರೆ. ಹಾಗೆ ಅವರು ಉಲ್ಲೇಖಿಸಿದ ಒಂದೆರಡು ಅಧ್ಯಯನಗಳಲ್ಲಿ ಏನು ಹೇಳಲಾಗಿದೆ ಎಂದು ನೋಡೋಣ. ಒಂದು ಅಧ್ಯಯನ ಹೇಳುತ್ತದೆ – "ಯೋಗ ತರಗತಿಗಳು ತೀವ್ರವಾದ ಕೆಳ ಬೆನ್ನು ನೋವಿನ ಲಕ್ಷಣಗಳನ್ನು ಗುಣಪಡಿಸುವಲ್ಲಿ ಮತ್ತು ಕನಿಷ್ಠ ಕೆಲ ತಿಂಗಳುಗಳ ಕಾಲವಾದರೂ ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ಒಂದು ಸ್ವಯಂ ಕಲಿಕೆಯ ಪುಸ್ತಕಕ್ಕಿಂತ ಹೆಚ್ಚು ಪರಿಣಾಮಕಾರಿ. ಆದರೆ ಒಂದು ಸ್ಟ್ರೆಚಿಂಗ್ ತರಗತಿಗಿಂತ ಹೆಚ್ಚು ಪರಿಣಾಮ ಕಾರಿಯಲ್ಲ". ಉಬ್ಬಸಕ್ಕೆ ಸಂಬಂಧಿಸಿದಂತೆ ಅವರು ಉಲ್ಲೇಖಿಸುವ ವರದಿಗೆ ಸಂಬಂಧಿಸಿದ ಕೆಲವು ಸಾಲುಗಳು ಹೀಗಿವೆ. "ಯೋಗ ಉಬ್ಬಸವನ್ನು ಗುಣಪಡಿಸುತ್ತದೆ ಎಂದು ಹೇಳಲಾಗುತ್ತದೆ.

ಅದರಿಂದ ನಿಜವಾಗಿಯೂ ಸಹಾಯವಾಗುತ್ತದೆಯೇ? 14 ಆರ್‌ಸಿಟಿಗಳ ಪರಿಣಾಮಗಳನ್ನು ಪರಿಗಣಿಸಿದ ಅನಲ್ಸ್ ಆಫ್ ಅಲರ್ಜಿ ಅಸ್ತಮಾ ಅಂಡ್ ಇಮ್ಯುನಾಲಜಿ ಎಂಬ ಪತ್ರಿಕೆಯಲ್ಲಿ ಪ್ರಕಟವಾದ 2014ರ ಅಧ್ಯಯನವನ್ನು ತೆಗೆದುಕೊಳ್ಳೋಣ. ಫಲಿತಾಂಶ? ಈ ಹಂತದಲ್ಲಿ ಯೋಗವು ಅಸ್ತಮಾ ರೋಗಿಗಳಿಗೆ ಒಂದು ನಿರ್ದಿಷ್ಟವಾದ ಚಿಕಿತ್ಸೆ ಎಂದು ಪರಿಗಣಿಸಲಾಗದು. ಅದನ್ನು ಉಸಿರಾಟದ ವ್ಯಾಯಾಮದಂತೆ ಅಸ್ತಮಾ ರೋಗಿಗಳಿಗೆ ಒಂದು ಪೂರಕ ಚಿಕಿತ್ಸೆ ಎಂದು ಪರಿಗಣಿಸಬಹುದು.''

ಯೋಗದಿಂದ ಪ್ರಯೋಜನವಿಲ್ಲವೆಂದು ಸಾಧಿಸಲಿಕ್ಕಾಗಿ ಪ್ರಮೋದ್ ಕುಮಾರ್ ಅವರು ಉದ್ಧರಿಸಿದ ಮೇಲಿನ ಅಧ್ಯಯನಗಳು ನಿಜವಾಗಿಯೂ ಪ್ರಯೋಜನ ಇದೆ ಎಂದೇ ಹೇಳುತ್ತಿವೆ! ಯೋಗದಿಂದ ಬಹಳ ಪ್ರಯೋಜನಗಳಿವೆ ಹಾಗೂ ಅದು ಸರ್ವರೋಗಗಳನ್ನು ಗುಣಪಡಿಸುತ್ತದೆ ಅಥವಾ ಕೆಲವಾದರೂ ರೋಗಗಳನ್ನು ಗುಣಪಡಿಸುತ್ತದೆ ಎಂದೆಲ್ಲ ವಾದಿಸುವುದು ಈ ಲೇಖನದ ಉದ್ದೇಶವೇ ಅಲ್ಲ. ಅದಕ್ಕೆ ಬೇಕಾದ ಎಂಪಿರಿಕಲ್ ಅಥವಾ ವೈಜ್ಞಾನಿಕ ಸರ್ವೇಕ್ಷಣೆಯನ್ನೂ ನಾನು ಮಾಡಿಲ್ಲ. ಆದರೆ ತಮಗೆ ಪ್ರಯೋಜನವಾಗಿದೆ ಎಂದು ಹೇಳುವ ಹಲವು ನಿತ್ಯ ಯೋಗಾಭ್ಯಾಸಿಗಳು ಇದ್ದಾರೆ. ಯಾವ ಲಾಭವೂ ಇಲ್ಲದೆ ದಿನವೂ ಬೆಳಗ್ಗೆ ಸಕ್ಕರೆ ನಿದ್ದೆಯನ್ನು ತ್ಯಜಿಸಿ ಮನೆಯೊಳಗೇ ಏಕಾಂಗಿಯಾಗಿ ಒಂದು ಗಂಟೆಯ ಸಮಯವನ್ನು ಯೋಗಾಭ್ಯಾಸದಲ್ಲಿ ಕಳೆಯುವ ಇಂಥವರು ಮೂಢನಂಬಿಕೆಯವರು ಎಂದು ನಾನು ನಂಬುವುದಿಲ್ಲ. ಅದು ಹಾಗಿರಲಿ. ಮುಖ್ಯವಾಗಿ ಮೇಲೆ ಹೇಳಿದ ಯೋಗವಿರೋಧಿಗಳ ವಾದದ ಹಿಂದಿನ ಗ್ರಹಿಕೆ ಬಗ್ಗೆ ನಾವು ಯೋಚಿಸಬೇಕಾಗಿದೆ. 'ಸ್ಟೆಚಿಂಗ್' ಎಂಬುದು 'ಯೋಗ' ಅಲ್ಲ ಎಂಬುದು ಈ ವಿರೋಧಿಗಳ ಒಂದು ಗ್ರಹಿಕೆ. ಹಾಗಾದರೆ ಯೋಗದಲ್ಲಿ ಸ್ಟೆಚಿಂಗ್ ಇಲ್ಲವೇ? ಹಾಗೆಯೇ, ಉಸಿರಾಟದ ವ್ಯಾಯಾಮದಂತೆ 'ಒಂದು ಪೂರಕ ಚಿಕಿತ್ಸೆ' ಎಂಬಲ್ಲಿ ಯೋಗವು ಪ್ರಯೋಜನಕಾರಿ ಎಂದೇ ಸಾಧಿತವಾಗುತ್ತದೆ. ಆದರೆ, 'ಉಸಿರಾಟದ ವ್ಯಾಯಾಮದಂತೆ' ಎಂದು ಹೇಳುವಾಗ, ಉಸಿರಾಟದ ವ್ಯಾಯಾಮಕ್ಕೂ ಯೋಗಕ್ಕೂ ಸಂಬಂಧವೇ ಇಲ್ಲ, ಅವರೆಡೂ ಬೇರೆ ಬೇರೆ ಎಂಬ ಗ್ರಹಿಕೆ ಇದೆ.

ಇದು ಈ ಒಬ್ಬ ಲೇಖಕರ ಸಮಸ್ಯೆ ಅಲ್ಲ. ಮೇಲಿನ ಉದಾಹರಣೆಯನ್ನು ಸ್ಪಷ್ಟತೆಗಾಗಿ ದೀರ್ಘವಾಗಿ ಪ್ರಸ್ತಾಪಿಸಲಾಗಿದೆ ಅಷ್ಟೆ. ಇದೇ ರೀತಿಯ ಅಪಕಲ್ಪನೆಯನ್ನಾಧರಿಸಿದ ಮಾತುಗಳನ್ನು ಹಲವು ಪ್ರಮುಖರು ಆಡಿದ್ದಿದೆ. ಅಮಿತಾವ್ ಘೋಷ್ ಎಂಬ ಖ್ಯಾತ ಲೇಖಕರು ಇತ್ತೀಚೆಗೆ ಒಂದು ಸಂದರ್ಶನದಲ್ಲಿ ಎನ್‌ಡಿಟಿವಿ ವಾಹಿನಿಯ ಬರ್ಖಾದತ್ ಜೊತೆ ಮಾತನಾಡುತ್ತ ಆಕ್ಷೇಪದ ಧ್ವನಿಯಲ್ಲಿ ಹೇಳುತ್ತಿದ್ದುದರ ಸಾರಾಂಶ ಇದು – ''ಈಗ ಇವರೆಲ್ಲ ಮಾಡುತ್ತಿರುವುದು ಪತಂಜಲಿ ಹೇಳಿದ್ದನ್ನಲ್ಲ. ಹೀಗೆ ಸಾಮೂಹಿಕ ಯೋಗ ಮಾಡುವುದು ಭಾರತೀಯ ಪರಂಪರೆಯ ಯೋಗ ಅಲ್ಲ...'' ಇತ್ಯಾದಿ. ಅಂದರೆ ಅರ್ಥ ಏನು? ಯೋಗ ದಿನಾಚರಣೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ ಇದೇ ಬಗೆಯ ಮಾತುಗಳು ಹಲವು ಮೂಲೆಗಳಿಂದ ಬಂದಿವೆ. ಇಂಥವರ ಅಭಿಪ್ರಾಯದಲ್ಲಿ, ಪತಂಜಲಿಯು ಯೋಗ ಸೂತ್ರದಲ್ಲಿ ಏನನ್ನು ಹೇಳಿದ್ದಾನೋ ಅದನ್ನೇ ಚಾಚೂ ತಪ್ಪದೆ ಪಾಲಿಸಿದರೆ ಮಾತ್ರ ಅದು ಯೋಗ! ಮುಖ ಕಿವುಚಿ ಕಸರತ್ತು ಮಾಡುತ್ತಾರೆ. ಯೋಗವೆಂದರೆ ನಾಯಿಯು ಬೆಳಗ್ಗೆ ಎದ್ದು ಮೈಮುರಿದಂತೆ ಎಂಬೆಲ್ಲ ಮಾತುಗಳೂ ಬಂದಿವೆ.[3] ಚೀನಾದಲ್ಲಿ ಯೋಗ ದಿನವನ್ನು ಆಚರಿಸಿದ ಬಗ್ಗೆ 'ಹೊಸತು' ಮಾಸಪತ್ರಿಕೆಯ ಸಂಪಾದಕೀಯದಲ್ಲಿ ಹೀಗೆ ಹೇಳಿದ್ದಾರೆ–''...ಅಲ್ಲಿಗೆ (ಚೀನಾಕ್ಕೆ) ಭಾರತದ ನಾಲ್ಕೈದು ಯೋಗ ಸಂಸ್ಥೆಗಳ ಪ್ರತಿನಿಧಿಗಳು ಹೋಗಿದ್ದರು. ಮೈಸೂರಿನ ಪಟ್ಟಾಭಿ ಜೋಯಿಸರ ಸಂಸ್ಥೆಯ ಪ್ರತಿನಿಧಿ ಅವರಲ್ಲೊಬ್ಬರು. ಸಮಾವೇಶದಲ್ಲಿ ಅವರು ಎದುರಿಸಬೇಕಾಗಿ ಬಂದ ಪ್ರಶ್ನೆ ಇದು: 'ಪತಂಜಲಿಯ

ಹಾದಿಯನ್ನು ಕೈಬಿಟ್ಟು ನೀವು ನಿಮ್ಮದೇ ಕಸರತ್ತಿನ ಯೋಗ ಹೇಳಿ ಕೊಡುತ್ತಿದ್ದೀರಿ? ಅದು ಯುಕ್ತವೇ?' ಆ ಪ್ರಶ್ನೆಯು ಮೂಲಭೂತವಾದುದು ಮತ್ತು ಅನೇಕ ಯೋಗ ಸಂಸ್ಥೆಗಳು ಅದಕ್ಕೆ ಉತ್ತರ ಕೊಟ್ಟುಕೊಳ್ಳಬೇಕು. ಆಗ ಹಾಟ್ ಯೋಗ, ಸುದರ್ಶನ ಕ್ರಿಯಾ, ಮಲ್ಲಕಂಭ ಯೋಗ ಮುಂತಾದವೆಲ್ಲಾ ಪತಂಜಲಿಯಿಂದ ಎಷ್ಟು ದೂರ ಸರಿದಿವೆ ಎಂದು ತಿಳಿಯುತ್ತದೆ. ಯೋಗ ಸ್ಪರ್ಧೆಗಳು ಸಹ ನಡೆಯುತ್ತವೆ. ಅಲ್ಲಿ ಯೋಗಪಟುಗಳು ಕ್ಲಿಷ್ಟವಾದ ಆಸನ ಮಾಡುತ್ತಾರೆ. ಆದರೆ ಆ ಆಸನ ಸ್ಥಿತಿಯನ್ನು 15 ಸೆಕೆಂಡುಗಳಿಗಿಂತಲೂ ಜಾಸ್ತಿ ಉಳಿಸಿಕೊಳ್ಳುವುದಿಲ್ಲ. ಮುಖವನ್ನೆಲ್ಲಾ ಕಿವುಚಿಕೊಂಡು ಆಸನ ಮಾಡಿ ಮುಗಿಸುವುದು ಪತಂಜಲಿಯ 'ಸ್ಥಿರ ಸುಖಂ ಆಸನಂ' ಎಂಬುದಕ್ಕೆ ಉದಾಹರಣೆಯಾಗುವುದಿಲ್ಲ..."[4]

ಚೀನಾದಲ್ಲಿ ಕೇಳಲಾದ ಪ್ರಶ್ನೆ ಮೂಲಭೂತವಾದುದು ಎಂದು ಪರಿಗಣಿಸುವುದೇ ಒಂದು ರೀತಿಯಲ್ಲಿ 'ಮೂಲಭೂತವಾದ.' ವೇದಗಳಲ್ಲಿ ಮೂರ್ತಿ ಪೂಜೆಯನ್ನು ಮಾಡಬಾರದು ಎಂದು ಹೇಳಿದೆ; ಆದುದರಿಂದ ಹಿಂದುಗಳು ಮೂರ್ತಿ ಪೂಜೆ ಮಾಡಬಾರದು ಎಂದು ಹೇಳುವ ಮುಸ್ಲಿಂ ಧಾರ್ಮಿಕ ನಾಯಕರಿದ್ದಾರೆ. ಕಾಲಕಾಲಕ್ಕೆ ಬದಲಾವಣೆಗಳನ್ನು, ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದು ಭಾರತದಲ್ಲಿ ಸಹಜ ಮತ್ತು ಸಾಮಾನ್ಯ ಪ್ರಕ್ರಿಯೆ. ಅಮಿತಾವ್ ಘೋಷ್ ಸೇರಿದಂತೆ, ಮೇಲಿನ ರೀತಿಯಲ್ಲಿ ವಾದಿಸುವವರು ಭಾರತೀಯ ಬದುಕಿನ ಪರಂಪರೆ ಹಾಗೂ ಚಿಂತನಾ ಪರಂಪರೆಯನ್ನು ಸರಿಯಾಗಿ ಗ್ರಹಿಸಿಲ್ಲ ಎಂಬುದು ಸ್ಪಷ್ಟ. ಗ್ರಂಥಸ್ಥವಾದ ವಿಚಾರಗಳನ್ನು ಚಾಚೂ ತಪ್ಪದೆ ಪಾಲಿಸುವುದು ಭಾರತೀಯ ಬದುಕಿನ ಲಕ್ಷಣವಲ್ಲ. ಅಂದರೆ 'ಮೂಲಭೂತ ವಾದ' ಇಲ್ಲ ಎಂದರ್ಥ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಳೆದ ಕೆಲವು ವರ್ಷಗಳಿಂದ ಅದು ತಲೆ ಎತ್ತುತ್ತಿದೆ. ಅದಕ್ಕೆ ಕೆಲವು ಕಾರಣಗಳೂ ಇವೆ. ಬೇರೆ ಕಡೆ ಇದನ್ನು ಚರ್ಚಿಸಲಾಗಿದೆ.[5]

ಆದರೆ ಭಾರತೀಯ ಪರಂಪರೆಯಲ್ಲಿ ವೇದಗಳನ್ನು ಪೂಜ್ಯವೆಂದು ಹಾಗೂ ಆರಾಧ್ಯವೆಂದು ಭಾವಿಸುವವರೂ ಅದರಲ್ಲಿ ಹೇಳಿದ್ದೆಲ್ಲವನ್ನೂ ಹಾಗೆ ಹಾಗೆಯೇ ಬದುಕಲ್ಲಿ ಅನುಸರಿಸುವವರಲ್ಲ. ಚಾರಿತ್ರಿಕ ಸನ್ನಿವೇಶಗಳಿಗೆ ಅನುಗುಣವಾಗಿ ಪರಿಷ್ಕರಣೆ ನಡೆಯುತ್ತಲೇ ಇರುತ್ತದೆ. ಧರ್ಮ ಗ್ರಂಥಕ್ಕಿಂತಲೂ ರೂಢಿ ಅಥವಾ ಸಂಪ್ರದಾಯಗಳಿಗೆ ಮಹತ್ವ ಹೆಚ್ಚು. ಇದು ಬೇರೆಯೇ ಚರ್ಚೆಯಾದರೂ ಪತಂಜಲಿಯಿಂದ ದೂರ ಸರಿದ ಆಕ್ಷೇಪವನ್ನು ನೋಡುವಾಗ ಈ ಅಂಶವೂ ನಮಗೆ ಹೆಚ್ಚಿನ ಬೆಳಕನ್ನು ನೀಡುತ್ತದೆ.

ಪತಂಜಲಿಯ ಯೋಗ ಸೂತ್ರಕ್ಕೆ ತಮ್ಮ ತಮ್ಮ ಅನ್ವೇಷಣೆ ಹಾಗೂ ಸಾಧನೆಗಳ ಮೂಲಕ ಹಲವಾರು ಮಂದಿ ಹೊಸತನ್ನು ಸೇರಿಸಿದ್ದಾರೆ. ಅದರರ್ಥ ಅವರು ಪತಂಜಲಿಯನ್ನು ಬಿಟ್ಟಿದ್ದಾರೆ ಎಂದಲ್ಲ. ಇಂದು ಯೋಗ ಗುರುಗಳು ಎಂದು ಹೇಳಿಕೊಳ್ಳುವವರೆಲ್ಲ ಪರಿಪೂರ್ಣರು, ಪ್ರಾಮಾಣಿಕರು ಎಂದು ನಾನು ವಾದಿಸುತ್ತಿಲ್ಲ. ಹಾಗೆಂದು ಪತಂಜಲಿಯಿಂದ ದೂರ ಸರಿಯುವುದು ಎಂಬುದು ಆಕ್ಷೇಪಣೆಗೆ ಕಾರಣವಾಗಬೇಕಿಲ್ಲ. ಭಾರತೀಯರಲ್ಲಿರುವ, ಮೇಲೆ ಹೇಳಿದ ಹೊಂದಾಣಿಕೆ ಹಾಗೂ ಬದಲಾವಣೆಯ ಗುಣಗಳಿಂದಾಗಿಯೇ, ಯೋಗ ಕಾರ್ಯ ಕ್ರಮದಲ್ಲಿ ಸೂರ್ಯ ನಮಸ್ಕಾರವನ್ನು ಬಿಡುವುದು ದೊಡ್ಡ ಸಮಸ್ಯೆಯಲ್ಲ. ಓಂಕಾರವನ್ನು ಉಚ್ಚರಿಸುವುದಿಲ್ಲವೆಂಬ ಹಠವಿದ್ದವರು ಓಂಕಾರವನ್ನು ಬಿಟ್ಟು ಯೋಗ ಮಾಡುವುದೂ ಕಷ್ಟವಲ್ಲ. ಪತಂಜಲಿ ಯೋಗಸೂತ್ರವನ್ನೇ ಒಂದಕ್ಷರ ಬಿಡದೆ ಪಾಲಿಸಬೇಕೆಂದು ಹೇಳಲು ಅದೇನು ಸೆಮಿಟಿಕ್ ಮತಗಳ ಪವಿತ್ರ ಗ್ರಂಥ ಅಲ್ಲವಲ್ಲ? ಸರಿತಪ್ಪುಗಳನ್ನು ಪವಿತ್ರಗ್ರಂಥಗಳ ಆಧಾರದಲ್ಲಿ ತೀರ್ಮಾನಿಸುವ ಚಿಂತನೆಯನ್ನು ಮೀರಲು ನಮ್ಮ ದೇಶದ ಸೆಕ್ಯುಲರ್‌ವಾದಿಗಳಿಗೆ ಸಾಧ್ಯವಾಗಿಲ್ಲ.

ಇನ್ನು ಬರಗೂರು ರಾಮಚಂದ್ರಪ್ಪನವರು ಯೋಗವನ್ನು ನಿರರ್ಥಕವೆನ್ನಲು ಏನೆಲ್ಲಾ ದ್ರಾವಿಡ ಪ್ರಾಣಾಯಾಮ ಮಾಡಿದ್ದಾರೆ ಎಂಬುದನ್ನು ನೋಡಬೇಕಾದರೆ ವಿಜಯ ಕರ್ನಾಟಕ

ದಲ್ಲಿ ಅವರು ಬರೆದ ಅಂಕಣ ಲೇಖನವೊಂದನ್ನು ಓದಬೇಕು.[6] ಈ ದ್ರಾವಿಡ ಪ್ರಾಣಾಯಾಮ ದಲ್ಲಿ ಅಂತರಂಗ–ಬಹಿರಂಗ, ಆತ್ಮ–ದೇಹ ಎಂದೆಲ್ಲಾ ವ್ಯಾಖ್ಯಾನಿಸುತ್ತಾ ಕೊನೆಯ ಭಾಗದಲ್ಲಿ ಹೀಗೆ ಹೇಳುತ್ತಾರೆ – ''ಸಮಕಾಲೀನ ಸಂದರ್ಭದಲ್ಲಿ ಯೋಗವನ್ನು ಆತ್ಮದಿಂದ ದೇಹಕ್ಕೆ ಸ್ಥಳಾಂತರಿಸಿ ಶರೀರ ವ್ಯಾಯಾಮದ ರೂಪ ಕೊಡಲಾಗಿದೆ. ಧರ್ಮಯೋಗ ವೆಂಬುದನ್ನು ಹಿಂದೂ ಧರ್ಮಕ್ಕೆ ಲಗತ್ತಿಸಿ ಸಂಕುಚಿತಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿಯೇ ಕೆಲವು ಯೋಗ ಗ್ರಂಥಗಳು 'ಓಂ' ಎಂದು ಗೋಡೆ ಮೇಲೆ ಬರೆದು ಅದನ್ನೇ ನೋಡುತ್ತ ವಿವಿಧ ಸ್ತರದಲ್ಲಿ 'ಓಂ' ಮಂತ್ರವನ್ನು ಉಚ್ಚರಿಸುತ್ತ ಏಕಾಗ್ರತೆಯನ್ನು ಸಾಧಿಸಬೇಕೆಂದು ಸೂಚಿಸುತ್ತವೆ. ಯಾರು ಏನೇ ಹೇಳಿದರೂ 'ಓಂ' ಮಂತ್ರೋಚ್ಚಾರಣೆಯ ನಿಬಂಧನೆಯು ಯೋಗವನ್ನು ನಿರ್ದಿಷ್ಟ ಧರ್ಮಕ್ಕೆ ಸೀಮಿತಗೊಳಿಸುತ್ತದೆ. ಇದನ್ನು ಸಮರ್ಥಿಸುವಂತೆ ಯೋಗಾಭ್ಯಾಸ ಗುರುಗಳು ಒಂದೇ ಧರ್ಮಕ್ಕೆ ಸೇರಿದವರಾಗಿದ್ದಾರೆ. ಆದ್ದರಿಂದ ಹಿಂದೂಗಳಲ್ಲದವರು ಯೋಗವನ್ನು ಅನುಮಾನ ದಿಂದ ನೋಡುವಂತಾಗಿದೆ. ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ಈ ಅನುಮಾನಗಳನ್ನು ಅನಿವಾರ್ಯವಾಗಿ ಹೋಗಲಾಡಿಸುವ ಕೆಲವು ಪ್ರಯತ್ನಗಳು ನಡೆದಿದ್ದು ನಿಜವಾದರೂ ಯೋಗವನ್ನು ಜಾತ್ಯಾತೀತ ನೆಲೆಗೆ ಕೊಂಡೊಯ್ಯಲು ಇನ್ನೂ ಸಾಧ್ಯವಾಗಿಲ್ಲ,'' ಬರಗೂರರು ಆರೋಪಿಸುವಂತೆ ಯೋಗವನ್ನು ಸಂಕುಚಿತಗೊಳಿಸಿದ್ದು ಯಾರು? ಯೋಗಾಭ್ಯಾಸ ಗುರುಗಳು ಒಂದೇ ಧರ್ಮಕ್ಕೆ ಸೇರಿದವರಾಗಿರಲು ಆ ಒಂದೇ ಧರ್ಮದವರು ಕಾರಣರೋ ಅಥವಾ ಇತರ ಧರ್ಮದವರು ಯೋಗವನ್ನು ಸ್ವೀಕರಿಸದೇ ಇರುವುದು ಕಾರಣವೋ? ಹಿಂದೂ ಗಳಲ್ಲದವರು ಯೋಗವನ್ನು ಅನುಮಾನದಿಂದ ನೋಡುವ ಹಾಗೆ ಮಾಡುತ್ತಿರುವವರು ಯಾರು? ಜಾತ್ಯತೀತ ನೆಲೆಗೆ ಯೋಗವನ್ನು ಕೊಂಡೊಯ್ಯಬೇಕಾದವರು ಯಾರು? ಇಷ್ಟಕ್ಕೂ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಎಂಬ ಪರಿಕಲ್ಪನೆ ಬರುವುದಕ್ಕೂ ಮೊದಲೇ ಭಾರತದಲ್ಲಿ ಯೋಗ ಪ್ರಚಾರ ನಡೆದೇ ಇಲ್ಲವೇ? ಸೋಗಿನ ಜಾತ್ಯತೀತವಾದಿಗಳಿಗೆ ಯೋಗ ಪ್ರಚಾರ ನಡೆಯುತ್ತಿದೆ ಎಂದೆಲ್ಲ ಗೊತ್ತಾದದ್ದೆ ಈಗ. ಅವರ ಅಜ್ಞಾನಕ್ಕೆ ಅಥವಾ ಅಲಕ್ಷ್ಯಕ್ಕೆ ಯಾರು ಹೊಣೆ? ಯೋಗವು ಜಾತ್ಯತೀತವಾಗಬೇಕು ಎಂದು ಬರಗೂರರು ಹೇಳುತ್ತಾರಾದರೆ ಅದರರ್ಥ ಅದು ವ್ಯಾಪಕವಾಗಿ, ಸಾರ್ವತ್ರಿಕವಾಗಿ ಹರಡಬೇಕು ಎಂಬುದೇ ಆಗಿದೆ. ಆದರೆ, ಅವರ ಲೇಖನವೇ ಯೋಗವನ್ನು ದುರ್ಬಲ ಬೆಳಕಿನಲ್ಲಿ ತೋರಿಸುವ ಯತ್ನದ ಒಂದು ಭಾಗವೇ ಆಗಿದೆ. ಹೀಗಿರುವಾಗ ಯೋಗವನ್ನು ಜಾತ್ಯತೀತಗೊಳಿಸಲು ಅಡ್ಡಿಯಾಗುವವರು ಯಾರು?

ಯೋಗವನ್ನು ಜಾತ್ಯಾತೀತ ನೆಲೆಗೆ ಕೊಂಡೆಯ್ಯಲು ಇನ್ನೂ ಸಾಧ್ಯವಾಗಿಲ್ಲ ಎನ್ನುವ ಬರಗೂರರು ತಕ್ಷಣವೇ ಮುಂದುವರಿಸಿ ಹೇಳುವ ಮಾತುಗಳು ಹೀಗಿವೆ – ''ಈಗ ಯೋಗದ ಕಲ್ಪನೆಯೇ ಬದಲಾಗಿದೆ. ಸಕಾರಾತ್ಮಕ ಬದಲಾವಣೆಗಳು ಯಾವತ್ತೂ ಸ್ವಾಗತಾರ್ಹ. ಆದರೆ ಆತ್ಮ ಮತ್ತು ದೇಹಗಳನ್ನು ಒಂದುಗೂಡಿಸಿ ಏಕಾಗ್ರತೆ ಸಾಧಿಸುವ ಯೋಗದ 'ಸುಖ' ವನ್ನು ಬಹಿರಂಗ ಪ್ರದರ್ಶನದ 'ಭೋಗ' ವನ್ನಾಗಿಸಿ ಕೆಲವು ಧರ್ಮಗುರುಗಳು ಜಾಗತಿಕ ಮಾರುಕಟ್ಟೆಯ ಸರಕಾಗಿಸುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಏಕಾಗ್ರತೆ ಮತ್ತು ಏಕಾಂತಕ್ಕಿರುವ ಸಂಬಂಧವನ್ನೇ ಈ ಬಹಿರಂಗ ಪ್ರದರ್ಶನಗಳು ಕಡಿದು ಹಾಕುತ್ತಿವೆ. ಇಲ್ಲಿ ಯೋಗವನ್ನು ಬೋಧಿಸುತ್ತಿರುವ ಧರ್ಮಗುರುಗಳು ದೈಹಿಕ ಶಿಕ್ಷಕರ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಕಲಿಕೆಗಾಗಿ ಬಂದವರು ಪ್ರೌಢಶಾಲಾ ವಿದ್ಯಾರ್ಥಿಗಳಾಗುತ್ತಿದ್ದಾರೆ. ಗುರು–ಶಿಷ್ಯ ಸಂಬಂಧದ ಬದಲು ಇಲ್ಲಿ ಸಾಮೂಹಿಕ ಉತ್ಪಾದನಾ ರೂಪವೇ ಪ್ರಧಾನವಾಗುತ್ತಿದೆ. ಯೋಗದ ಪರಿಕಲ್ಪನೆಗೆ ಒದಗಿದ ಈ ದುರವಸ್ಥೆಯನ್ನು ಗಮನಿಸುವ ಬದಲು ಅದರ ಅಂತಾರಾಷ್ಟ್ರೀಯ ವಿಸ್ತರಣೆಯ ಬಗ್ಗೆ ಹೆಮ್ಮೆ ಪಡಲಾಗುತ್ತಿದೆ. ಯೋಗವೆನ್ನುವುದು ಕೇವಲ ಶಾರೀರಿಕ ಅಭ್ಯಾಸವಾಗುವುದಾದರೆ ದೈಹಿಕ

ಶಿಕ್ಷಣದ ಇತರೆ ರೂಪಗಳಿಗೂ ಇದಕ್ಕೂ ಇರುವ ವ್ಯತ್ಯಾಸವೇನು ಎಂಬ ಪ್ರಶ್ನೆ ಏಳುತ್ತದೆ. ಈ ಪ್ರಶ್ನೆಯ ಹಿನ್ನೆಲೆಯಲ್ಲೇ ಯೋಗ ಪ್ರತಿಪಾದಕರ ಉದ್ದೇಶಗಳೂ ಪ್ರಶ್ನಾರ್ಹವಾಗಿ ಕಾಣುತ್ತವೆ. ಯೋಗವನ್ನೂ ಧಾರ್ಮಿಕ ಮೂಲಭೂತವಾದಕ್ಕೆ ಬಳಸಿಕೊಳ್ಳುತ್ತಿರಬಹುದೆ ಎಂದು ಅನುಮಾನಿಸಲು ಅವಕಾಶವಾಗುವಂತೆ 'ಅಂತಾರಾಷ್ಟ್ರೀಯ ಯೋಗದಿನ'ವನ್ನು ವಿಜೃಂಭಿಸಲಾಗಿದೆ. ಧರ್ಮ ಸಂಬಂಧವಲ್ಲದೆ ಮಾರುಕಟ್ಟೆ ಸಂಬಂಧವನ್ನು ಮುನ್ನೆಲೆಗೆ ತಂದು ಭೋಗದ ಸರಕನ್ನಾಗಿಸುವ ಉದ್ಯಮ ರೂಪವೂ ಚಾಲ್ತಿಗೆ ಬಂದಿದೆ. ಆದ್ದರಿಂದಲೇ ನ್ಯೂಯಾರ್ಕ್ ಒಂದರಲ್ಲೇ 5450 ಯೋಗ ಸ್ಟುಡಿಯೋಗಳು ಸ್ಥಾಪನೆಯಾಗಿವೆ. ಯೋಗ ದಿನಕ್ಕೆ ಮುಂಚೆ ಒಂದೇ ತಿಂಗಳಲ್ಲಿ ಯೋಗ ಪೂರಕವೆಂಬ 500 ಸಾಮಗ್ರಿಗಳು ಮಾರುಕಟ್ಟೆಗೆ ಬಂದಿವೆ." ಬರಗೂರರ ಈ ಮೇಲಿನ ಮಾತುಗಳಲ್ಲಿ ಕೂಡ ಯೋಗವೆಂದರೆ ಇಂದು ಕೇವಲ ಶಾರೀರಿಕ ಅಭ್ಯಾಸವಾಗಿದೆ ಎಂಬ ಅಥವಾ ಶಾರೀರಕ ಅಭ್ಯಾಸವು ಯೋಗದ ಭಾಗವಲ್ಲ ಎಂಬ ತಪ್ಪು ಕಲ್ಪನೆಯಿದೆ. ಯೋಗವೆಂದರೆ ಕೇವಲ ಶಾರೀರಿಕ ಅಭ್ಯಾಸ ಎಂದು ಯಾವ ಯೋಗ ಗುರುಗಳೂ ಕಲಿಸುವುದಿಲ್ಲ. ಯೋಗವನ್ನು ಅಂತಾರಾಷ್ಟ್ರೀಯಗೊಳಿಸುವುದೆಂದರೆ ಜಾತ್ಯತೀತಗೊಳಿಸುವ ಪ್ರಕ್ರಿಯೆಯಲ್ಲಿ ಬಹುದೊಡ್ಡ ಮುನ್ನೆಗೆತ ಎಂದು ಬರಗೂರರು ಯಾಕೆ ಭಾವಿಸುವುದಿಲ್ಲ? ಬದಲಾಗಿ ಯೋಗ ಪ್ರತಿಪಾದಕರನ್ನು ಕಂಡು ಸಂದೇಹಪಡುತ್ತಾ ಕರುಬುವುದೇಕೆ? ಇವರಿಗೆ ಬೇಕಾದಂತೆ ಸರಿಯಾದ ರೀತಿಯಲ್ಲಿಯೇ ಅದನ್ನು ಜಾತ್ಯತೀತಗೊಳಿಸಲು ಇವರೇಕೆ ಪ್ರಯತ್ನಿಸುವುದಿಲ್ಲ? ಏಕಾಂತದಲ್ಲಿ ಗುರು–ಶಿಷ್ಯರೊಳಗೆ ಇರುವಂಥದ್ದು ಇವರ ಬಯಕೆಯಂತೆ ಜಾತ್ಯತೀತಗೊಂಡು ವ್ಯಾಪಕವಾಗುವುದು ಹೇಗೆ? ಯೋಗವು ಬಹಿರಂಗ ಪ್ರದರ್ಶನವಾಗಬಾರದು ಎನ್ನುತ್ತಾ ಏಕಾಂತದಲ್ಲಿ ಗುರುಶಿಷ್ಯ ಸಂಬಂಧ ಸ್ಥಾಪಿತವಾಗಿ ಉಳಿಯಬೇಕು ಎಂದು ಭಾವಿಸುವ ಇವರು ಹಿಂದಿನ ಕಾಲದಲ್ಲಿ ಗುರುಕುಲದೊಳಗೆ ತಮಗೆ ಬೇಕಾದ ಕೆಲವರನ್ನು ಮಾತ್ರ ಆಯ್ದು ಶಿಷ್ಯರಾಗಿ ಸ್ವೀಕರಿಸುತ್ತಿದ್ದ ವ್ಯವಸ್ಥೆಯನ್ನು ಶೋಷಕ ವ್ಯವಸ್ಥೆ ಎಂದು ಹೇಗೆ ಪರಿಗಣಿಸಿಯಾರು?

ಯೋಗಾಭ್ಯಾಸಗಳಿಗೆ ಬಹಿರಂಗ ಪ್ರದರ್ಶನ ಅಗತ್ಯವಿದೆಯೇ ಎಂಬುದು ಬೇರೆಯೇ ಪ್ರಶ್ನೆ. ಆದರೆ, ಯಾವುದನ್ನಾದರೂ ಸಾರ್ವತ್ರಿಕವಾಗಿ, ಸಾರ್ವಜನಿಕವಾಗಿ ಲಭ್ಯಗೊಳಿಸುವ ಪ್ರಕ್ರಿಯೆಯಲ್ಲಿ ಸಾಮೂಹಿಕತೆ ಒಂದು ಸಹಜ ಪ್ರಕ್ರಿಯೆಯೇ ಆಗಿ ಬಿಡುತ್ತದೆ. ನಮ್ಮ ಆಧುನಿಕ ಶಿಕ್ಷಣವನ್ನೇ ಬೇಕಾದರೆ ಉದಾಹರಣೆಯಾಗಿ ಪರಿಗಣಿಸಬಹುದು. ಒಂದೆಡೆ ಯೋಗವು ಜಾತ್ಯತೀತವಾಗಿಲ್ಲ ಎಂದು ದುಃಖಿಸುವ ಬರಗೂರರು ಇನ್ನೊಂದೆಡೆ ಯೋಗ ಪ್ರತಿಪಾದಕರು ಯೋಗವನ್ನು ಧಾರ್ಮಿಕ ಮೂಲಭೂತವಾದಕ್ಕೆ ಬಳಸಿಕೊಳ್ಳುತ್ತಿರಬಹುದೆ ಎಂಬ ಅನುಮಾನವನ್ನೂ ಹೊರಹಾಕುತ್ತಾರೆ. ಯೋಗದತ್ತ ಎಲ್ಲರನ್ನೂ ಸ್ವಾಗತಿಸಿದರೆ ಅದು ಧಾರ್ಮಿಕ ಮೂಲಭೂತವಾದ ಹೇಗಾಗುತ್ತದೆ? ಯೋಗವನ್ನು ಕಡ್ಡಾಯಗೊಳಿಸಬಾರದು ಎಂಬುದು ಸರಿ. ಆದರೆ ಬರಗೂರರ ಲೇಖನ ಸುತ್ತಿ ಬಳಸಿ ಪರಸ್ಪರ ವಿರುದ್ಧಾಭಿಪ್ರಾಯಗಳನ್ನೇ ಬಿಂಬಿಸುತ್ತದೆ. ನ್ಯೂಯಾರ್ಕ್ ಒಂದರಲ್ಲೇ 5450 ಯೋಗ ಸ್ಟುಡಿಯೋಗಳು ಸ್ಥಾಪನೆಯಾಗಿವೆ ಎಂಬುದು ನಿಜವಾದರೆ ಅದಷ್ಟನ್ನೂ ಹಿಂದೂಗಳು ಮಾತ್ರ ಬಳಸುತ್ತಾರೆಯೇ? ಇತರ ಧರ್ಮದವರು ಕೂಡ ಬಳಸುತ್ತಾರೆ ಎಂದಾದರೆ ಯೋಗವನ್ನು ಜಾತ್ಯತೀತ ನೆಲೆಗೆ ಕೊಂಡೊಯ್ಯಲು ಇನ್ನೂ ಸಾಧ್ಯವಾಗಿಲ್ಲ ಎಂದು ಇವರು ಹೇಗೆ ಹೇಳುತ್ತಾರೆ?

ಆರಂಭದಲ್ಲಿ ಉಲ್ಲೇಖಿಸಿದ ದಿನೇಶ್ ಅಮೀನ್ ಮಟ್ಟು ಅವರ ಲೇಖನದಲ್ಲಿ ಯೋಗವನ್ನು 'ವೈದಿಕ' ವಿಭಾಗಕ್ಕೆ ಸೇರಿಸುತ್ತಾ ವೈದಿಕ–ಅವೈದಿಕ ಎಂದು ವಿಭಾಗಿಸುವ ದೃಷ್ಟಿಯಿದೆ. ಪ್ರತಿಯೊಂದನ್ನು ಇದು ವೈದಿಕ, ಇದು ಅವೈದಿಕ ಎಂದು ಗೆರೆ ಎಳೆದು ಪ್ರತ್ಯೇಕಿಸುವ ಕ್ರಮ

ಕೂಡ ತೀರಾ ಸರಳೀಕರಣವಾಗುತ್ತದೆ. ವೈದಿಕವಾದುದನ್ನು ಅವೈದಿಕರು ದೂರವೇ ಇಡಬೇಕು ಅಥವಾ ಅವೈದಿಕ ಮೂಲದ್ದನ್ನು ವೈದಿಕ ಪರಂಪರೆಯ ಹಿನ್ನೆಲೆಯವರು ದೂರವೇ ಇಡಬೇಕು ಎಂಬಂಥ ಮನೋಭಾವವು ಸಾಂಸ್ಕೃತಿಕ ಚಲನಶೀಲತೆಯನ್ನು ಒಪ್ಪದ ಸಂಕುಚಿತ ದೃಷ್ಟಿಯಾಗುತ್ತದೆ. ಸಾಂಸ್ಕೃತಿಕ ರಾಜಕಾರಣದ ಕುರಿತಾದ ಅತಿರೇಕದ ಪ್ರತಿಕ್ರಿಯೆ ಇದು. ಸಾಂಸ್ಕೃತಿಕ ರಾಜಕಾರಣದ ಬಗ್ಗೆ ಇಂಥ ಧೋರಣೆ ಹೊಂದಿದವರು ಸ್ವ ಇಚ್ಛೆಯ ಮತಾಂತರ ದಂಥ ಪ್ರಕ್ರಿಯೆಗಳನ್ನಾದರೂ ಸಮರ್ಥಿಸಲು ಸಾಧ್ಯವೇ?

ಇಂದಿನ ದಿನಗಳಲ್ಲಂತೂ ಇವರು ವೈದಿಕ ಪರಂಪರೆಯಲ್ಲಿ ಹುಟ್ಟಿದವರು. ಇವರು ಅವೈದಿಕ ಪರಂಪರೆಯಲ್ಲಿ ಹುಟ್ಟಿದವರು ಎಂಬ ಭೇದ ಮಾಡದೇ ಮಧುಮೇಹ, ರಕ್ತದೊತ್ತಡದಂಥ ಆರೋಗ್ಯ ಸಮಸ್ಯೆಗಳು ಬಾಧಿಸುತ್ತಿರುವಾಗ ಯೋಗದ ಉಪಯೋಗವನ್ನು ಇಂಥವರೇ ಪಡೆಯಬೇಕೆಂದಿಲ್ಲ. ಗುಪ್ತ ಸಾಧನೆಗೆ ಅದು ಸೀಮಿತವಾಗಬೇಕಾಗಿಯೂ ಇಲ್ಲ.

ಯೋಗಕ್ಕೆ ಮಣೆ ಹಾಕುವ ಬದಲು ಸರಕಾರಗಳು ಪೌಷ್ಟಿಕ ಆಹಾರ ಒದಗಿಸುವತ್ತ ಗಮನ ಕೊಡಬೇಕು ಎಂದು ಹಲವು ಲೇಖಕರು ವಾದಿಸಿದ್ದುಂಟು. ಆಹಾರ ಮೊದಲ ಆದ್ಯತೆ ಆಗಬೇಕೆಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಒಂದು ಆದ್ಯತೆಯನ್ನು ಪೂರ್ತಿಯಾಗಿ ಪೂರೈಸಿದ ಬಳಿಕ ಮಾತ್ರವೇ ಇನ್ನೊಂದರ ಕಡೆಗೆ ಗಮನ ಹರಿಸಬೇಕೆಂದು ಹೇಳಿದರೆ ಹೇಗೆ? ಹಾಗೆ ಇರಬೇಕೆಂದಾದರೆ ಆಹಾರ ಮತ್ತು ನಾಗರಿಕ ಪೂರೈಕೆ, ವಿತ್ತ, ಗೃಹ ಮುಂತಾದ ಕೆಲವೇ ಖಾತೆಗಳನ್ನೂ ಬಿಟ್ಟು ಉಳಿದ ಸಂಸ್ಕೃತಿ, ಕ್ರೀಡೆ ಇತ್ಯಾದಿ ಖಾತೆಗಳನ್ನು ಸದ್ಯಕ್ಕೆ ಅಮಾನತಿನಲ್ಲಿ ಇಡಬೇಕಷ್ಟೆ. ಆರೋಗ್ಯ ಕೂಡ ಅಗತ್ಯವೇ ತಾನೇ? ಮಕ್ಕಳ ಸ್ವಚ್ಛಂದ ಆಟ ಪಾಠ ವಿಹಾರಗಳಿಗೆ ಆದ್ಯತೆ ನೀಡಬೇಕೆಂದು ತಮ್ಮ ಲೇಖನದಲ್ಲಿ ಹೇಳುವ ದಿನೇಶ್ ಅಮೀನ್ ಮಟ್ಟು ಅವರು, ಭಾರತಕ್ಕೆ ಓಲಿಂಪಿಕ್ಸ್‌ನಲ್ಲಿ ಪದಕ ಬರುತ್ತಿಲ್ಲವೆಂದು ಕೊರಗುತ್ತಾರೆ. ಇದೂ ಒಂದು ವೈರುಧ್ಯವೇ. ಯಾಕೆಂದರೆ, ಹಲವು ದೇಶಗಳಲ್ಲಿ ಎಳೆಯ ಮಕ್ಕಳನ್ನು ಜಿಮ್ನಾಸ್ಟಿಕ್ಸ್ ಇತ್ಯಾದಿ ತರಬೇತಿ ಎಂಬ ನೆಪದಲ್ಲಿ ಹಿಂಸಿಸಿ, ಬಾಲ್ಯವನ್ನೇ ಕಸಿದುಕೊಂಡು ಓಲಿಂಪಿಕ್ಸ್ ಪದಕಗಳನ್ನೂ ಪಡೆಯಲಾಗುತ್ತದೆ.[7] ಮಟ್ಟು ಅವರ ಅಪೇಕ್ಷೆಯಂತೆ ಓಲಿಂಪಿಕ್ಸ್ ಪದಕದಿಂದ ದೇಶಕ್ಕೆ ಗೌರವ ಬರುವುದಾದರೆ ಯೋಗದಿಂದ ಯಾಕೆ ಬರಬಾರದು?

ಸಾಂಸ್ಕೃತಿಕ ರಾಜಕಾರಣದ ಪ್ರಶ್ನೆ ಕೇವಲ ಯೋಗದ ಕುರಿತಾದ ಆಕ್ಷೇಪಕ್ಕೆ ಸೀಮಿತ ವಾದುದಲ್ಲ. ಇಂಥ ಗೊಣಗುವಿಕೆಗಳ ಹಿಂದಿನ ಸಾಂಸ್ಕೃತಿಕ ರಾಜಕಾರಣದಲ್ಲಿ ಒಂದು ಸ್ಕೀಂ ಇದೆ. ಸಂಸ್ಕೃತ ಪ್ರಚಾರದ ಬಗ್ಗೆಯೂ ಇದೇ ಬಗೆಯ ಸಾಂಸ್ಕೃತಿಕ ರಾಜಕಾರಣದ ಆರೋಪವಿದೆ. ಕೆಲವರ್ಷಗಳ ಹಿಂದೆ ಕರ್ನಾಟಕದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ ಆರಂಭಿಸಬೇಕೆಂದು ಬಿಜೆಪಿ ಸರಕಾರ ಹೊರಟಾಗ ಹಲವು ಮಂದಿ ಆಕ್ಷೇಪಿಸಿದರು. ನಿಜವಾಗಿ ಸಂಸ್ಕೃತ ಭಾಷೆ, ಸಾಹಿತ್ಯವು ಮಠ ಮಂದಿರಗಳ ಆವರಣದಿಂದ ಹೊರಬಂದು ಜಾತ್ಯತೀತವಾಗಿ ಎಲ್ಲರಿಗೂ ಲಭ್ಯವಾಗುವಂತೆ ಮಾಡುವಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಒಂದು ದೊಡ್ಡ ಹೆಜ್ಜೆ ಎಂದು ಎಲ್ಲ ಜಾತ್ಯತೀತ ವಾದಿಗಳೂ ಪ್ರಗತಿಪರರೂ ಸ್ವಾಗತಿಸಬೇಕಾದುದು ಸಹಜವೇ ಆಗಿತ್ತು. ಅಂತೂ ಸಂಸ್ಕೃತ ವಿ.ವಿ. ಸ್ಥಾಪನೆ ಆಯಿತು. ಅದರ ಉದ್ದೇಶ ಈಡೇರುತ್ತದೆಯೇ ಇಲ್ಲವೇ ಎಂಬುದನ್ನು ಕಾಲವೇ ಹೇಳಬೇಕು. ಆದರೆ, ಸಂಗೀತ ವಿವಿ ಇತ್ಯಾದಿ ಹಲವು ವಿಷಯಾಧಾರಿತ ವಿವಿಗಳ ಬಗ್ಗೆ ವಿರೋಧ ಇಲ್ಲದವರು ಸಂಸ್ಕೃತ ವಿವಿ ಆರಂಭದ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದು ಮತ್ತೊಂದು ಬಗೆಯ ಸಾಂಸ್ಕೃತಿಕ ರಾಜಕಾರಣವಲ್ಲದೆ ಬೇರೇನಲ್ಲ.

ಈ ದೇಶದಲ್ಲಿ ಸಮಾನ ನಾಗರಿಕ ಸಂಹಿತೆ ಜಾರಿಯಾಗಬೇಕೆಂಬ ಬೇಡಿಕೆ ಒಂದು ವಲಯದಿಂದ ಕೇಳಿ ಬರುತ್ತಲೇ ಇದೆ. ಮುಖ್ಯವಾಗಿ ಸಂಘ ಪರಿವಾರ ಅಥವಾ ಅಂಥ ದೃಷ್ಟಿಕೋನ

ಇರುವವರು ಈ ಒತ್ತಾಯವನ್ನು ಮಾಡುತ್ತಲೇ ಬಂದಿದ್ದಾರೆ. ಇದನ್ನು ಕೂಡ, ಹಿಂದೂಗಳ ಸಂಹಿತೆಯನ್ನು ಹೇರುವ ಸಾಂಸ್ಕೃತಿಕ ರಾಜಕಾರಣದ ಒಂದು ಭಾಗ ಎಂದು ಪರಿಗಣಿಸಿದವರಿದ್ದಾರೆ. ವಾಸ್ತವವಾಗಿ, ಸಮಾನ ನಾಗರಿಕ ಸಂಹಿತೆ ಪರವಾಗಿ ಮಾತನಾಡುವವರು ಯಾರೂ ಹಿಂದೂಗಳ ಸಂಹಿತೆಯನ್ನೇ ಎಲ್ಲರಿಗೂ ಅನ್ವಯಿಸಬೇಕು ಎಂದು ಹೇಳಿದ್ದಿಲ್ಲ. ಹಾಗೆ ಹೇಳಲು, ಸ್ಥಿರವಾದ, ಹಿಂದೂಗಳ ನಾಗರಿಕ ಸಂಹಿತೆ ಎಂಬೊಂದು ಸಂಹಿತೆ ಎಲ್ಲಿದೆ? ಅದಕ್ಕೆಷ್ಟು ತಿದ್ದುಪಡಿಗಳಾಗಿಲ್ಲ? ಹಿಂದೂಗಳಲ್ಲೇ ವಾರಸುದಾರಿಕೆಗೆ ಸಂಬಂಧಿಸಿದಂತೆ ನಮ್ಮ ಕರಾವಳಿಯ ಬಂಟರಿಗೂ ಬ್ರಾಹ್ಮಣರಿಗೂ ಒಂದೇ ಕಾನೂನು ಇಲ್ಲ. ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕನ್ನು ನೀಡುವ ಕಾನೂನು ಕಳೆದ ಕೆಲವರ್ಷಗಳ ಹಿಂದೆ ಜಾರಿಗೆ ಬಂದಿದೆ. ಶತಮಾನಗಳ ಹಿಂದೆಯೇ ಬರೆದಿಟ್ಟ ಚಿರಸ್ಥಾಯಿಯಾದ ಹಿಂದೂ ನಾಗರಿಕ ಸಂಹಿತೆ ಎಂಬುದಿಲ್ಲ. ಹೀಗಾಗಿ ಸಮಾನ ನಾಗರಿಕ ಸಂಹಿತೆ ಬಗ್ಗೆ ಮಾತನಾಡಿದಾಗ, ಸಾಂಸ್ಕೃತಿಕ ರಾಜಕಾರಣದ ಆರೋಪ ಬರಬಾರದಿತ್ತು. ಆದರೆ ನಾನು ಹೇಳಬೇಕಾದುದು ಆ ವಿಷಯವಲ್ಲ. ಈವರೆಗೆ ಬಲಪಂಥೀಯರು ಹೇಳುತ್ತಿದ್ದುದನ್ನೇ ಈಗ ರೊಮಿಲಾ ಥಾಪರ್ ಅವರಂಥ, ಸೆಕ್ಯುಲರ್‌ವಾದಿಗಳಿಗೆ ಆರಾಧ್ಯರಾದ ಇತಿಹಾಸಕಾರರು ಹೇಳುವಾಗ ಇವರೇನು ಮಾಡುತ್ತಾರೆ? ಭಾರತ ಸೆಕ್ಯುಲರ್ ಆಗಿರಲು ಹೊಂದಿರಬೇಕಾದ ಅಂಶಗಳ ಬಗ್ಗೆ ಹೇಳುತ್ತಾ ರೊಮಿಲಾ ಥಾಪರ್ ವ್ಯಕ್ತ ಪಡಿಸಿದ ಅಭಿಪ್ರಾಯ ಹೀಗಿದೆ – "... ನಮ್ಮ ಪ್ರಮುಖ/ ಪ್ರಾಥಮಿಕ ಅಸ್ಮಿತೆಯು ಪೌರನೆಂಬ ಅಸ್ಮಿತೆಯಾಗಿದೆ. ಬದಲಾಗಿ ಧರ್ಮದ, ಜಾತಿಯ, ಭಾಷೆಯ ಅಥವಾ ಜನಾಂಗದ ಅಥವಾ ಇನ್ನಾವುದೇ ಅಸ್ಮಿತೆಯಾಗಿರುವುದಿಲ್ಲ. ನಮ್ಮ ಪೂರ್ವಜರು ನಿಮ್ಮ ಪೂರ್ವಜರಿಗಿಂತ ಹಿಂದಿನವರು ಎಂಬುದರಲ್ಲಿ ಯಾವ ಹೆಗ್ಗಳಿಕೆಯೂ ಇಲ್ಲ. ಎಲ್ಲ ಧರ್ಮಗಳೂ ಒಂದೇ. ಅವುಗಳನ್ನು ನಂಬುವವರು ಹಾಗೂ ಪಾಲಿಸುವವರು ಮತ್ತು ತಮ್ಮನ್ನು ತಾವು ಭಾರತೀಯ ಪೌರರು ಎಂದು ಭಾವಿಸುವವರು ಎಲ್ಲಾ ನಾಗರಿಕರು ಸಂವಿಧಾನದ ಪ್ರಕಾರ ಸಮಾನ ಸಾಮಾಜಿಕ ಸ್ಥಾನವನ್ನು ಹೊಂದಿರುತ್ತಾರೆ. ಹಾಗಾಗಿ ಆ ಸಮಾನ ಸ್ಥಾನವನ್ನು ಕೋರುವುದರಲ್ಲಿ ನಾವೇನೂ ಸಂವಿಧಾನಕ್ಕೆ ವಿರೋಧವಾಗಿ ಹೋಗುತ್ತಿಲ್ಲ. ಈ ಕೋರಿಕೆಯು ಹಕ್ಕುಗಳ ಪರಿಧಿಯೊಳಗಿನದೇ ಆಗಿದೆ. ಕೆಲವರಿಗೆ ಹೆಚ್ಚು ಹಾಗೂ ಕೆಲವರಿಗೆ ಕಡಿಮೆ ಎಂಬ ಕಾನೂನಾತ್ಮಕವಾಗಿ ವ್ಯತ್ಯಾಸವೆನ್ನುವ ಸ್ಥಾನಮಾನವನ್ನು ನೀಡುವುದು ಜಾತ್ಯತೀತವಾದ ಕಾನೂನಲ್ಲ. ಇದು ದೋಷಯುಕ್ತವಾದ ಕಾನೂನು. ಹೆಚ್ಚಿನ ಸಂದರ್ಭಗಳಲ್ಲಿ ಈ ಕಾನೂನುಗಳು ಜನಸಮುದಾಯದ ಸಾಮಾಜಿಕ ಕಾರ್ಯನಿರ್ವಹಣೆಗೆ ಸಂಬಂಧಿಸಿದ್ದು ಆಗಿರುತ್ತದೆ.

ಕುಟುಂಬ, ಮದುವೆ, ಆಸ್ತಿ ಹಾಗೂ ಅಧಿಕಾರದ ವಿಷಯದಲ್ಲಿ ಖಂಡಿತವಾಗಿಯೂ ಹೊಸ ನಾಗರಿಕ ಕಾನೂನು ಬೇಕಿದೆ. ಮತ್ತು ಈ ಕಾನೂನು ಹಿಂದೂ ಕಾನೂನು ಅಥವಾ ಮುಸ್ಲಿಮ್ ಕಾನೂನು ಅಥವಾ ಸಿಖ್ ಕಾನೂನು ಎಂದಾಗದೇ ಈ ಎಲ್ಲ ವ್ಯತ್ಯಾಸಗಳನ್ನು ಮೀರಿದ ಕಾನೂನು ಆಗಿದ್ದು ಅದು ಭಾರತೀಯ ಪೌರನಿಗೆ ಅನ್ವಯ ಆಗುವಂತಹುದು ಆಗಿರಬೇಕು...''[8] ರೊಮಿಲಾ ಥಾಪರ್‌ರನ್ನು ಸಂದರ್ಭದಿಂದ ಪ್ರತ್ಯೇಕಿಸಿ ಉಲ್ಲೇಖಿಸಲಾಗಿದೆ ಎಂದು ಯಾರೂ ಅಂದುಕೊಳ್ಳಬಾರದೆಂದು ಕಾರಣಕ್ಕೆ ಇಷ್ಟು ದೀರ್ಘವಾಗಿ ಅವರ ಮಾತುಗಳನ್ನು ಉದ್ಧರಣೆ ಮಾಡಲಾಗಿದೆ. ನಾನು ದಪ್ಪ ಅಕ್ಷರಗಳಲ್ಲಿ ಉದ್ಧರಿಸಿದ ಸಾಲುಗಳನ್ನು ಗಮನಿಸಿ. ಇದು ಸಂಘ ಪರಿವಾರ ಹೇಳುವುದಕ್ಕಿಂತ ಬೇರೆಯಾಗಿದೆಯೇ? "ಮೊದಲು ಭಾರತೀಯ ಪೌರ ಎಂಬ ಐಡೆಂಟಿಟಿ. ಆನಂತರ ಧರ್ಮದ ಐಡೆಂಟಿಟಿ'' ಎಂಬ ಥಾಪರ್ ಅಭಿಪ್ರಾಯವನ್ನು ಅಪಾಯಕಾರಿ ಸಾಂಸ್ಕೃತಿಕ ರಾಷ್ಟ್ರೀಯತೆ ಎಂದಯ ಯಾರೂ ಯಾಕೆ ಆರೋಪಿಸುವುದಿಲ್ಲ? ಥಾಪರ್ ಅವರ ಮಾತು "ನಿಮ್ಮ ದೇಶಪ್ರೇಮವನ್ನು ಸಾಬೀತು ಪಡಿಸಿ'' ಎಂದು ಮುಸ್ಲಿಮರಿಗೆ ಹೇಳಿದಂತೆ

ಸೆಕ್ಯುಲರ್‌ವಾದಿಗಳಿಗೆ ಕಾಣಲಿಲ್ಲವೇ? ಅಥವಾ ಥಾಪರ್‌ಗೆ ಈಗ ಜ್ಞಾನೋದಯ ವಾಗಿರುವಂತೆ ಉಳಿದವರಿಗೆ ಎಂದು ಜ್ಞಾನೋದಯವಾದೀತು?

ವಿವೇಕಾನಂದರ ತತ್ತ್ವ ಪ್ರಚಾರ ಮುಂತಾದವುಗಳ ಬಗ್ಗೆ ಕೂಡ ಇಂಥ ಪ್ರಶ್ನೆಗಳನ್ನು ಎತ್ತುತ್ತಲೇ ಬಂದವರಿದ್ದಾರೆ. ವಿವೇಕಾನಂದರನ್ನು ಬಲಪಂಥೀಯರು ಹೈಜಾಕ್ ಮಾಡಿದ್ದಾರೆ ಎನ್ನುವವರು ಕೂಡ ಈ ಲೇಖನದ ಆರಂಭದಲ್ಲಿ ಕೇಳಲಾದ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಸಾಂಸ್ಕೃತಿಕ ರಾಜಕಾರಣ ಮಾಡದ ಅಥವಾ ಜನಪರ ಸಾಂಸ್ಕೃತಿಕ ರಾಜಕಾರಣ ಮಾಡುವ ಸೆಕ್ಯುಲರ್‌ವಾದಿಗಳು ವಿವೇಕಾನಂದರನ್ನು ಕಳೆದ ಹಲವಾರು ದಶಕಗಳಲ್ಲಿ ಯಾಕೆ ಬಳಸಿಕೊಳ್ಳಲಿಲ್ಲ? ಬಳಸಿಕೊಳ್ಳಲು ಅವರಿಗಿದ್ದ ಸಮಸ್ಯೆಯೇನು? ಯಾರನ್ನು ಮೆಚ್ಚಿಸಲಿಕ್ಕಾಗಿ ಯೋಗ, ಸಂಸ್ಕೃತ, ವಿವೇಕಾನಂದರನ್ನು ದೂರ ಇಟ್ಟರು? ಹಾಗೆ ದೂರ ಇಡುವ ಅಥವಾ ಇಟ್ಟ ಸಾಂಸ್ಕೃತಿಕ ರಾಜಕಾರಣದ ಮರ್ಮ ಏನು?

ಟಿಪ್ಪಣಿಗಳು

1. ಪ್ರಜಾವಾಣಿ 18–6–2015. ಈ ಲೇಖನಕ್ಕೆ ನಾನು ಸಣ್ಣ ಪ್ರತಿಕ್ರಿಯೆಯೊಂದನ್ನು ಬರೆದು ಕಳಿಸಿದ್ದೆ. ಅದು ಪ್ರಕಟವಾಗಲಿಲ್ಲ. ಅದೇ ಚಿಂತನೆಯನ್ನು ವಿಸ್ತರಿಸಿ ಈ ಲೇಖನವನ್ನು ಬರೆದಿದ್ದೇನೆ.
2. ವಾರ್ತಾ ಭಾರತಿ, 24–6–2015
3. ಸೀತಾರಾಮ್ ಯೆಚೂರಿಯವರು 'ನಾಯಿ ಮೈ ಮುರಿದಂತೆ' ಎಂದು ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು.
4. 'ಹೊಸತು' ಮಾಸ ಪತ್ರಿಕೆ, ಆಗಸ್ಟ್ 2015, ಪು. 3
5. ನೋಡಿ, ಅಜಕ್ಕಳ ಗಿರೀಶ ಭಟ್, 2007, 2011 ಬುದ್ಧಿಜೀವಿ ವರ್ಸಸ್ ಬೌದ್ಧಿಕ ಸ್ವಾತಂತ್ರ್ಯ, ಚಿಂತನ ಬಯಲು ಪ್ರಕಾಶನ, ಬಂಟ್ವಾಳ
6. 'ಯೋಗವನ್ನು ಭೋಗವನ್ನಾಗಿಸುತ್ತಿರುವ ಭಾರತ' ವಿಜಯ ಕರ್ನಾಟಕ, 31–07–2015
7. ಮಕ್ಕಳ ಹಕ್ಕುಗಳ ಬಗ್ಗೆ ಹಾಗೂ ಬಾಲಕಾರ್ಮಿಕರ ಬಗ್ಗೆ ಕಾಳಜಿ ವಹಿಸುವವರು ಈ ಮಕ್ಕಳ ಬಗ್ಗೆಯೂ ಯೋಚಿಸಬೇಕಾದದ್ದಿದೆ. ಹದಿನಾಲ್ಕು – ಹದಿನೈದು ವರ್ಷ ಪ್ರಾಯದ ಮಕ್ಕಳು ಅಂತಾರಾಷ್ಟ್ರೀಯ ಪದಕ ಪಡೆಯುತ್ತಾರೆಂದರೆ ಅವರ ತರಬೇತಿಯೆಂಬ ಶೋಷಣೆ ಯಾವ ವಯಸ್ಸಿನಲ್ಲಿ ಆರಂಭವಾಗಬಹುದು?
8. ರೊಮಿಲಾ ಥಾಪರ್ "ಭಾರತೀಯ ಸಮಾಜ ಹಾಗೂ ಜಾತ್ಯತೀತತೆ" (ಅನು: ರಾಜಲಕ್ಷ್ಮಿ ಎನ್.ಕೆ) ಲೋಕಜ್ಞಾನ, ಜನವರಿ–ಎಪ್ರಿಲ್ 2015, ಪು. 103–104

ತಿಳಿನೀಲ ನಭದಲ್ಲಿ
ಸಾಗರದ ಹರಹಲ್ಲಿ
ಕರಗಿ ಹೋಗಲಿ ನಮ್ಮ ಅಹಮಿಕೆಗಳು

ನವಶೋಧಿತ ನುಶಿಕೋಟೆ ತಾಮ್ರಪಟ ಶಾಸನ

ಡಾ. ಕೆ.ಎಸ್. ಪಾಟೀಲ
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುಂದಗೋಳ–581 113, ಜಿ: ಧಾರವಾಡ.

ನುಶಿಕೋಟೆ ಗ್ರಾಮವು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನಲ್ಲಿದೆ. ಇದು ಕುಮಟಾ ದಿಂದ ಉತ್ತರ ಮತ್ತು ಪಶ್ಚಿಮ ದಿಕ್ಕಿಗೆ ಅರಬ್ಬಿ ಸಮುದ್ರದವರೆಗೆ ವ್ಯಾಪಿಸಿದೆ. ಪೂರ್ವಕ್ಕೆ ಮಿರ್ಜಾನಕೋಟೆ ಮತ್ತು ಈಶಾನ್ಯಕ್ಕೆ ತದಡಿ ಹಾಗೂ ಗೋಕರ್ಣ ಕ್ಷೇತ್ರವಿದೆ. ಬಹುಶಃ ಇದು ವಾಣಿಜ್ಯ ಹಾಗೂ ವ್ಯಾಪಾರ ಕೇಂದ್ರವಾಗಿತ್ತು. ಇಲ್ಲಿ ದೊರೆತಿರುವ ನವಶೋಧಿತ ತಾಮ್ರಪಟ ಶಾಸನವು 17 ಏಪ್ರೀಲ್ 2015ರಂದು ಕರಾವಳಿ ಮುಂಜಾವು ಮತ್ತು 24 ಏಪ್ರೀಲ್ 2015ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವುದು. ಈ ತಾಮ್ರ ಶಾಸನವನ್ನು ಅಧ್ಯಯನ ಮಾಡಿ ಪ್ರಸ್ತುತ ಸಂಪ್ರಬಂಧವನ್ನು ರಚಿಸಲಾಗಿದೆ.

ಈ ತಾಮ್ರಪಟ ಶಾಸನವು ಎರಡು ಫಲಕಗಳನ್ನು (ಹಲಗೆಗಳನ್ನು) ಒಳಗೊಂಡಿದ್ದು, ಮೊದಲನೆಯ ಫಲಕದ ಮುಮ್ಮುಖ ಮತ್ತು ಹಿಮ್ಮುಖದಲ್ಲಿ ಬರವಣಿಗೆ ಬರೆಯಲಾಗಿದೆ. ಎರಡನೆಯ ಫಲಕ (ಹಲಗೆ)ದ ಮುಮ್ಮುಖದಲ್ಲಿ ಮಾತ್ರ ಬರವಣಿಗೆಯನ್ನು ಬರೆಯಲಾಗಿದೆ. ಶಾಸನವನ್ನು ವಿಜಯನಗರ ಕಾಲದ ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಬರೆದಿದೆ. ಒಟ್ಟು ಸುಮಾರು 39 ಸಾಲುಗಳಿವೆ. ಎಲ್ಲಾ ಅಕ್ಷರಗಳು ಸ್ಪಷ್ಟವಾಗಿವೆ. 3 ರಿಂದ 7ನೇ ಸಾಲುಗಳಲ್ಲಿ ತೇದಿಯ ವಿವರಗಳಿದ್ದು, ಶ್ರೀಮನ್ಮಪ ಶಾಲಿವಾಹನ ಶಕವರ್ಷ 1475ನೆಯ ಆನಂದ ಸಂವತ್ಸರ ಕಾರ್ತಿಕ ಶುದ್ಧ 5, ಗುರುವಾರ ಎಂಬ ಪದಗಳು ಸ್ಪಷ್ಟವಾಗಿವೆ. ಆದ್ದರಿಂದ ಈ ತೇದಿಯನ್ನು ಕ್ರಿ.ಶ. 1554 ಜುಲೈ 5 ಗುರುವಾರಕ್ಕೆ ಸಮಾನವೆಂದು ಪರಿಗಣಿಸಬಹುದು. ಶಾಸನದ ಪಾಠ, ಸಾರಾಂಶ ಮತ್ತು ಮಹತ್ವವನ್ನು ಈ ಕೆಳಗಿನಂತೆ ಗಮನಿಸಬಹುದು.

ಶಾಸನದ ಪಾಠ

ಮೊದಲನೆ ಪಟ ಮುಮ್ಮುಖ

1) ಶ್ರೀ ಮಹಾಂಡಳೇಶ್ವರ ಸಾ
2) ಳುವ ಕೃಷ್ಣದೇವರ್ಸವಡೇ
3) ರು॥ ಸ್ವಸ್ತಿ ಶ್ರೀಮನ್ಮುಪ ಶಾ
4) ಲಿವಾಹನ ಶಕ ವರು
5) ಸ 1475ನೇ ಆನಂದ
6) ಸಂಸ್ತರ ಕಾರ್ತಿಕ ಸು 5 ಗುರು
7) ವಾರ ॥ ಮಿಡಜೆ ಸೀಮೆ ನುಶಿಕೋಟೆ

8) ತಿಮ್ಮಗೌಡನ ಮಗ ಹೆಬರ ಹೊ(ಸು)ಟು
9) ಗೌಡಗೆ ಬರೆಸಿಕೊಟ ಸಾಧನ ಸಿ[ರು]ಪು ಹಾ
10) ಲಕಿಗೌಡ ಪಂಚವರ್ಗದವರು ಶ್ರೀ ಮ
11) [ಥ]ಳಿ ಮಟಕೆ ಗುರುಕಾಣಿಕೆ ಕೊಟು ಸಿಸ್ಯ
12) ವರ್ಗವಾಗಿ ನಡವಲಿ ಗುರುಮನೆ ಅಧಿಕಾ
13) ರಕೆ ನೇಮಕ ಮಾಡಿಕೊಡಬೇಕಂತ ಜಾತಿ
14) ವರ್ಗದವರು ಬಿಂನಮಾಡಿಕೊಂಡಲಿ ನಾ
15) ಉ ಅಪಣೆ ದಯಪಾಲಿಸಿದು [ಈ] ತಲ

ಹಿಮ್ಮುಖ

16) ಮಕಿಲಗತ ಅಚವೆ ಪರಿಯ
17) ಂತ ತಎಂಕಲಗೆ ಕೂನುರೇಗವಿ
18) ಯದರ ವಒಳಗೆ ಯರುವಂತ ಹಳಿ
19) ಯಲು ಯಿಹ ನಿಂನ ಜಾತಿ ವಿಚಾರಣೆ
20) ಬಗ್ಗೆ ನಿನಗೆ ಅಧಿಕಾರ ಕೊಟಿದೆವೆ ಆ
21) ಮೆರೆಗೆ ನಿಂನ ಕುಲದಲು ಅಪು ತ
22) ಪು ರಿಲವಕ್ರುಶ್ಯ ಯಿರುಳ ತಪಿದರೆ
23) ಅವರ ವಿಚಾರ ಮಾಡಿ ಕುಲದ ಇವ
24) ಉಪಕರ ಅಪರದ ತೆಗೆದುಕೊ[ಟ]
25) ಬಗ್ಗೆ ಸುಬ ಸೊಬನ ಆದರೆ ಪತ
26) ಮ ವೀಳ್ಯಮನವರ್ಧಿಯದಿತು ಸಹ ನಿ
27) ನಗೆ ನೇಮಕ ಮಾಡಿಕೊಟಿದೆ ಯಿ ಮೇರೆಗೆ
28) ನಿಂನ ಸಂತತಿ ಬಯಿಸ ಬರ
29) ಬೇಕೂ ಯಿನಬರ್ಧಿಗೆ ಕಾರಣಯಿಲ

ಎರಡನೆಯ ಪಟ ಮುಮ್ಮುಖ

30) ಯಂದು ಬರೆಸಿಕೊಟ ಸಾಧನ ನಿರುಹ
31) ಆದಿತ್ಯ ಚಂದ್ರ ಅನಿಲ ನಲಚದೇವ
32) ಬೂಮಿ ಆಕಸ ರಾಸಿ ಅದಯಂಯ
33) ಮಸ್ಯ ರಿಹಸ್ಯ ರಾತ್ರಿ ಚಉ ಒಂದೆ ಸಂದೆಯಿ 14
34) ಧರ್ಮ ಸಾಕ್ಷಿ ನಾರಗೆರ್ಧಿ ಯಿಟಗೌಡ ಗೊಳಿ
35) ಕೊಡಲ ಕೋಳಗೌಡ ಸಗಡಗೆರಿ ದೇವಗೌ
36) ಡ ಗೋಕರ್ಣದ ರಾಳ ರಾಮಗೌಡ ಯಿ 4 ಸಾ
37) ಕ್ಷಿ ರುಜು
38) ಚಂನಪುರ ನಾಗಪನ ಬರ
39) ದ ಸಾಧನ

ಶಾಸನದ ಸಾರಾಂಶ

ಈ ತಾಮ್ರ ಶಾಸನವು ವಿಜಯನಗರ ಮನೆತನದ ಮಹಾಮಂಡಳೇಶ್ವರನಾದ ಕೃಷ್ಣದೇವರಸ ವಡೆಯರ ಆಳ್ವಿಕೆಯನ್ನು ಪರಿಚಯಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ಮಿಡಜೆ (ಮಿರ್ಜಾನ) ಸೀಮೆಯ ನುಶಿಕೋಟೆಯ ತಿಮ್ಮಗೌಡನ ಮಗ ಹೆಬರ ಹೊ(ಸು)ಟು ಗೌಡಗೆ ಬರೆಸಿಕೊಟ್ಟ ಶಾಸನವಾಗಿದೆ. ಹಾಲಕ್ಕಿಗೌಡ ಸಮುದಾಯದ ಪಂಚವರ್ಗದವರು ಶ್ರೀ ಮಥಳಿ ಮಠಕ್ಕೆ (ಮಚ್ಚಳ್ಳಿ ತಾಲೂಕು ಕಾರವಾರ) ಗುರು ಕಾಣಿಕೆ ಕೊಟ್ಟು, ಆ ಮಠದ ಶಿಷ್ಯ ವರ್ಗವಾಗಿ ಗುರುಮನೆಯ ಅಧಿಕಾರಕ್ಕೆ ಅನುಗುಣವಾಗಿ ನಡಾವಳಿಗಳನ್ನು ಮಾಡಿಕೊಡುವಂತೆ, ಮಠದ ಅಧಿಕಾರವನ್ನು ದಯಪಾಲಿಸಿದ ಕುರಿತು ಉಲ್ಲೇಖಿಸುತ್ತದೆ. ಅಲ್ಲದೆ ಶಾಸನದಲ್ಲಿ ಸಾಕ್ಷಿಯಾಗಿ ನಾರಗೇರಿಯಿಟುಗೌಡ, ಗೋಳಿಕೊಡಲಕೊಳಗೌಡ, ಸಗಡಗೇರಿ–ದೇವುಗೌಡ, ಗೋಕರ್ಣದ ರಾಳ ರಾಮಗೌಡ ಎಂದು ನಾಲ್ಕು ಜನರ ಸಹಿಯನ್ನು ಒಳಗೊಂಡಿದೆ. ಈ ಶಾಸನವನ್ನು ಚಂನಪುರ ನಾಗಪ್ಪನು ಬರೆದನು ಎಂದು ಹೇಳಲಾಗಿದೆ.

ಶಾಸನದ ಮಹತ್ವ

ತಾಪ್ರಪಟ ಶಾಸನವು ಕ್ರಿ.ಶ. 16ನೆಯ ಶತಮಾನದಾಗಿದ್ದು, ಮಹಾಮಂಡಳೇಶ್ವರ ಸಾಳುವ ಕೃಷ್ಣದೇವರಸರಿಗೆ ಸಂಬಂಧಿಸಿದ್ದಾಗಿದೆ. ಈ ಶಾಸನದಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಪ್ರಭಾವಶಾಲಿ ಹಾಗೂ ಬಹು ಸಂಖ್ಯೆಯಲ್ಲಿರುವ ಹಾಲಕ್ಕಿ ಜನಾಂಗದ ಸಾಮಾಜಿಕ ವ್ಯವಸ್ಥೆ ಮತ್ತು ನ್ಯಾಯ ದಾನ ಮಾಡುವ ಪದ್ಧತಿಯನ್ನು ಸೂಚಿಸುತ್ತದೆ.

ಹಾಲಕ್ಕಿ ಸಮುದಾಯದವರು ಮುಚ್ಚಳ್ಳಿ ಮಠದ ಅನುಯಾಯಿಗಳಾಗಿದ್ದರು ಎಂದು ತಿಳಿಸುತ್ತದೆ. ಇಲ್ಲಿ ಕೆಲವು ಗ್ರಾಮಗಳನ್ನು ಉಲ್ಲೇಖಿಸಿರುವುದು ವಿಶೇಷ. ಒಟ್ಟಾರೆ ಈ ಶಾಸನವು ವಿಜಯನಗರ ಕಾಲದ ಸಾಮಾಜಿಕ ವ್ಯವಸ್ಥೆಯ ಅಧ್ಯಯನಕ್ಕೆ ಅಪರೂಪದ ದಾಖಲೆಯಾಗಿದೆ.

ಆಧಾರ ಗ್ರಂಥಗಳು

1) ಗಣಪತಿಗೌಡ, ಎಸ್., **ಸಿಸುಗಲಿಯ ಪಾಂಡ್ಯರು**.
2) ಸೂರ್ಯನಾಥ ಕಾಮತ್, **ಉತ್ತರ ಕನ್ನಡ ಜಿಲ್ಲೆಯ ಗೆಝೆಟಿಯರ್**.
3) ಸೂರ್ಯನಾಥ ಕಾಮತ್, **ಕೆನರಾ ಡಿಸ್ಟ್ರಿಕ್ಟ್ ಗೆಝೆಟಿಯರ್**.
4) ರಮೇಶ, ಕೆ.ವಿ., **ಹಿಸ್ಟರಿ ಆಫ್ ಸೌತ್ ಕೆನರಾ**.
5) ಮಹ್ಮದ್, ಟಿ.ಕೆ., **ಉತ್ತರ ಕನ್ನಡ ಜಿಲ್ಲಾ ದರ್ಶನ**.
6) ಡಾ. ವಾರಿ, ಎಂ.ಜಿ., **ಸೊಂದೇ ಅರಸು ಮನೆತನ**.

ನದಿಯ ಜೊತೆಗೆ
ಹರಿದ ದಡವು
ಈಗ ಎಲ್ಲಿ ಹೋಯಿತು?
ಶರಧಿಯೊಡನೆ
ಮಗಳ ಬಿಟ್ಟು
ಹಿಂದೆ ಹಿಂದೆ ಉಳಿಯಿತು.

ಭಾಷಾಂತರದ ಸಾಂಸ್ಕೃತಿಕ ರಾಜಕಾರಣ

ಡಾ. ಎ. ಮೋಹನ ಕುಂಟಾರ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ–583276

ಭಾಷಾಂತರ ಎಂದರೆ ಎರಡು ಭಾಷೆಗಳ ಅಂತರಂಗದ ಹೊಂದಾಣಿಕೆಯ ಪ್ರಕ್ರಿಯೆ. ಭಾಷೆಗಳ ಹೊಂದಾಣಿಕೆಯು ಸಮಾಜದ ಎರಡು ಸಾಂಸ್ಕೃತಿಕ ಪರಿಸರದ ಅನುಸಂಧಾನದ ಮೂಲಕ ನಡೆಯುತ್ತಿರುತ್ತದೆ. ಎರಡು ಭಾಷೆಗಳ ವಿಭಿನ್ನ ಸಾಂಸ್ಕೃತಿಕ ಸಂದರ್ಭಗಳಲ್ಲಿ ಸಂವಹನಕ್ಕೆ ಅಣಿಗೊಳಿಸುವ ಈ ಪ್ರಕ್ರಿಯೆಯು ಕೇವಲ ಭಾಷಿಕವಾದುದಲ್ಲ. ಒಂದು ಭಾಷೆಯ ಸಂದೇಶವನ್ನು ಇನ್ನೊಂದು ಭಾಷೆಯಲ್ಲಿ ಅರ್ಥಾನ್ವಯಗೊಳಿಸುವಂತೆ ಮೇಲ್ನೋಟಕ್ಕೆ ಭಾಸವಾಗಬಹುದು. ಆದರೆ ಅದನ್ನು ಮೀರಿದ ಸಂಕೀರ್ಣ ಸಾಂಸ್ಕೃತಿಕ ಮರುನಿರೂಪಣೆಗಳು ಇಲ್ಲಿ ನಡೆಯುತ್ತಿರುತ್ತವೆ. ಸಾಮಾನ್ಯವಾಗಿ ಇವು ಸಾಂಸ್ಕೃತಿಕ ಯಜಮಾನಿಕೆಯ ನೆಲೆಯಿಂದಲೇ ಮರುನಿರೂಪಣೆ ಗೊಳ್ಳುತ್ತವೆ.

ಭಾಷಾಂತರ ಕೃತಿಯೊಂದು ಅಭಿವ್ಯಕ್ತಿಗೊಳ್ಳುವ ಲಕ್ಷ್ಯಭಾಷೆಯ ಸಾಂಸ್ಕೃತಿಕ ಪರಿಸರವು ಒಂದು ಸಮುದಾಯದ ನಿಯಂತ್ರಣಕ್ಕೆ ಅಧೀನವಾಗಿರಬಹುದು. ಕೆಲವೊಮ್ಮೆ ಒಂದು ನಿರ್ದಿಷ್ಟ ರಾಜಕೀಯ ಪ್ರಭುತ್ವಕ್ಕೆ ಒಳಗಾಗಿರಬಹುದು. ಕೆಲವು ಸಂದರ್ಭದಲ್ಲಿ ಒಂದು ನಿರ್ದಿಷ್ಟ ಸೈದ್ಧಾಂತಿಕ ಚೌಕಟ್ಟಿಗೆ ಬದ್ಧತೆಯನ್ನು ಪ್ರದರ್ಶಿಸುತ್ತಿರಬಹುದು. ಆಗೆಲ್ಲ ಭಾಷಾಂತರ ಸಹ ಅವುಗಳ ನಿಯಂತ್ರಣದಲ್ಲಿಯೇ ಕಾರ್ಯರೂಪಕ್ಕೆ ಬರುತ್ತದೆ. ಭಾಷಾಂತರಗಳಿಗೆ ಚಾಲನೆ ಸಿಗುವಲ್ಲಿಯೇ ಈ ತೆರನ ಸಾಂಸ್ಕೃತಿಕ ರಾಜಕಾರಣವೂ ಒಂದೋ ಅಧಿಕಾರದ ಸಂರಕ್ಷಣೆಗಾಗಿ ನಡೆಯಬಹುದು ಅಥವಾ ಅಧಿಕಾರವನ್ನು ಪಡೆಯುವುದಕ್ಕಾಗಿಯೂ ನಡೆಯಬಹುದು. ಹಾಗೆಯೇ ಅಧಿಕಾರವನ್ನು ವಿರೋಧಿಸುವ ಹೋರಾಟದ ಭಾಗವಾಗಿಯೂ ರೂಪು ಪಡೆಯಬಹುದು. ಅಲ್ಲದೆ ಕೆಲವೊಮ್ಮೆ ಒಂದು ತಾತ್ವಿಕತೆಯನ್ನು ಪೋಷಿಸುವುದರ ಅಥವಾ ವಿರೋಧಿಸುವುದರ ಭಾಗವಾಗಿ ಭಾಷಾಂತರ ನಡೆಯಬಹುದು. ಹಾಗಾಗಿ ಭಾಷಾಂತರಗಳು ನಡೆಯುವುದು ಒಂದು ರೀತಿಯ ಸಹಕಾರ ತತ್ವದಲ್ಲಿಯೇ ಆಗಿರುತ್ತದೆ.

ಇಲ್ಲಿ ಅಧಿಕಾರ ಎನ್ನುವುದು ದೇಶ, ಸಾಹಿತ್ಯ, ಸಮಾಜ, ರಾಜಕೀಯ, ಸಮುದಾಯ ಎಲ್ಲೆಡೆಯೂ ಇರಬಹುದು. ಇವುಗಳ ಯಜಮಾನಿಕೆಗಾಗಿ ನಡೆಯುವ ಸಾಂಸ್ಕೃತಿಕ ಚಟುವಟಿಕೆ ಗಳ ಭಾಗವಾಗಿ ಭಾಷಾಂತರಗಳು ರಾಜಕಾರಣದೊಡನೆ ನೇರ ಸಂಬಂಧವನ್ನು ಹೊಂದಿರುತ್ತವೆ. ಹಾಗಾಗಿ ಭಾಷಾಂತರ ಕೃತಿಗಳ ಆಂತರ್ಯದಲ್ಲಿ ಜರುಗುವ ಸಾಂಸ್ಕೃತಿಕ ಮರುಪಠ್ಯಗಳು ಆಕರ ಭಾಷೆಯ ಯಥಾವತ್ತಾದ ನಿರೂಪಣೆಗಳಾಗಿರಲಾರವು. ಅವುಗಳು ಲಕ್ಷ್ಯಭಾಷೆಯ ಸಾಂಸ್ಕೃತಿಕ ಪರಿಸರದಲ್ಲಿ ಮರು ನಿರೂಪಣೆಗೊಳ್ಳುವ ಪಠ್ಯಗಳೇ ಆಗಿಬಿಡುತ್ತವೆ. ಹಾಗಾಗಿ ಭಾಷಾಂತರ ಅಧ್ಯಯನಗಳು ಕೇವಲ ಭಾಷಿಕ ಅಧ್ಯಯನಗಳಾಗದೆ ಸಂಸ್ಕೃತಿ ಅಧ್ಯಯನಗಳಾಗಿಯೂ ಮಹತ್ವ ಪಡೆಯುತ್ತವೆ.

ಭಾಷಾಂತರದಲ್ಲಿ ಸಾಂಸ್ಕೃತಿಕ ರಾಜಕಾರಣ ಎಂಬುದನ್ನೇ ಒಂದು ಪರಿಕಲ್ಪನೆಯಾಗಿ

ಭಾವಿಸಬಹುದು. ಕ್ರಿಯಾಶೀಲವಾದ ಪ್ರವೃತ್ತಿಗಳನ್ನು ಹಿತಾಸಕ್ತಿಗೆ ಅನುಕೂಲವಾಗುವಂತೆ ಬದಲಾಯಿಸಿಕೊಳ್ಳಬಲ್ಲ ಸಾಮರ್ಥ್ಯವನ್ನೂ ಪಡೆದಿರುವ ವ್ಯಕ್ತಿ ಅಥವಾ ಗುಂಪಿನ ಚಟುವಟಿಕೆಗಳನ್ನು ರಾಜಕಾರಣ ಎಂದು ಪರಿಭಾವಿಸಬಹುದು. ಇದು ಭಾಷೆ, ರಾಷ್ಟ್ರ, ಅಧಿಕಾರ, ಸಮಾಜ, ಶಿಕ್ಷಣ, ಜಾತಿ, ವೈಯಕ್ತಿಕ ಈ ಯಾವುದೇ ಕಾರಣದಿಂದಲೂ ನಡೆಯಬಹುದು. ಇಂತಹ ಯಾವುದೇ ಕಾರಣದಿಂದ ನಡೆಯುವ ಭಾಷಾಂತರಗಳನ್ನು ಸಾಂಸ್ಕೃತಿಕ ರಾಜಕಾರಣದ ನೆಲೆಗಳಲ್ಲಿ ಗುರುತಿಸುವುದಕ್ಕೆ ಸಾಧ್ಯವಿದೆ.

ಯಾವುದೇ ಕೃತಿಯು ಇನ್ನೊಂದು ಭಾಷೆಗೆ ಭಾಷಾಂತರವಾಗುವಾಗ ನಿರ್ದಿಷ್ಟವಾದ ಯಾವುದೋ ಒಂದು ಸಾಂಸ್ಕೃತಿಕ ಸಂದರ್ಭವಿರುತ್ತದೆ. ಈ ಸಾಂಸ್ಕೃತಿಕ ಸಂದರ್ಭವು ಒಂದು ನಿರ್ದಿಷ್ಟ ಕಾಲಘಟ್ಟದ ಅನಿವಾರ್ಯತೆಯ ಕಾರಣಕ್ಕಾಗಿ ಸೃಷ್ಟಿಯಾಗಿರಬಹುದು. ಕೆಲವೊಮ್ಮೆ ಸಮಕಾಲೀನವಾಗಿ ಆಯಾ ಭಾಷಾಂತರಕಾರರ ಹಿತಾಸಕ್ತಿಗಳ ಕಾರಣಗಳಿಗಾಗಿಯೂ ಭಾಷಾಂತರ ಸಾಂಸ್ಕೃತಿಕ ಸಂದರ್ಭವು ನಿರ್ಮಾಣವಾಗಿರಬಹುದು. ಭಾಷಾಂತರವು ಸಾಂಸ್ಕೃತಿಕ ವಿನಿಮಯದ ಭಾಗವೇ ಆಗಿರುವುದರಿಂದ ಇದನ್ನು ಆಗುಮಾಡುವಲ್ಲಿ ಸಮಕಾಲೀನವಾದ ಅನೇಕ ಒತ್ತಡಗಳಿರುತ್ತವೆ. ಆಕರ ಭಾಷೆಯಲ್ಲಿ ಕೃತಿಯೊಂದು ಕಾಣಿಸಿ ಕೊಂಡು ಶತಮಾನಗಳ ನಂತರ ಇನ್ನೊಂದು ಭಾಷೆಗೆ ಭಾಷಾಂತರ ಆಗಬಹುದು. ಅವುಗಳನ್ನು ಭಾಷಾಂತರ ಮಾಡಬೇಕು ಎಂಬ ಆಸಕ್ತಿ ರೂಪು ಪಡೆಯುವುದು ಸಮಕಾಲೀನ ಸಾಂಸ್ಕೃತಿಕ ಸಂದರ್ಭದಲ್ಲಿ ಎಂಬುದು ಮುಖ್ಯ ವಿಚಾರ. ಆಕರ ಭಾಷೆಯ ಕೃತಿ ಪ್ರತಿನಿಧಿಸುವುದು ಅದರ ಸಮಕಾಲೀನ ಸಾಂಸ್ಕೃತಿಕ ಸಂದರ್ಭವನ್ನೇ ಆಗಿರಬಹುದು. ಆದರೆ ಶತಮಾನಗಳ ತರುವಾಯು ಕಾಣಿಸಿಕೊಳ್ಳುವ ಭಾಷಾಂತರ ಕೃತಿಗೆ ಮಾತ್ರ ಲಕ್ಷ್ಯಭಾಷೆಯ ಸಮಕಾಲೀನ ಸಾಂಸ್ಕೃತಿಕ ಸಂದರ್ಭದ ಕುರುಹೇ ಮುಖ್ಯವಾಗಿರುತ್ತದೆ.

ರಷ್ಯನ್ ಭಾಷೆಯಲ್ಲಿ ಟಾಲ್‌ಸ್ಟಾಯ್ ಬರೆದುದು ಸುಮಾರು(1828–1910) 1950ರಲ್ಲಿ. ಅದು ಆಂಗ್ಲ ಭಾಷೆಯ War and Peace ಮೂಲಕ ಕನ್ನಡದಲ್ಲಿ "ಯುದ್ಧ ಮತ್ತು ಶಾಂತಿ" ಎಂಬ ಹೆಸರಿನಲ್ಲಿ ಭಾಷಾಂತರವಾದುದು 1975ರಲ್ಲಿ. 'ಇಂದುಲೇಖಾ' ಎಂಬ ಕಾಂದಬರಿಯನ್ನು ಓ. ಚಂದು ಮೇನೋನ್ ಮಲಯಾಳಂನಲ್ಲಿ ಬರೆದುದು 1889ರಲ್ಲಿ. ಅದು ಕನ್ನಡದಲ್ಲಿ ಭಾಷಾಂತರವಾದುದು 1999ರಲ್ಲಿ ಸುಮಾರು 110 ವರ್ಷಗಳ ನಂತರ.

ನಾಶ್, ವರ್ಡ್ಸ್‌ವರ್ತ್, ಷೆಲ್ಲಿ, ಸ್ಕಾಟ್, ಕೌಪರ್, ಕ್ಯಾಂಪ್‌ಬೆಲ್, ಥಾಮ್ಸನ್, ಸೌತೀ ಬರ್ನ್ಸ್, ಟ್ರಾವಿಂಗ್, ಮೊದಲಾದ ಎಲ್ಲಾ ಕವಿಗಳು ಬರೆದುದು 16ರಿಂದ 19ನೆಯ ಶತಮಾನದ ಅವಧಿಯಲ್ಲಿ. ಆದರೆ ಅದನ್ನು ಬಿ.ಎಂ.ಶ್ರೀ ಅವರು ಕನ್ನಡದಲ್ಲಿ ತಂದದು 1920ರ ಆಸುಪಾಸಿನಲ್ಲಿ. ಅಂದರೆ ಆಕರ ಭಾಷೆಯಲ್ಲಿ ಕೃತಿ ಸೃಷ್ಟಿಯಾದ ಸಾಂಸ್ಕೃತಿಕ ಸಂದರ್ಭವು ಕಾಲ ಮತ್ತು ದೇಶಗಳಿಂದ ಬೇರೆಯೇ ಆಗಿರುತ್ತದೆ. ಭಾಷಾಂತರ ಕೃತಿಯು ಲಕ್ಷ್ಯಭಾಷೆಯ ಒಂದು ನಿರ್ದಿಷ್ಟ ಸಾಂಸ್ಕೃತಿಕ ಸಂದರ್ಭದಲ್ಲಿ ಅನಾವರಣಗೊಳ್ಳುತ್ತದೆ. ಹೀಗೆ ಕಾಲ ದೇಶಾತೀತವಾದ ಇನ್ನೊಂದು ಭಾಷೆಯ ಪಠ್ಯಗಳನ್ನು ಸಮಕಾಲೀನ ಸಾಂಸ್ಕೃತಿಕ ಸಂದರ್ಭದಲ್ಲಿ ಭಾಷಾಂತರ ಮಾಡುವಲ್ಲಿ ಸಾಂಸ್ಕೃತಿಕ ರಾಜಕಾರಣದ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಭಾಷಾಂತರಕ್ಕೆ ಕೃತಿಯ ಆಯ್ಕೆ ಮಾಡಿಕೊಳ್ಳುವಲ್ಲಿಂದಲೇ ಈ ಸಾಂಸ್ಕೃತಿಕ ರಾಜಕಾರಣದ ಬಗೆಯನ್ನು ಕಂಡುಕೊಳ್ಳಬಹುದು. ಅಂದರೆ ಭಾಷಾಂತರ ಕೃತಿಯೊಂದು ರೂಪುಗೊಳ್ಳುವಾಗ ಲೇಖಕ, ಭಾಷಾಂತರಕಾರರ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವುದನ್ನು ಭಾಷಾಂತರ ಸಾಂಸ್ಕೃತಿಕ ರಾಜಕಾರಣ ಎಂದು ಕರೆಯಬಹುದು. ಯಾವುದೇ ಕೃತಿಯನ್ನು ಭಾಷಾಂತರ ಮಾಡುವವೇಳೆ ಲೇಖಕ, ಭಾಷಾಂತರಕಾರರ ಹಿತಾಸಕ್ತಿಗಳು ಇದ್ದೆ ಇರುತ್ತದೆ. ಭಾಷಾಂತರ ಎಂಬುದು ಪೂರ್ಣ ಪ್ರಮಾಣದ ಸಾಂಸ್ಕೃತಿಕ

ಚಟುವಟಿಕೆಯೇ ಆಗಿರುವುದರಿಂದ ಸ್ವಾಭಾವಿಕವಾಗಿ ಲೇಖಕ, ಭಾಷಾಂತರಕಾರರ ಹಿತಾಸಕ್ತಿಗಳು ಸಾಂಸ್ಕೃತಿಕವಾಗಿ ಜಾಗೃತಗೊಂಡಿರುತ್ತವೆ. ಇಲ್ಲಿನ ಹಿತಾಸಕ್ತಿಗಳು ಆಯಾ ಕೃತಿಗಳ ಪರಿಸರದ ಸಮಗ್ರ ತಿಳುವಳಿಕೆಯಿಂದ ರೂಪುಗೊಂಡವು ಗಳಾಗಿರುವುದಿಲ್ಲ. ಹಾಗೆಯೇ ಅದರ ಪಠ್ಯದ ಕುರಿತ ಸಮಗ್ರ ದೃಷ್ಟಿಕೋನದ ರೂಪು ಪಡೆದ ಭಾಷಾಂತರಗಳೂ ಆಗಿರುವುದಿಲ್ಲ. ಹಾಗಾಗಿ ಭಾಷಾಂತರಗೊಂಡ ಕೃತಿ ವಾಸ್ತವದಲ್ಲಿ ಕೆಲವು ಸಂದರ್ಭದಲ್ಲಿ ಆಕರ ಭಾಷೆಯ ಪ್ರಾತಿನಿಧಿಕ ಪಠ್ಯವೂ ಆಗಿರುವುದಿಲ್ಲ. ಲಕ್ಷ್ಯ ಭಾಷೆಯ ಓದುಗರ ವಲಯದಲ್ಲಿ ಭಾಷಾಂತರ ಕೃತಿಗಳನ್ನೇ ಆಯಾ ಆಕರ ಭಾಷೆಯ ಮುಖ್ಯ ಕೃತಿಗಳೆಂದು ಪರಿಭಾವಿಸುವ ಅಪಾಯವೂ ಇರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಭಾಷಾಂತರದಲ್ಲಿನ ಸಾಂಸ್ಕೃತಿಕ ರಾಜಕಾರಣವೇ ಆಗಿದೆ. ಭಾಷಾಂತರಗಳು ಸಮಕಾಲೀನ ವಸ್ತುಸ್ಥಿತಿಯ ಪ್ರತೀಕವಾಗಿ ರೂಪು ಪಡೆಯುತ್ತವೆ. ಹಾಗೆ ರೂಪು ಪಡೆದ ಭಾಷಾಂತರ ಕೃತಿ ನಿರ್ಮಾಣವಾಗಿ ಅಪ್ರಸ್ತುತ ಎನಿಸಿದಾಗ ಅದೇ ಪಠ್ಯದ ಮತ್ತೊಂದು ಭಾಷಾಂತರವೂ ರೂಪುಗೊಳ್ಳುತ್ತದೆ. ಹಾಗಾಗಿ ಭಾಷಾಂತರದ ಮಟ್ಟಿಗೆ ಆಕರ ಪಠ್ಯವು ಇತರ ಭಾಷಿಕರಿಗೆ ಒಂದು ಸ್ಥಗೀತಗೊಂಡ ಮೃತ ಪಠ್ಯ. ಭಾಷಾಂತರವೂ ಸಮಕಾಲೀನವಾಗಿ ಸ್ಪಂದಿಸುತ್ತವೇ ರೂಪು ಪಡೆಯುವ ಜೀವಂತ ಪಠ್ಯ.

ಭಾಷಾಂತರ ಕೃತಿಯನ್ನು ಲಕ್ಷ್ಯಭಾಷೆಯ ಓದುಗರು ಆಕರ ಭಾಷೆಯ ಕೃತಿಯೆಂದೇ ಓದುತ್ತಾರೆ. ಅದು ಲಕ್ಷ್ಯ ಭಾಷೆಯ ಸಾಂಸ್ಕೃತಿಕ ಪರಿಸರಕ್ಕೆ ಹೊಂದುವಂತಿದ್ದರೆ ಅದು ಆಕರ ಪಠ್ಯದ ಗುಣಲಕ್ಷಣಗಳ ಕಾರಣದಿಂದಲೇ ಎಂದೂ ಭಾವಿಸುತ್ತಾರೆ. ಆಗ ಓದುಗರಿಗೆ ಭಾಷಾಂತರ ಕೃತಿಯೊಂದರಲ್ಲಿ ಆಕರ ಪಠ್ಯವನ್ನು ಭಿನ್ನವಾಗಿ ರೂಪುಗೊಂಡಿರುತ್ತದೆಂಬ ಗುಮಾನಿಗೆ ಅವಕಾಶವೂ ಇರುವುದಿಲ್ಲ. ಆಕರ ಭಾಷೆಯಲ್ಲೂ ಓದಬಲ್ಲ ಓದುಗರು ಮಾತ್ರ ಭಾಷಾಂತರ ಕೃತಿಯಲ್ಲಾದ ವ್ಯತ್ಯಾಸಗಳನ್ನು ಗುರುತಿಸಲು ಶಕ್ತರಾಗುವರು. ಅದಿಲ್ಲವಾದರೆ ಭಾಷಾಂತರ ಕೃತಿಯೇ ಮೂಲ ಪಠ್ಯವಾಗಿ ಲಕ್ಷ್ಯ ಭಾಷೆಯ ಸಾಂಸ್ಕೃತಿಕ ಪರಿಸರದಲ್ಲಿ ರೂಪು ಪಡೆದ ಕೃತಿಯಾಗಿ ಓದುಗರಿಗೆ ಸ್ವೀಕಾರ್ಯವಾಗುತ್ತದೆ.

ಬಿ.ಎಂ.ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತಗಳು' ಭಾಷಾಂತರ ಕೃತಿ. ಸುಮಾರು 1921ರಲ್ಲಿ ಪ್ರಕಟವಾಯಿತು. ಇಲ್ಲಿ ಶ್ರೀಯವರು ಭಾಷಾಂತರಕ್ಕೆ ಆಯ್ದುಕೊಂಡುದು ಇಂಗ್ಲಿಷಿನಲ್ಲಿ ಅಷ್ಟೇನೂ ಪ್ರಮುಖರಲ್ಲದ ಕವಿಗಳ ರಚನೆಗಳನ್ನು. ಬಿ.ಎಂ.ಶ್ರೀಯವರು ಸಮಕಾಲೀನ ಕನ್ನಡನಾಡಿನಲ್ಲಿ ಕನ್ನಡ ಮಾತು ತಲೆಯೆತ್ತುವ ಬಗೆಯ ಕುರಿತು ಚಿಂತಿಸುತ್ತಿದ್ದರು. ಕನ್ನಡಕ್ಕೊಂದು ಹೊಸ ಕಾವ್ಯ ಪ್ರಕಾರವನ್ನು ಪರಿಚಯಿಸಲು ತವಕಪಡುತ್ತಿದ್ದರು. ಹೊಸಗನ್ನಡ ಚಿಂತನೆಯ ಭಾಗವಾಗಿ ಬಿ.ಎಂ.ಶ್ರೀಯವರು ಪಾಶ್ಚಾತ್ಯ ಸಾಹಿತ್ಯ ಕೃತಿಗಳನ್ನು, ಕವಿಗಳ ರಚನೆಗಳನ್ನು ಕನ್ನಡದಲ್ಲಿ ಭಾಷಾಂತರಿಸಿದರು. ಹಾಗೆ ಭಾಷಾಂತರ ಮಾಡುವಾಗಲೂ ಪಾಶ್ಚಾತ್ಯ ಕವಿತೆಗಳನ್ನು ಕನ್ನಡದಲ್ಲಿ ಪರಿಚಯಿಸುವ ಉದ್ದೇಶವು ಮುಖ್ಯವಾಗಿರಲಿಲ್ಲ. ಕನ್ನಡ ಜನರ ಹೃದಯವನ್ನು ಗೆಲ್ಲಬಲ್ಲ ವಿನೂತನ ರಚನೆಗಳ ಮೂಲಕ ಹೊಸಗನ್ನಡ ಕವಿತೆಗಳನ್ನು ಕಟ್ಟಬೇಕೆಂಬ ಕನಸು ಕಂಡವರು. ಹಾಗಾಗಿ ಭಾಷಾಂತರಗಳನ್ನು ತಮ್ಮ ಕಾಲದ ಕನ್ನಡದ ಪಾರಂಪರಿಕ ಪರಿಸರದಲ್ಲಿ ಹೊಂದಿ ಕೊಳ್ಳುವಂತೆ ಆ ಮೂಲಕ ಕನ್ನಡ ಸ್ವತಂತ್ರ ಕವಿತೆಗಳ ರಚನೆಗಳಿಗೆ ಪ್ರೇರಣಶಕ್ತಿಯಾಗಿ ರೂಪು ಗೊಳ್ಳಬೇಕೆಂದು ಬಯಸಿದರು. ಹೊಸಗನ್ನಡದ ಕಾವ್ಯ ಪರಂಪರೆಯೆಂದರೆ ಬಿ.ಎಂ.ಶ್ರೀಯವರ ಇಂಗ್ಲಿಷ್ ಗೀತಗಳು ಮೂಲಕ ಹಾಕಿಕೊಟ್ಟ ಕಾವ್ಯಪರಂಪರೆ. ಅದು ಹೊಸಗನ್ನಡದಲ್ಲಿ ಹೊಸ ಪರಂಪರೆಯ ಸಂದರ್ಭದಲ್ಲಿ ಮಾದರಿಗಳಾಗಬೇಕೆಂಬ ನಿಲುವುಳ್ಳವರಾಗಿದ್ದರು.

ಕನ್ನಡ ಸಾಹಿತ್ಯ ಪರಂಪರಾಗತವಾಗಿ ಬಂದ ಭಾಷೆ, ವಸ್ತು, ವಿಷಯಗಳಿಗಿಂತ ಬೇರೆಯಾದ ಸಮಕಾಲೀನ ಓದುಗರನ್ನ ದೃಷ್ಟಿಯಲ್ಲಿಟ್ಟು ಕೊಂಡು ಹೊಸದಾಗಿ ಕನ್ನಡವನ್ನು ಬಳಸುವ

ಪ್ರಯತ್ನವನ್ನು ಶ್ರೀಯವರು ಮಾಡಿದರು. ಕಾವ್ಯವನ್ನ ವಸ್ತು, ಭಾವ, ಶೈಲಿಗಳಲ್ಲಿ ಜನ ಸಾಮಾನ್ಯರಿಗೆ ರುಚಿಸುವಂತೆ ಬರೆಯುವ ಅನಿವಾರ್ಯತೆಯನ್ನು ಅವರು ಕಂಡುಕೊಂಡಿದ್ದರು. ಭಾಷೆಯಲ್ಲಿ ಕಾವ್ಯಗಳ ವಸ್ತುವಿಷಯಗಳ ಹೊಸತನಕ್ಕಾಗಿ ಅವರು ಹಂಬಲಿಸುತ್ತಿದ್ದರು. ಎಲ್ಲಾ ಜನರು ಓದುವಂತಾಗಬೇಕು ಎಂಬುದಕ್ಕಾಗಿ. ರಾಜರಿಗಾಗಿ, ಪಂಡಿತರಿಗಾಗಿ ಬರೆಯುವ ಕಾಲವಿದಲ್ಲ. ಜನಸಾಮಾನ್ಯನಿಗಾಗಿ ಬರೆಯುವುದು, ಸುಲಭವಾಗಿ ಬರೆಯುವುದು, ಎಲ್ಲರಿಗೂ ಹಿತವಾದ ಸಂಗತಿಗಳನ್ನು ಆಯ್ದುಕೊಳ್ಳುವುದು, ವಿವೇಕಯುತವಾಗಿ ಉಪಯೋಗವಾದ ವಿಚಾರಗಳನ್ನ ಪ್ರಚಾರ ಮಾಡುವುದು ಇತ್ಯಾದಿ ಉದ್ದೇಶಗಳು ಅವರ ಮುಂದಿದ್ದವು. ಅದು ಕನ್ನಡ ಭಾಷೆಯ ಸಾಹಿತ್ಯದ ಬೆಳವಣಿಗೆಗಾಗಿ, ಕನ್ನಡವನ್ನು ಇಂಗ್ಲಿಷ್, ಸಂಸ್ಕೃತಗಳ ಹಿಡಿತದಿಂದ ಬೇರ್ಪಡಿಸಿ ಸ್ವತಂತ್ರವಾಗಿ ಬೆಳಸುವುದಕ್ಕಾಗಿ. ಬಿ.ಎಂ.ಶ್ರೀ ಬರೆಯುತ್ತಿದ್ದ ಕಾಲ ಅವರೇ ಕಂಡು ಕೊಂಡಂತೆ ಅದು "ವ್ಯವಸಾಯ ಕಾಲವೇ ಹೊರತು ಫಲ ಬಿಡುವ ಕಾಲವಲ್ಲ" ಈ ವ್ಯವಸಾಯದ ಭಾಗವಾಗಿ ಬಿ.ಎಂ.ಶ್ರೀಯವರು ಇಂಗ್ಲಿಷ್ ಗೀತಗಳನ್ನು ಕನ್ನಡದಲ್ಲಿ ಬರೆದರು.

ಈ ಎಲ್ಲಾ ಕಾರಣಗಳಿಗಾಗಿ ಬಿ.ಎಂ.ಶ್ರೀಯವರು ಮಾಡಿದ ಕನ್ನಡದ ಸಾಂಸ್ಕೃತಿಕ ರಾಜಕಾರಣದ ಪರಿಣಾಮಯಾಗಿ ಕನ್ನಡದಲ್ಲಿ ಹೊಸಗನ್ನಡ ಕಾವ್ಯ ಪರಂಪರೆಗೆ ನಾಂದಿ ಹಾಡಿದಂತಾಯಿತು. ಇಂಗ್ಲಿಷಿನ ಅಮುಖ್ಯವಾದ ಕವಿಗಳನ್ನು ಆಯ್ದು ಕನ್ನಡದ ಕಾಲದ ಅಗತ್ಯಕ್ಕೆ ಅನುಗುಣವಾಗಿ ಮರುರೂಪಿಸುವುದು ಬಿ.ಎಂ.ಶ್ರೀಯವರ ಕಾಳಜಿ. ಕನ್ನಡ ಭಾಷೆಯನ್ನು ಹೊಸಗನ್ನಡ ಕವಿತೆಗಳಿಗಾಗಿ ಹದಗೊಳಿಸುವ ಬಗೆಗೆ ಬಿ.ಎಂ.ಶ್ರೀಯವರ ಶ್ರಮವಿತ್ತು. ಅದಕ್ಕಾಗಿ ಪಾಶ್ಚಾತ್ಯ ಪ್ರಮುಖ ಕವಿಗಳ, ಕೃತಿಕಾರರ ಪಠ್ಯಗಳನ್ನು ಆಯ್ಕೆ ಮಾಡಿದ್ದರೆ ಆಯಾ ಭಾಷೆಯಲ್ಲಿ ಪ್ರಮುಖರಾದವರ ಕೃತಿಗಳನ್ನು ಲಕ್ಷ್ಯಭಾಷೆಯ ಸಾಂಸ್ಕೃತಿಕ ಪರಿಸರಕ್ಕೆ ಹೊಂದಿಕೊಳ್ಳುವಂತೆ ಬದಲಾಯಿಸುವ ಸ್ವಾತಂತ್ರ್ಯವೂ ಬಿ.ಎಂ.ಶ್ರೀಯವರಿಗೆ ಇರುತ್ತಿರಲಿಲ್ಲ.

ಭಾಷಾಂತರದ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಇಂಗ್ಲಿಷ್ ಗೀತಗಳು ಕನ್ನಡದಲ್ಲಿ ಆಕರ ಪಠ್ಯಗಳಿಗಿಂತ ಭಿನ್ನವಾದ ರೀತಿಯಲ್ಲಿ ಭಾಷಾಂತರವನ್ನು ರೂಪಿಸಿದರು. ಇದು ಕನ್ನಡದ ಮಟ್ಟಿಗೆ ವರವಾಯಿತು. ಇಲ್ಲವಾದರೆ ಬಿ.ಎಂ.ಶ್ರೀಯವರ ಇಂಗ್ಲಿಷ್ ಗೀತಗಳು ಈಗಿರುವ ಸ್ವರೂಪವನ್ನು ಪಡೆಯುತ್ತಿರಲ್ಲಿಲ್ಲ. ಸಾಮಾನ್ಯ ಕವಿಗಳ ರಚನೆಗಳನ್ನು ಆಯ್ಕೆ ಮಾಡಿದ್ದೇ ಭಾಷಾಂತರ ಸ್ವಾತಂತ್ರ್ಯವನ್ನು ತೆಗೆದುಕೊಳ್ಳುವುದಕ್ಕಾಗಿ ಎಂಬುದು ಸ್ಪಷ್ಟ. ಪ್ರಮುಖ ಕವಿಗಳ ರಚನೆಗಳಾದರೆ ನಿರ್ದಿಷ್ಟ ಸಿದ್ಧಾಂತದ ನೆಲೆಗಟ್ಟುಗಳ ಬದ್ಧತೆ ಇರುತ್ತಿತ್ತು. ಹಾಗೆಯೇ ಅವರ ರಚನೆಗಳು ನಿರ್ದಿಷ್ಟ ಬದ್ಧತೆಯ ಕಾರಣಗಳಿಗಾಗಿ ಆಕರ ಭಾಷೆಯಲ್ಲಿಯೂ ಹಾಗೆಯೇ ಇತರ ಭಾಷೆಗಳಿಗೆ ಆದ ಭಾಷಾಂತರಗಳ ಮೂಲಕವೂ ನಿರ್ದಿಷ್ಟ ಪ್ರಚಾರ ಪಡೆದಿರುತ್ತವೆ. ಹಾಗಾಗಿ ಇಂಗ್ಲಿಷ್ ಗೀತಗಳು ಕೃತಿಯ ಕವಿತೆಗಳು ಆಕರ ಭಾಷೆಯಲ್ಲಿಯೂ ದೊರೆಯದ ಪ್ರಾಶಸ್ತ್ಯವನ್ನು ಪಡೆದು ಭಾಷಾಂತರ ದಲ್ಲಿ ಪ್ರಚಾರಗೊಂಡವು. ಇಲ್ಲಿ ಮೂಲ ಕವಿಯ ಆದರ್ಶವೋ, ಆಶಯವೋ ಮುಖ್ಯವಾಗದೆ ಲಕ್ಷ್ಯಭಾಷೆಯ ಸಾಂಸ್ಕೃತಿಕ ಸನ್ನಿವೇಶವೇ ಮುಖ್ಯವಾಯಿತು.

ಬಿ.ಎಂ.ಶ್ರೀಯವರು ರೂಪಿಸಿದ ಇಂಗ್ಲಿಷ್ ಗೀತಗಳ ಭಾಷಾಂತರವು ಕನ್ನಡಕ್ಕೆ ತೀರ ಅಗತ್ಯವಾಗಿತ್ತು. ನಾಡು ಮತ್ತು ನಾಡಿನ ಭಾಷೆಯನ್ನು ಸಮಕಾಲೀನ ಸಹೃದಯರ ಸಂವೇದನೆಯ ಭಾಗವಾಗಿಸುವ ಪ್ರಯತ್ನದ ಭಾಗವೂ ಹೌದು. ಜೊತೆಗೆ ಪಾಶ್ಚಾತ್ಯ ಚಿಂತನೆಯ ಅಂತರಂಗವನ್ನು ಕನ್ನಡದ ಉಡುಗೆ ತೊಡಿಸಿ ಚಂದವನ್ನು ನೋಡುವುದರ ಭಾಗವು ಹೌದು. ಅವರೇ ಹೇಳುವಂತೆ

ಇವಳ ಸೊಬಗನವಳು ತೊಟ್ಟು ನೋಡಬಯಸಿದೆ
ಅವಳ ತೊಡಿಗೆ ಇವಳಿಗಿಟ್ಟು ಹಾಡಬಯಸಿದೆ.

ಎನ್ನುವ ಬಿ.ಎಂ.ಶ್ರೀ ಮೂಲನಿಷ್ಠತೆಯನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಮೂಲ

ಪಠ್ಯ ಎನ್ನುವುದು ಶ್ರೀಯವರಿಗೆ ನಿಮಿತ್ತಮಾತ್ರವಾಗಿ ಲಕ್ಷ್ಯಭಾಷೆಯ ಕುರಿತ ನಿಷ್ಠೆ ಸಾಂಸ್ಕೃತಿಕವಾಗಿ ಮಹತ್ವದ್ದನಿಸಿದೆ. ಶ್ರೀಯವರ ಇಂಗ್ಲಿಷ್ ಗೀತಗಳ ರಚನೆಗೆ ಮೂಲಕವಿಗಳ ರಚನೆಗಳು ಆಕರಗಳಾದುವು; ಆಕೃತಿಗಳಾದುವು. ಪಾಶ್ಚಾತ್ಯ ವಸ್ತು, ವಿನ್ಯಾಸಗಳಿಗೆ ಕನ್ನಡದ ಲಾವಣ್ಯವನ್ನು ತೊಡಿಸಿದ ಸ್ವತಂತ್ರ ರಚನೆಗಳಾಗಿ ಇಂಗ್ಲಿಷ್ ಗೀತಗಳು ಗಮನ ಸೆಳೆಯುತ್ತವೆ. ಶ್ರೀಯವರ ಕನ್ನಡದ ನಿಷ್ಠೆ ಭಾಷಾಂತರದಲ್ಲೂ ಸಾಂಸ್ಕೃತಿಕ ರಾಜಕೀಯವನ್ನು ಮಾಡಲು ಪ್ರೇರಿಸಿತು. ದೇಶ ಪರಕೀಯರು ಅಧೀನದಲ್ಲಿ ಅಸ್ವತಂತ್ರವಾಗಿತ್ತು. ದೇಶದೊಳಗಿನ ಹಲವು ಭಾಷೆಗಳು ಹೊಸಕಾಲಕ್ಕೆ ಸ್ಪಂದಿಸುವಂತೆ ಪಳಗಿರಲಿಲ್ಲ. ಪಾರಂಪರಿಕವಾದ ಕಾವ್ಯ ರಚನೆಯ ಮಾದರಿಗಳೇ ಪ್ರಮುಖ ಎಂದು ಭಾವಿಸಲಾಗಿತ್ತು. ಎಸ್.ಜಿ.ನರಸಿಂಹಾಚಾರ್ ಮೊದಲಾದವರು ಛಂದೋಬದ್ಧವಾದ ಕನ್ನಡದ ಪ್ರೌಢ ರಚನೆಗಳನ್ನೇ ಮಾದರಿಗಳೆಂದು ಭಾವಿಸಿದ ಕಾಲವಾಗಿತ್ತು ಅದು. ಹಾಗಿದ್ದೂ ಪಾಶ್ಚಾತ್ಯ ಪ್ರಭಾವದಿಂದ ಹೊಸ ಬಗೆಯ ರಚನೆಗಳು ಕನ್ನಡ ಓದುಗರನ್ನ ಹೊಸ ಚಿಂತನೆಗಳತ್ತ ಹಾತೊರೆಯುವಂತೆ ಮಾಡಿದ್ದುವು. ಬರಹಗಾರರು, ಓದುಗರು ಕನ್ನಡಕ್ಕೆ ಕನ್ನಡದ್ದೇ ಆದ ಹೊಸ ಕಾವ್ಯ ಮಾರ್ಗವನ್ನು ಕಂಡುಕೊಳ್ಳುವ ಹಂಬಲದಲ್ಲಿದ್ದರು. ಇಂತಹ ಸಂದರ್ಭದಲ್ಲಿ ಶ್ರೀಯವರು ಇಂಗ್ಲಿಷ್‌ನ ಕೆಲವೊಂದು ಕವಿಗಳ ರಚನೆಗಳನ್ನು ಕನ್ನಡದ ಜಾಯಮಾನಕ್ಕೆ ಹೊಂದಿಕೊಳ್ಳುವಂತೆ ಹೊಸ ಧಾಟಿಯಲ್ಲಿ ಪುನರ್‌ನಿರೂಪಿಸಿದರು. ಕನ್ನಡ ಭಾಷೆಯ ಹೊಸತನವನ್ನು ಅಳವಡಿಸಿಕೊಳ್ಳುವುದಕ್ಕಾಗಿ ಕನ್ನಡ ಕಾವ್ಯ ಹೊಸ ಜಾಡು ಹಿಡಿದು ಮುನ್ನಡೆಯುವುದಕ್ಕಾಗಿ ಬಿ.ಎಂ.ಶ್ರೀಯವರು ಭಾಷಾಂತರದಲ್ಲಿ ಪ್ರಭುತ್ವವನ್ನು ಮೆರೆದವರು. ಕನ್ನಡ ಸಾಂಸ್ಕೃತಿಕ ವಲಯದ ನಿರ್ವಾತವನ್ನು ತುಂಬಿಕೊಳ್ಳಲು ತಾವಾಗಿ ಶ್ರೀಯವರು ಔಚಿತ್ಯವರಿತು ಕಾವ್ಯವನ್ನು ಹೆಣೆದು ಕೊಟ್ಟರು. ಇದು ಭಾಷಾಂತರರ ಪ್ರಕ್ರಿಯೆಯ ಬಹುಮುಖ್ಯ ಲಕ್ಷ್ಯವೂ ಆಗಿ ಸಾಂಸ್ಕೃತಿಕ ವಿನಿಮಯವನ್ನು ಮೀರಿ ಸಂಸ್ಕೃತಿ ನಿರ್ಮಾಣದ ಹಂತಕ್ಕೆ ಬೆಳೆದು ನಿಂತಿದೆ. ಈ ಕಾರಣಕ್ಕಾಗಿ ಇಂಗ್ಲಿಷ್ ಗೀತಗಳ ಆಶಯ ಮತ್ತು ಆಕೃತಿಗಳನ್ನು ತನ್ನೊಳಗೆ ಹುದುಗಿಸಿಕೊಳ್ಳಲು ಕನ್ನಡವು ಕಾತರತೆಯಿಂದಿತ್ತು. ಹಾಗಾಗಿ ಭಾಷಾಂತರ– ಕನ್ನಡದ ಪರಿಸ್ಥಿತಿ ಇವುಗಳನ್ನು ಸಮಕಾಲೀನ ಸಾಂಸ್ಕೃತಿಕ ವಲಯದಲ್ಲಿ ಒಂದಕ್ಕೊಂದು ಪೂರಕವಾಗಿ ಗ್ರಹಿಸುವ ಕ್ರಮವನ್ನು ಶ್ರೀಯವರು ಇಂಗ್ಲಿಷ್ ಗೀತಗಳ ಮೂಲಕ ಮುಂದಿಟ್ಟರು. ಭಾಷಾಂತರ ಎಂದರೆ ಇನ್ನೊಂದು ಭಾಷೆಯ ಕೃತಿಯನ್ನು ನಮ್ಮ ಭಾಷೆಯಲ್ಲಿ ಬರೆಯುವುದಲ್ಲ. ಬದಲಾಗಿ ನಮ್ಮ ಕಾಲದ ಸಾಂಸ್ಕೃತಿಕ ಅಗತ್ಯಕ್ಕೆ ಬೇಕಾದಂತೆ ಇನ್ನೊಂದು ಭಾಷೆಯ ಕೃತಿಯನ್ನು ಪಳಗಿಸಿ ಕೊಳ್ಳುವುದೇ ಭಾಷಾಂತರ ಎಂಬಂತೆ ಶ್ರೀ ಅವರು ಇಂಗ್ಲಿಷ್ ಗೀತಗಳನ್ನು ಪುನರ್ರಚಿಸಿದರು.

ಅನ್ಯಭಾಷೆಯ ಕೃತಿಯೊಂದನ್ನು ಲಕ್ಷ್ಯಭಾಷೆಯಲ್ಲಿ ಪಳಗಿಸುವುದೆಂದರೆ ಕೃತಿಯ ಆಶಯವನ್ನು, ಕತೆಯನ್ನು ಬದಲಾಯಿಸುವ ಮಟ್ಟಕ್ಕೆ ಹೋದ ಭಾಷಾಂತರಗಳಿವೆ. ಅದು ನಿರ್ದಿಷ್ಟ ಸಾಂಸ್ಕೃತಿಕ ರಾಜಕಾರಣದ ಭಾಗವೇ ಆಗಿರುವುದಿದೆ. ಉದಾಹರಣೆಗೆ ಇಲ್ಲಿ ಹೆಸರಿಸಬೇಕಾದ ಕಾದಂಬರಿ ಸಾರಾ ಅಬೂಬಕ್ಕರ್ ಅವರ ಚಂದ್ರಗಿರಿಯ ತೀರದಲ್ಲಿ. ಇದರ ಮಲಯಾಳಂ ಅನುವಾದವನ್ನು ಮಾಡಿದವರು ಸಿ.ರಾಘವನ್. ಅದು 'ಈ ಆಯ್ಚ' ಎಂಬ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ಸಾರಾ ಅವರ ಕನ್ನಡ ಕಾದಂಬರಿಯಲ್ಲಿ ನಾಯಕಿ ನಾದಿರಾ ಕೊನೆಗೆ ಮಸೀದಿಯ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ ಎಂಬ ವಿವರವಿದೆ. ಆದರೆ ಮಲಯಾಳಂ ಅನುವಾದಕರು ಆಕೆಯನ್ನು ನದಿಗೆ ಧುಮುಕಿದಳು ಎಂದು ಬದಲಾವಣೆ ಮಾಡಿಕೊಂಡಿದ್ದಾರೆ. ಅನುವಾದಕ ಸಿ.ರಾಘವನ್ ಅವರಿಗೆ ಪತ್ರಿಕೆಯವರು ಈ ಸಲಹೆಯನ್ನು ನೀಡಿದರಂತೆ. ರಾಘವನ್ ಅವರ ಆಪ್ತವಲಯದ ಸ್ನೇಹಿತರು ಈ ಬದಲಾವಣೆ ಸೂಕ್ತ ಎಂದೇ ಹೇಳಿದ್ದರಂತೆ. ಹಾಗಾಗಿ ಚಂದ್ರಗಿರಿಯ ತೀರದಲ್ಲಿ ಪತ್ರಿಕೆಯಲ್ಲಿ ಪ್ರಕಟವಾಯಿತು.

ಓದುಗರಿಗೆ ಮೂಲ ಕಾದಂಬರಿಯ ಈ ಬದಲಾವಣೆ ತಿಳಿಯಲೂ ಇಲ್ಲ. ಆದರೆ ಮಲಯಾಳಂನಲ್ಲಿ ಓದಿದವರು ಸಾರಾ ಅವರಿಗೆ ಈ ಬದಲಾವಣೆಯನ್ನು ಗಮನಕ್ಕೆ ತಂದರು. ಆದರೆ ಈ ಬದಲಾವಣೆಗೆ ಮೂಲ ಲೇಖಕರ ಅನುಮತಿಯಿಂದಾದುದಲ್ಲ. ಅವರು ಈ ಬದಲಾವಣೆಯನ್ನು ಸಮ್ಮತಿಸಿರಲಿಲ್ಲ. ಪುಸ್ತಕ ರೂಪದಲ್ಲಿ ಪ್ರಕಟಿಸುವುದಕ್ಕೂ ಅನುಮತಿಯನ್ನು ನಿರಾಕರಿಸಿದರು. ನಂತರ ಸಾರಾ ಅಬೂಬಕರ್ ಅವರೇ ಕೆ.ಕೆ.ನಾಯರ್ ಅವರಿಂದ ಮತ್ತೊಂದು ಅನುವಾದವನ್ನು ಮಾಡಿಸಿದರು. ಅವನ್ನು ಪ್ರಭಾತ್ ಬುಕ್ ಹೌಸ್‌ನವರು ಪ್ರಕಟಿಸಿದ್ದಾರೆ.

ಮೂಲ ಲೇಖಕರು ಅನುವಾದಗಳ ಹಿಂದೆ ಹೋಗುವುದಿಲ್ಲ. ಅನುವಾದಗಳಲ್ಲಿ ಮಾಡಿರುವ ಸಾಂಸ್ಕೃತಿಕ ರಾಜಕಾರಣಗಳು ಗಮನಕ್ಕೆ ಬರುವುದಿಲ್ಲ. ಮೂಲ ಕೃತಿಯ ಆಶಯವನ್ನು ತಿರುಚುವ ಪ್ರಯತ್ನವನ್ನು ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಮಾಡಬಹುದು. ಕೆಲವೊಮ್ಮೆ ಮೂಲಕೃತಿಯ ಗ್ರಹಿಕೆ ಸರಿಯಾಗಿಲ್ಲದಿದ್ದಾಗ ಭಾಷಾಂತರಗಳಲ್ಲಿ ಮಿತಿಗಳು ಉಳಿದುಕೊಳ್ಳುತ್ತವೆ. ಮೂಲಕೃತಿಯ ಆಶಯ ಅನುವಾದಗಳಲ್ಲಿಯೂ ಬಂದಿರುತ್ತದೆ ಎಂಬುದು ಓದುಗರ ಸಾಮಾನ್ಯ ಗ್ರಹಿಕೆ. ಭಾಷಾಂತರವನ್ನೇ ಓದಿದರೆ ಮೂಲ ಲೇಖಕರ ಕೃತಿಯನ್ನೇ ಓದಿದೆ ಎಂದು ಭಾವಿಸುತ್ತಾರೆ. ಭಾಷಾಂತರದಲ್ಲಿ ಮಾಡಿದ ಬದಲಾವಣೆಗಳ್ಯಾವುವೂ ಓದುಗರಿಗೆ ತಿಳಿದಿರುವುದಿಲ್ಲ. ಓದುಗರಿಗೆ ಕೃತಿ ಭಾಷಾಂತರವಾದರೂ ಅದುವೇ ಮೂಲ ಕೃತಿಯಾಗಿ ಬಿಡುತ್ತದೆ. ನೇರವಾಗಿ ಮೂಲ ಭಾಷೆಯಲ್ಲಿಯೇ ಕೃತಿಯನ್ನು ಓದಲಾಗದವರು ಭಾಷಾಂತರವನ್ನು ಅವಲಂಬಿಸುತ್ತಾರೆ. ಹಾಗಾಗಿ ಭಾಷಾಂತರ ಎಂದರೆ ಮೂಲಕೃತಿಯ ಆಶಯವನ್ನು ಯಥಾವತ್ತಾಗಿ ದಾಖಲಿಸಿರುತ್ತಾರೆ ಎಂದೇ ತಿಳಿದಿರುತ್ತಾರೆ. ಅದೊಂದು ನಂಬಿಕೆ. ಮೂಲಕೃತಿಯ ಜೊತೆಗೆ ಭಾಷಾಂತರದ ಸಾಮೀಪ್ಯವನ್ನು ಓದುಗರು ನಂಬುತ್ತಾರೆಯೇ ಹೊರತು ಅದರ ಅಂತರವನ್ನಲ್ಲ. ಆದರೆ ಭಾಷಾಂತರ ಕೃತಿಗಳ ಅಧ್ಯಯನ ಮಾಡುವಾಗ ಮೂಲಕೃತಿ ಮತ್ತು ಭಾಷಾಂತರಗಳ ನಡುವೆ ಸಾಮೀಪ್ಯಕ್ಕಿಂತ ಅಂತರವೇ ಹೆಚ್ಚು ಗೋಚರಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಭಾಷಾಂತರ ಕೃತಿ ನೇರವಾಗಿ ಮೂಲ ಭಾಷೆಯಿಂದ ಬಂದಾಗ ಇಬ್ಬರು ಓದುಗರ ಗ್ರಹಿಕೆಯ ಅಂತರ ಉಳಿದೇ ಉಳಿಯುತ್ತದೆ. ಅಂದರೆ ಮೂಲ ಕೃತಿಯ ಓದುಗರಾದ ಭಾಷಾಂತರಕಾರರು ಅವರ ಗ್ರಹಿಕೆಯನ್ನು ಲಕ್ಷ್ಯಭಾಷೆಯಲ್ಲಿ ಅಭಿವ್ಯಕ್ತಿಸುವರು. ಲಕ್ಷ್ಯಭಾಷೆಯ ಓದುಗರು ಭಾಷಾಂತರವನ್ನೇ ಓದುತ್ತಾರೆ. ಭಾಷಾಂತರ ಓದುಗರ ಗ್ರಹಿಕೆಯು ಮೂಲ ಕೃತಿಯ ಓದುಗರ ಅಥವಾ ಭಾಷಾಂತರಕಾರರ ಗ್ರಹಿಕೆಗಿಂತ ಬೇರೆಯೇ ಆಗಿರುತ್ತದೆ.

ಭಾಷಾಂತರವು ಮೂಲಕ ಭಾಷೆಯಿಂದ ಬಂದಿದ್ದರೆ ಓದುಗರ ನಡುವೆ ಮತ್ತೊಬ್ಬ ಓದುಗನ ಗ್ರಹಿಕೆಯು ಸೇರಿ ಅಂತರ ಹೆಚ್ಚಾಗಿರುತ್ತದೆ. ಈ ಎಲ್ಲಾ ಗ್ರಹಿಕೆಗಳು ಆಯಾ ಭಾಷೆಗಳ ಸಂಸ್ಕೃತಿಯ ಭಾಗವಾಗಿಯೇ ನಡೆದಿರುತ್ತದೆ. ಹಾಗೂ ಓದುಗರ ಗ್ರಹಿಕೆಗಳ ಮೇಲೆ ಸಾಂಸ್ಕೃತಿಕ ಒತ್ತಡಗಳು ಸ್ವಾಭಾವಿಕವಾಗಿ ಇರುತ್ತದೆ. ಅದು ಕೃತಿಯ ಆಶಯ, ಅದರ ಸೈದ್ಧಾಂತಿಕ ವಾದಗಳು, ಕೃತಿಕಾರ ಮತ್ತು ಓದುಗರ ಸಾಮಾಜಿಕ ವಾಸ್ತವ ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಭಾಷಾಂತರವನ್ನು ರೂಪಿಸುವಲ್ಲಿ ಬೇರೆ ಬೇರೆ ರೀತಿಯ ಪ್ರಭಾವವನ್ನು ಬೀರಿರುತ್ತವೆ. ಹಾಗಾಗಿ ಭಾಷಾಂತರಗಳ ಓದು ಆಕರ ಭಾಷೆಯ ಓದಿನ ಗ್ರಹಿಕೆಗಿಂತ ಬೇರೆಯೇ ಆದ ಗ್ರಹಿಕೆಯೊಂದನ್ನು ಸಾಂಸ್ಕೃತಿಕವಾಗಿ ಮುಂದಿಡುತ್ತದೆ. ಅದಕ್ಕೆ ಕಾಲ, ದೇಶ, ಭಾಷೆ, ಪ್ರಭುತ್ವ ಎಲ್ಲವೂ ಕಾರಣವಾಗಿರುತ್ತದೆ. ಹಾಗಾಗಿ ಭಾಷಾಂತರದಲ್ಲಿ ಸಾಂಸ್ಕೃತಿಕ ರಾಜಕಾರಣ ಎಂಬುದು ಇವೆಲ್ಲವುಗಳ ಪ್ರಭಾವದಿಂದ ರೂಪುಗೊಳ್ಳುವ ಒಂದು ಅಮೂರ್ತ ಚಿಂತನೆ. ಅದು ಮೂರ್ತಗೊಳ್ಳುವುದು ಭಾಷಾಂತರ ಎಂಬ ಉತ್ಪನ್ನದ ಮೂಲಕ.

ಟಾಲ್‌ಸ್ಟಾಯ್ ಕೃತಿಗಳ ಇಂಗ್ಲಿಷ್ ಭಾಷಾಂತರಗಳು ಹಲವಿವೆ. ಆದರೆ ಕನ್ನಡಕ್ಕೆ

ಅನುವಾದ ಮಾಡಲು ದೇಜಗೌ ಅವರು ಆಯ್ಕೆ ಮಾಡಿಕೊಂಡಿದ್ದು ಅಮರ್ ಮೂಡ್ ಭಾಷಾಂತರವನ್ನು. ಅದಕ್ಕೆ ಮುಖ್ಯಕಾರಣ ಇಂಗ್ಲೆಂಡಿನವನಾದ ಆತ ರಷ್ಯಕ್ಕೆ ಹೋಗಿ ರಷ್ಯನ್ ಭಾಷೆ ಕಲಿತು, ರಷ್ಯನ್ ಹುಡುಗಿಯನ್ನು ಮದುವೆಯಾಗಿ, ಕೆಲವು ಕಾಲ ಟಾಲ್‌ಸ್ಟಾಯ್‌ಯ ಜತೆಯಲ್ಲಿದ್ದು, ಅವರ ಎಲ್ಲಾ ಸಾಹಿತ್ಯವನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾನೆ. ಅಲ್ಲದೆ ಅವರ ಜೀವನ ಚರಿತ್ರೆಯನ್ನು ಇಂಗ್ಲಿಷ್‌ನಲ್ಲಿ ಬರೆದಿದ್ದಾನೆ. ಅಮರ್ ಮೂಡ್‌ನ ಇಂಗ್ಲಿಷ್ ಭಾಷಾಂತರ ಗಳಲ್ಲಿ ರಷ್ಯನ್ ಸಂಸ್ಕೃತಿ ಹರಿಯುವುದನ್ನು ಗಮನಿಸಿದ ದೇಜಗೌ ಕನ್ನಡ ಅನುವಾದಕ್ಕೂ ಅವನ ಕೃತಿಯನ್ನು ಪ್ರಮುಖವಾಗಿ ಆಧರಿಸಿದ್ದಾರೆ.

ಅಮರ್ ಮೂಡ್ ಟಾಲ್‌ಸ್ಟಾಯ್‌ನ ಕೃತಿಯನ್ನು ಸಮರ್ಥವಾಗಿ ಅರ್ಥೈಸಿಕೊಳ್ಳಲು ರಷ್ಯನ್ ಭಾಷೆ ಕಲಿತ. ಅವರ ಸಂಸ್ಕೃತಿಯನ್ನು ಕಲಿತು ಅವರೊಳಗೊಂದಾಗಿ ಮತ್ತೆ ಕೃತಿಯನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದ. ಹಾಗೆ ಭಾಷಾಂತರಕಾರರೆಲ್ಲರೂ ಅಮರ್ ಮೂಡ್‌ನ ಮಾದರಿಯನ್ನು ಮಾತೃಕೆಯಾಗಿ ಸ್ವೀಕರಿಸುವುದು ಅಸಾಧ್ಯವಾದ ಮಾತು. ಹಾಗಾದರೂ ಅಮರ್ ಮೂಡ್ ಭಾಷಾಂತರವನ್ನೇ ಹೆಚ್ಚು ನಂಬುತ್ತಾರೆ. ಅಮರ್ ಮೂಡ್ ರೂಪಿಸಿದ ಭಾಷಾಂತರವೂ ಅವನ ವೈಯಕ್ತಿಕ ರಾಜಕಾರಣದ ಭಾಗವೇ ಆಗಿದೆ. ಆತ ರೂಪಿಸಿದ ಭಾಷಾಂತರವನ್ನೇ ಸಾಂಸ್ಕೃತಿಕ ಜಗತ್ತು ನಂಬುವಂತಹ ರಾಜಕಾರಣವನ್ನು ಭಾಷಾಂತರಕಾರನೇ ಮಾಡಿ ದಂತಾಯಿತು. ಹಾಗೆಯೇ ಇತರ ಭಾಷಾಂತರಕಾರರು ರೂಪಿಸಿದ ಭಾಷಾಂತರಗಳು ಅಮೂಲ್ಯ ಎಂಬ ನೆಲೆಯಲ್ಲಿಯೂ ಯೋಚಿಸುವಂತಾಗುತ್ತದೆ.

ಸಾಂಸ್ಕೃತಿಕ ರಾಜಕಾರಣವು ಒಂದು ಭಾಷಾಂತರ ಕೃತಿಯನ್ನು ಹೀಗೆ ಅರ್ಥೈಸಬೇಕೆಂದು ಒತ್ತಡವನ್ನು ಹೇರುತ್ತದೆ. ಹಾಗೆ ಹೇರುವ ಒತ್ತಡವನ್ನು ಭಾಷಾಂತರಕ್ಕಾಗಿ ಕೃತಿಯ ಆಯ್ಕೆ ಮಾಡುವ ಸಂದರ್ಭದಿಂದಲೇ ಗುರುತಿಸಬಹುದಾಗಿದೆ. ಆಯ್ಕೆಯ ಬಳಿಕ ಭಾಷಾಂತರವಾಗಿ ಓದುಗರನ್ನು ಸೇರುವ ವಿಧಾನಗಳನ್ನು ಸಾಂಸ್ಕೃತಿಕ ರಾಜಕಾರಣವು ನಿಯಂತ್ರಿಸುತ್ತಿರುತ್ತದೆ.

ಭಾಷಾಂತರದಲ್ಲಿ ಸಾಂಸ್ಕೃತಿಕ ರಾಜಕಾರಣವು ಆಕರ ಭಾಷೆ ಹಾಗೂ ಲಕ್ಷ್ಯಭಾಷೆಯ ಎರಡೂ ಸಂದರ್ಭಗಳಲ್ಲಿಯೂ ನಡೆಯಬಹುದು. ಆಕರ ಭಾಷೆಯ ಕೃತಿಯೊಂದು ಲಕ್ಷ್ಯಭಾಷೆಗೆ ಹೋಗಲೇಬೇಕಾದ ಅಗತ್ಯವನ್ನ ಸಾರಿಹೇಳುತ್ತಾ ಭಾಷಾಂತರಗಳು ರೂಪುಗೊಳ್ಳಲು ಕಾರಣವಾಗಬಹುದು. ಭಾಷಾಂತರಗಳನ್ನು ಮಾಡಬೇಕು ಎಂಬ ಒತ್ತಡ ಆಕರ ಭಾಷೆಯಲ್ಲಿ ರೂಪುಗೊಂಡರೆ ಲಕ್ಷ್ಯಭಾಷೆಯ ಓದುಗರಿಗೆ ಸ್ವೀಕಾರ್ಯ ಆಗಬೇಕಾಗಿಲ್ಲ. ಆಕರಭಾಷೆಯ ಸಾಂಸ್ಕೃತಿಕ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹುಟ್ಟಿಕೊಳ್ಳುವ ಭಾಷಾಂತರ ಅಪೇಕ್ಷೆ ರಪ್ತು ಭಾಷಾಂತರಗಳನ್ನು ಸೃಷ್ಟಿಸುತ್ತದೆ. ಇಂತಹ ಭಾಷಾಂತರಗಳ ಸೃಷ್ಟಿಗೆ ಆಕರಭಾಷೆಯ ಸಂದರ್ಭದಲ್ಲಿಯೇ ಹೆಚ್ಚು ಮುತುವರ್ಜಿ ಇರುತ್ತದೆ. ಆದರೆ ಅದಕ್ಕೆ ಬಳಕೆದಾರರು ಇರುವುದಿಲ್ಲ. ಹಾಗೆಯೇ ಲಕ್ಷ್ಯಭಾಷೆಯ ಸಾಂಸ್ಕೃತಿಕ ಸಂದರ್ಭಕ್ಕೆ ಸ್ವೀಕಾರ್ಯವಾಗುವ ಭಾಷಾಂತರಗಳಿಗೆ ಬೇಡಿಕೆ ರೂಪದ ಒತ್ತಡಗಳೇ ತಲೆದೋರಬಹುದು. ಇದರಿಂದ ಲಕ್ಷ್ಯಭಾಷೆಯ ಓದುಗರು ಭಾಷಾಂತರಗಳನ್ನು ಪ್ರೀತಿಯಿಂದಲೇ ಸ್ವಾಗತಿಸಬಹುದು. ಅಂದರೆ ಲಕ್ಷ್ಯಭಾಷೆಯ ಸಂದರ್ಭದಲ್ಲಿ ಬಳಸುವವರು ಭಾಷಾಂತರಗಳನ್ನು ಬೇಕಾದಂತೆ ಆಮದು ಮಾಡಿಕೊಳ್ಳಬಲ್ಲರು. ಲಕ್ಷ್ಯಭಾಷೆಯಲ್ಲಿ ಕುತೂಹಲ ಜನ್ಯವಾಗಿ ರೂಪುಗೊಂಡ ಭಾಷಾಂತರಗಳನ್ನು ಆಮದು ಭಾಷಾಂತರ ಗಳೆಂದು ಕರೆಯಬಹುದು. ಸಾಂಸ್ಕೃತಿಕ ರಾಜಕಾರಣದ ಪರಿಣಾಮವಾಗಿ ರಪ್ತು ಭಾಷಾಂತರಗಳು ಮತ್ತು ಆಮದು ಭಾಷಾಂತರಗಳು ರೂಪುಗೊಳ್ಳುತ್ತಲೇ ಇರುತ್ತವೆ. ಇದಕ್ಕೆ ನಿದರ್ಶನವಾಗಿ ಇಂಗ್ಲಿಷ್‌ನಲ್ಲಿ ವಚನಗಳ ಭಾಷಾಂತರವನ್ನು ರೂಪಿಸುವ ಹಾಗೂ ಕನಕದಾಸರ ಸಾಹಿತ್ಯವನ್ನು ಇತರೇ ಭಾಷೆಗಳಿಗೆ ಭಾಷಾಂತರಿಸುವ ಯೋಜನೆಯನ್ನು ಹೆಸರಿಸಬಹುದು. ಇಂಗ್ಲಿಷ್ ವಚನ

ಅನುವಾದಗಳ ಯೋಜನೆ ತುಂಬಾ ಮಹತ್ವಾಕಾಂಕ್ಷೆಯಿಂದ ಕೂಡಿದೆ. ಯೋಜನೆಯ ಅನುವಾದವನ್ನು ಬಿಡುಗಡೆ ಮಾಡುತ್ತಾ ಸಂಸ್ಥೆಯ ಅಧ್ಯಕ್ಷರು ಹೀಗೆ ಹೇಳಿದರು ಎಂದು ವರದಿಯಾಗಿತ್ತು.

"ಬರಾಕ್ ಒಬಾಮ, ಪುಟಿನ್ ಮುಂತಾದ ಜಾಗತಿಕಮಟ್ಟದ ನಾಯಕರು, ನೀತಿ ನಿರೂಪಕರು, ವಿದ್ವಾಂಸರು, ಇತಿಹಾಸ ಸಂಶೋಧಕರು, ಬಸವಣ್ಣನನ್ನು ಓದುವಂತಾಗಬೇಕು. ಬಸವಣ್ಣನವರು ಮತ್ತು ಶಿವಶರಣರ ವಚನಗಳನ್ನು ದೇಶದ ಇತರ ಭಾಷೆ ಹಾಗೂ ವಿದೇಶಿ ಭಾಷೆಗಳಿಗೆ ಭಾಷಾಂತರ ಮಾಡದೇ ದೊಡ್ಡ ತಪ್ಪು ಮಾಡಿದ್ದೇವೆ. ಬಸವಣ್ಣನವರನ್ನು ಇಷ್ಟೊತ್ತಿಗಾಗಲೆ ಜಾಗತಿಕ ಮಟ್ಟದಲ್ಲಿ ಪರಿಚಯಿಸಿದ್ದರೆ ಬಸವಧರ್ಮ, ಬಸವ ಸಂಸ್ಕೃತಿ, ಜಾಗತಿಕ ಮಟ್ಟದಲ್ಲಿ ಬೆಳೆದಿರುತ್ತಿತ್ತು. ಈಗಲಾದರೂ ಆ ತಪ್ಪನ್ನು ಒಪ್ಪಿಕೊಳ್ಳಬೇಕಾಗಿದೆ"(ಕ.ಪ್ರ. 15.12.14)

ಈ ಮಾತುಗಳಲ್ಲಿ ಭಾಷಾಂತರದ ಉದ್ದೇಶ, ಪ್ರಯೋಜನ, ಇವುಗಳ ಬಗೆಗೆ ಮಹತ್ವಾಕಾಂಕ್ಷೆಯಿದೆ. ವಾಸ್ತವದಲ್ಲಿ ಭಾಷಾಂತರವಾದ ಮಾತ್ರಕ್ಕೆ ಈ ಎಲ್ಲಾ ಉದ್ದೇಶಗಳು ಈಡೇರುತ್ತವೆ ಎಂಬ ತಿಳುವಳಿಕೆಯೇ ತೀರಾ ಅಪ್ರಬುದ್ಧವಾದದ್ದು. ಭಾಷಾಂತರವೇ ಬಸವಣ್ಣನ ವಿಚಾರಗಳನ್ನು ತಿಳಿದುಕೊಳ್ಳಲು ಏಕೈಕ ಮಾರ್ಗ ಎಂದೇ ತಿಳಿದಂತಿದೆ. ಭಾಷಾಂತರದ ಮೂಲಕ ಬಸವಧರ್ಮ, ಬಸವ ಸಂಸ್ಕೃತಿ ಬೆಳೆಯುತ್ತಿತ್ತು ಎಂಬ ತಿಳುವಳಿಕೆ ಇಲ್ಲಿಯದು. ಈ ತರದ ಮಾತುಗಳಿಗೆ ಆಕರ ಭಾಷೆಯ ಸಾಂಸ್ಕೃತಿಕ ಸಂದರ್ಭವೇ ಮುಖ್ಯ ಕಾರಣ. ಬಸವಣ್ಣನ ವಚನಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿ ರಷ್ಯ ಅಮೇರಿಕಗಳಿಗೆ ರಫ್ತು ಮಾಡಿಬಿಡಬೇಕು. ಅವುಗಳನ್ನು ಪುಟಿನ್, ಒಬಾಮ ಓದಬೇಕು ಎಂಬ ಮಹತ್ವಾಕಾಂಕ್ಷೆ ರೂಪುಗೊಂಡುದು ಆಕರ ಭಾಷೆಯಲ್ಲಿ. ಆದರೆ ಲಕ್ಷ್ಯಭಾಷೆಯ ಓದುಗರಾದ ಬರಾಕ್ ಒಬಾಮ, ಪುಟಿನ್‌ರನ್ನು ತಲುಪುವಂತೆ ಭಾಷಾಂತರವನ್ನು ರೂಪಿಸುವ ಜವಾಬ್ದಾರಿಯನ್ನು ಲಕ್ಷ್ಯಭಾಷೆಯಲ್ಲಿ ತೆಗೆದುಕೊಳ್ಳುವಂತಾಗಬೇಕು. ಹಾಗೆ ಆಗಬೇಕಾದರೆ ಬಸವಣ್ಣನ ವಚನಗಳನ್ನು ಲಕ್ಷ್ಯಭಾಷೆಯ ನಿರ್ದಿಷ್ಟ ವಲಯದಲ್ಲಿ ಪ್ರಚುರಪಡಿಸಿ ಅಲ್ಲಿಂದ ಬೇಡಿಕೆಯ ರೂಪದಲ್ಲಿ ಭಾಷಾಂತರಗಳನ್ನು ರೂಪಿಸುವಂತಾಗಬೇಕು.

ಕನ್ನಡದಲ್ಲಿ ಟಾಲ್‌ಸ್ಟಾಯ್ ಕೃತಿಗಳನ್ನು ಭಾಷಾಂತರ ಮಾಡಬೇಕೆಂಬ ಒತ್ತಡ ಬಂದುದು ರಷ್ಯನ್ ಸಂದರ್ಭದಲ್ಲಿ ಅಲ್ಲ. ಅದಕ್ಕೆ ಹದಗೊಂಡ ಪರಿಸ್ಥಿತಿ ಕನ್ನಡ ಸಂದರ್ಭದಲ್ಲಿ ನಿರ್ಮಾಣವಾಗಿತ್ತು. ಗಾಂಧೀ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್‌ನ ಚಿಂತನೆಗಳಿಗೆ ಕನ್ನಡದಲ್ಲಿಯೇ ಬೇಡಿಕೆ ಸೃಷ್ಟಿಮಾಡಿದ ಪರಿಣಾಮವಾಗಿ ಭಾಷಾಂತರಗಳು ರೂಪುಗೊಂಡವು. ಇವುಗಳ ಭಾಷಾಂತರಗಳಲ್ಲಿಯೂ ಸಾಂಸ್ಕೃತಿಕ ರಾಜಕಾರಣವು ಇದೆಯಾದರೂ ಅವುಗಳನ್ನು ಸ್ವೀಕರಿಸುವ ಮನಸ್ಥಿತಿ ಕನ್ನಡದ ಸಂದರ್ಭದಲ್ಲಿ ಜಾಗೃತವಾಗಿತ್ತು.

ಹಾಗಾಗಿ ಭಾಷಾಂತರದ ಸಾಂಸ್ಕೃತಿಕ ರಾಜಕಾರಣ ಎಂಬುದು ಆಕರದ ವಾಸ್ತವಕ್ಕಿಂತ ಭಿನ್ನವಾಗಿ ರೂಪಿಸಲು ಯತ್ನಿಸುವುದೇ ಆಗಿದೆ. ಅದಕ್ಕೆ ಸಾಂಸ್ಕೃತಿಕ ಪರಿಸರದ ಸಂಗತಿಗಳು ಕಾರಣವಾಗಿದೆ ಎಂಬುದನ್ನು ಓದುಗರು ಕಂಡುಕೊಳ್ಳಬಹುದು. ಸಾಂಸ್ಕೃತಿಕ ಕಾರಣಗಳು ನಿರ್ದಿಷ್ಟವಾಗಿ ಇವೆ ಎಂಬುದನ್ನು ಕೃತಿಯ ಆಯ್ಕೆ, ಕೃತಿ ರೂಪುಗೊಳ್ಳುವ ಆಕರ ಸಂಸ್ಕೃತಿಯ ಪ್ರಭುತ್ವದ ರಾಜಕಾರಣ, ಭಾಷಾಂತರಕಾರರ ವೈಯಕ್ತಿಕ ಹಿತಾಸಕ್ತಿ, ಲಕ್ಷ್ಯಭಾಷೆಯ ನಿರ್ದಿಷ್ಟ ಓದುಗವರ್ಗ, ಭಾಷಾಂತರ ಕೃತಿಯ ಮಾರಾಟ ಜಾಲ, ಕೃತಿಯ ಆಕರ ಹಾಗೂ ಲಕ್ಷ್ಯ ಭಾಷೆಗಳ ರಾಷ್ಟ್ರೀಯತೆ ಈ ಎಲ್ಲಾ ಸಂದರ್ಭಗಳಲ್ಲಿಯೂ ಕಂಡುಕೊಳ್ಳುವ ಅವಕಾಶವಿದೆ. ಕೃತಿಯೊಂದು ಭಾಷಾಂತರವಾಗಲು ಇರುವ ಕಾರಣವನ್ನು ಶೋಧಿಸುತ್ತ ಹೋದಂತೆ ಸಾಂಸ್ಕೃತಿಕ ರಾಜಕಾರಣದ ಪಾತ್ರ ಸ್ಪಷ್ಟವಾಗಬಹುದು. ಭಾಷಾಂತರ ಕೃತಿಗಳ ಓದು ಸಾಂಸ್ಕೃತಿಕ ರಾಜಕಾರಣದ ಹೊರತಾಗಿಯೂ ಸಾಧ್ಯವಾಗಬಹುದು. ಆದರೆ ಅಧ್ಯಯನಗಳಲ್ಲಿ ಭಾಷಾಂತರದ ಸಾಂಸ್ಕೃತಿಕ

ರಾಜಕಾರಣದ ಸಂದರ್ಭವನ್ನು ಹೊರತುಪಡಿಸುವುದು ಸಾಧ್ಯವಾಗದು.

ಕೃತಿಯೊಂದು ಭಾಷಾಂತರವಾಗುವಾಗ ಅಯ್ಕೆಯಲ್ಲಿ, ಆಕೃತಿಯಲ್ಲಿ, ನಿರೂಪಣೆಯಲ್ಲಿ ನಿರ್ದಿಷ್ಟವಾದ ಯಜಮಾನಿಕೆಯ ಪ್ರವೃತ್ತಿಯೊಂದು ಇರುತ್ತದೆ. ಇದನ್ನು ಸಾಂಸ್ಕೃತಿಕವಾಗಿ ಬೇರೆ ಬೇರೆ ನೆಲೆಗಳಿಂದ ಕಂಡುಕೊಳ್ಳುವುದು ಸಾಧ್ಯವಿದೆ. ಇವುಗಳನ್ನು ಸಾಮಾಜಿಕ, ಸೈದ್ಧಾಂತಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಭಾಷಿಕ ಮೊದಲಾದ ನೆಲೆಗಳಿಂದ ಪರಿಶೀಲಿಸಿದರೆ ಸಾಂಸ್ಕೃತಿಕ ರಾಜಕಾರಣದ ಸ್ವಭಾವ ಹಾಗೂ ಸ್ವರೂಪ ವ್ಯಕ್ತವಾಗಬಹುದು.

ಪರಾಮರ್ಶನ ಗ್ರಂಥಗಳು

1. ಮೋಹನ ಕುಂಟಾರ್ ಎ.(ಡಾ), (2010), ಭಾಷಾಂತರ ವಿಭಿನ್ನ ನೆಲೆಗಳು, ಪಲ್ಲವ ಪ್ರಕಾಶನ, ಚನ್ನಪಟ್ಟಣ
2. ಮೋಹನ ಕುಂಟಾರ್ ಎ.(ಡಾ), (2014), ಕನ್ನಡ ಮಲಯಾಳಂ ಭಾಷಾಂತರ ಪ್ರಕ್ರಿಯೆ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ
3. ಶ್ರೀಕಂಠಯ್ಯ ಬಿ.ಎಂ (1911)– ಕನ್ನಡ ಮಾತು ತಲೆಯೆತ್ತುವ ಬಗೆ ಸಿರಿಗನ್ನಡ, ನುಡಿಸಿರಿ ಸಂಪುಟ 2013.

ರಥಿಕನ ಮನಸಿನ ದುಗುಡವನು
ಸಾರಥಿ ಕಳೆಯಲು ಬಯಸಿದನು
ಪ್ರತಿಫಲವಿಲ್ಲದೆ ಕರ್ಮವ ಮಾಡಿ
ಮುಕುತಿಯ ಪಡೆವುದೆ ಧರ್ಮವು ನೋಡಿ.

ವಿದೇಶದಲ್ಲಿ ಮೊಳಗಿದ ಸ್ವಾತಂತ್ರ್ಯ ಕಹಳೆ: ಗದರ್ ಚಳುವಳಿ

ಜ್ಯೋತಿ ರೈ
ಕನ್ನಡ ಅಧ್ಯಾಪಕರು
ಸೈಂಟ್ ಅಲೋಶಿಯಸ್ ಕಾಲೇಜು, ಹರಿಹರ, ದಾವಣಗೆರೆ ಜಿಲ್ಲೆ

1947ರಲ್ಲಿ ಭಾರತವು ಸ್ವತಂತ್ರವಾಯಿತು. ಆದರೆ ಸುಮಾರು ಕ್ರಿ.ಪೂ. 300ರಿಂದಲೂ ನಮ್ಮ ದೇಶವು ನಿರಂತರವಾಗಿ ವಿದೇಶಿ ಆಕ್ರಮಣಕ್ಕೆ ಒಳಗಾಗುತ್ತಲೇ ಇತ್ತು.

ಇವುಗಳಲ್ಲಿ ಕೆಲವು ಗುಂಪುಗಳು ಭಾರತದ ಸಂಪತ್ತನ್ನು ಲೂಟಿ ಮಾಡುವ ಉದ್ದೇಶದಿಂದ ಬಂದರೆ ಇನ್ನು ಕೆಲವು ಗುಂಪುಗಳು ಭಾರತದ ಧರ್ಮ ಸಂಸ್ಕೃತಿಗಳ ಮೇಲೂ ಧಾಳಿ ನಡೆಸಿದವು. ಈ ವಿದೇಶೀ ಆಕ್ರಮಣಕಾರರ ವಿರುದ್ಧ ತಮ್ಮ ಅಸ್ತಿತ್ವ, ದೇಶ, ಧರ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಸುಮಾರು 2000 ವರ್ಷಗಳವರೆಗೆ ಭಾರತೀಯರು ಹೋರಾಡುತ್ತಲೇ ಬಂದಿದ್ದರು.

ಕೊನೆಯದಾಗಿ ಬಂದ ಇಂಗ್ಲಿಷರು ಹಂತ ಹಂತವಾಗಿ ಇಡೀ ದೇಶವನ್ನು ಆಕ್ರಮಿಸಿ ಕೊಂಡರು. ಭಾರತವು ಸಂಪೂರ್ಣ ಇಂಗ್ಲೀಷರ ಆಳ್ವಿಕೆಗೊಳಗಾದುದು 19ನೇ ಶತಮಾನದ ಮಧ್ಯಭಾಗದಲ್ಲಿ. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಪೂರಾ ಅಧೀನವಾದ ನಂತರ ಈ ನಮ್ಮ ದೇಶವನ್ನು ಸ್ವತಂತ್ರಗೊಳಿಸುವ ಸಲುವಾಗಿ ನಡೆದ ಹೋರಾಟವು ತೊಂಭತ್ತು ವರ್ಷಗಳಷ್ಟು ದೀರ್ಘ ವಾದುದು. ಬ್ರಿಟಿಷ್ ಆಳರಸರಿಗೆ ಭಾರತೀಯರನ್ನು ಸಂಪೂರ್ಣವಾಗಿ ತಮ್ಮ ನಿಯಂತ್ರಣ ದಲ್ಲಿಡಲು ಎಂದೂ ಸಾಧ್ಯವಾಗಲಿಲ್ಲ. ಅವರೊಡನೆ ನಮ್ಮ ಸಂಘರ್ಷವು ದೇಶವ್ಯಾಪಿಯಾಗಿ ವಿವಿಧ ರಂಗಗಳಲ್ಲಿ ಬಹುವಿಧವಾಗಿ ನಡೆಯಿತು. ಕೇವಲ ಅಹಿಂಸೆ ಹಾಗೂ ಸತ್ಯಾಗ್ರಹಗಳಿಗೆ ಹೆದರಿ ಬ್ರಿಟಿಷರು ಭಾರತ ಬಿಟ್ಟೋಡಿದರೆಂಬುದು ಕೇವಲ ಅರ್ಧ ಸತ್ಯ. ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಸದಾ ಅವರ ನಿದ್ದೆಗೆಡಿಸಿದ ಸಶಸ್ತ್ರ ಕ್ರಾಂತಿಯ ಪಾತ್ರವು ಅತೀ ಗಣನೀಯವಾದುದು ಹಾಗೂ ಅದರ ಇತಿಹಾಸವು ರೋಮಾಂಚನಕಾರಿಯಾದುದು.

ಭಾರತದ ಸ್ವಾತಂತ್ರ್ಯ ಹೋರಾಟವನ್ನು ದೇಶದ ಗಡಿಯಾಚೆಯೂ ನಡೆಸಬೇಕೆಂಬ ನವೀನ ಯೋಜನೆಯೊಂದು ಆಗ ಕೆಲವು ಕ್ರಾಂತಿಕಾರಿಗಳ ಮನದಲ್ಲಿ ಚಿಗುರೊಡೆಯಿತು. 19ನೇ ಶತಮಾನದ ಕೊನೆಯ ಭಾಗದಲ್ಲಿ ನೂರಾರು ಭಾರತೀಯರು, ಮುಖ್ಯವಾಗಿ ಪಂಜಾಬಿನ ಸಿಖ್ಖರು ಅಮೇರಿಕ, ಕೆನಡದ ಪಶ್ಚಿಮ ಭಾಗದಲ್ಲಿ ಹೋಗಿ ನೆಲೆಸಿದರು. ಅವರೆಲ್ಲರೂ ತಮ್ಮ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಶ್ರಮಿಸುತ್ತಿದ್ದರು. ಅವರನ್ನು ಸಂಘಟಿಸಿದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟಕ್ಕಾಗಿ ಅವರಿಂದ ಆರ್ಥಿಕವಾಗಿ ಹಾಗೂ ಶಸ್ತ್ರಾಸ್ತ್ರಗಳ ಪೂರೈಕೆ ಇತ್ಯಾದಿ ಪ್ರಯತ್ನದಲ್ಲೂ ಅಪಾರ ನೆರವು ಪಡೆಯಬಹುದಾದ ಸಂಭವವಿತ್ತು. ಅದರ ಪರಿಣಾಮವಾಗಿ ಯುರೋಪಿನಿಂದ ಅಮೇರಿಕಾಕ್ಕೆ ಬಂದು ನೆಲೆಸಿದ್ದ ಲಾಲ ಹರದಯಾಳ್ ಎಂಬ ಕ್ರಾಂತಿಕಾರಿ ಯುವಕನು 'ದಿ ಇಂಡಿಯಾ ಅಸೋಸಿಯೇಶನ್ನ ಆಫ್ ದಿ ಫಿಸಿಫಿಕ್ ಕೋಸ್ಟ್' ಎಂಬ ಸಂಸ್ಥೆಯನ್ನು ಆರಂಭಿಸಿದನು. ಈ ಸಂಸ್ಥೆಗಾಗಿ 'ಯುಗಾಂತರ' ಎಂಬ ಒಂದು ಮುದ್ರಣಾಲಯವೂ 'ಗದರ್' ಎಂಬ ಪತ್ರಿಕೆಯೂ ಆರಂಭವಾದವು. ಪಂಜಾಬಿ ಭಾಷೆಯಲ್ಲಿ 'ಗದರ್' ಎಂದರೆ 'ಬಂಡಾಯ'. ಈ ಪತ್ರಿಕೆಯ

ಧ್ಯೇಯೋದ್ದೇಶವೇ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಬಂಡಾಯವೇಳಲು ಜನರನ್ನು ಪ್ರೇರೇಪಿಸುವುದು. ಏಕಕಾಲದಲ್ಲಿ ಇಂಗ್ಲಿಷ್, ಹಿಂದಿ, ಉರ್ದು, ಗುರುಮುಖಿ, ಬಂಗಾಲಿ, ಮರಾಠಿ, ಗುಜರಾತಿ ಮುಂತಾದ ಹಲವಾರು ಭಾಷೆಗಳಲ್ಲಿ ಈ ಪತ್ರಿಕೆ ಪ್ರಕಟವಾಗಲಾರಂಭಿಸಿತು. ವಾರಪತ್ರಿಕೆಯಾಗಿ ಆರಂಭವಾದ ಈ ಪತ್ರಿಕೆಯು 'ಗದರ್ ಪಕ್ಷ' ಎಂಬ ಸಂಘಟನೆಯಾಗಿ ಬೆಳೆಯಿತು. ಪತ್ರಿಕೆಯ ಮೊದಲ ಪ್ರತಿ 1913ರ ನವೆಂಬರ್ 1 ರಂದು ಬೆಳಕು ಕಂಡಿತು. ಪತ್ರಿಕೆ ಬಲುಬೇಗ ಜಗತ್ತಿನ ಅನೇಕ ರಾಷ್ಟ್ರಗಳಿಗೆ ತಲುಪತೊಡಗಿತು. ಎಲ್ಲೆಲ್ಲಿ ಭಾರತೀಯರಿದ್ದಾರೋ ಅಲ್ಲೆಲ್ಲ 'ಗದರ್' ತಲುಪುವಷ್ಟರ ಮಟ್ಟಿಗೆ ಪ್ರಖ್ಯಾತವಾಯಿತು. ಅಮೇರಿಕಾ, ಕೆನಡ, ಷಾಂಘೈ, ಹಾಂಗ್‌ಕಾಂಗ್, ಮನಿಲಾ, ಪೆನಾಂಗ್, ಸಿಂಗಾಪುರ ಮೊದಲಾದ ಕಡೆ ಗದರ್ ಪತ್ರಿಕೆಯ ಪ್ರತಿಗಳು ರಾರಾಜಿಸಲಾರಂಭಿಸಿದುವು. ದಂಗೆಗೆ 'ಗದರ್' ಮುಕ್ತವಾಗಿಯೇ ಕರೆ ನೀಡುತಿತ್ತು. 'ಗದರ್' ಬಳಸುತ್ತಿದ್ದ ಭಾಷೆ ಉದ್ರೇಕಕಾರಿಯಾದುದು. ಮೊತ್ತಮೊದಲ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಸಂಗತಿ ಹೀಗಿತ್ತು. "ನಮ್ಮ ಹೆಸರು: ಬಂಡಾಯ. ನಮ್ಮ ಕಾರ್ಯ ಬಂಡಾಯ, ನಮ್ಮ ಕ್ಷೇತ್ರ ಭಾರತ. ಬಂಡಾಯ ಎಂದು? 'ಇನ್ನು ಕೆಲವೇ ವರ್ಷಗಳಲ್ಲಿ.' ಯಾಕೆ? 'ಬ್ರಿಟಿಷರ ಆಳ್ವಿಕೆಯಲ್ಲಿನ ದಮನ ದಬ್ಬಾಳಿಕೆಗಳು ಜನರು ಸಹಿಸಲಾರದಷ್ಟು ಮಿತಿ ಮೀರಿರುವುದರಿಂದ'. ಪ್ರತಿಯೊಂದು ಸಂಚಿಕೆಯು ಬ್ರಿಟಿಷ್ ಆಡಳಿತದ ವಿರುದ್ಧ ಬೆಂಕಿಯನ್ನೇ ಉಗುಳುತಿತ್ತು.

'ಗದರ್' ಪತ್ರಿಕೆಯ ಪ್ರತಿಯೊಂದು ಸಂಚಿಕೆಯಲ್ಲೂ ಕಾರ್ಯಾಚಾರಣೆಯ ವಿವಿಧ ಮಾರ್ಗಗಳನ್ನು ನೇರವಾಗಿಯೇ ತಿಳಿಸಲಾಗುತಿತ್ತು. 1. ಕ್ರಾಂತಿ ಸಾಹಿತ್ಯವನ್ನು ಧಾರಾಳವಾಗಿ ತಯಾರಿಸಿ ವಿತರಿಸಿರಿ. 2. ಹೋರಾಟದಲ್ಲಿ ಅದು ಸಶಸ್ತ್ರವಿರಲಿ, ನಿಶ್ಶಸ್ತ್ರವಿರಲಿ ಸರ್ವವಿಧದಲ್ಲೂ ಸಹಕರಿಸಿ. 3. ರೈಲು ಮಾರ್ಗಗಳನ್ನು ಕಿತ್ತು ಹಾಕಿ. 4. ಬ್ರಿಟಿಷರ ಬ್ಯಾಂಕಿನಲ್ಲಿರಿಸಿದ ನಿಮ್ಮ ಹಣವನ್ನೆಲ್ಲಾ ಹಿಂತೆಗೆದುಕೊಳ್ಳಿ. 4. ಫಿರಂಗಿಯವರು ಎಲ್ಲಿಯೇ ಇರಲಿ ಅವರನ್ನು ಅಲ್ಲಲ್ಲಿಯೇ ಮುಗಿಸಿಬಿಡುವಂತೆ ಭಾರತೀಯ ಸೇನೆಗೆ ಪ್ರೋತ್ಸಾಹ ನೀಡಿ. ಒಮ್ಮೆ 'ಗದರ್' ಪತ್ರಿಕೆಯಲ್ಲಿ ಒಂದು ಜಾಹಿರಾತು ಹೀಗೆ ಪ್ರಕಟವಾಯಿತು.

ಬೇಕಾಗಿದ್ದಾರೆ, ಭಾರತದಲ್ಲಿರುವ ಗದರ್‌ಗಾಗಿ ಉತ್ಸಾಹಿ ಮತ್ತು ಸಾಹಸಿ ಸೈನಿಕರು.

ವೇತನ	ಮೃತ್ಯು
ಪ್ರಶಸ್ತಿ	ಹೌತಾತ್ಮ್ಯ
ನಿವೃತ್ತಿ ವೇತನ	ಸ್ವಾತಂತ್ರ್ಯ
ಕಾರ್ಯಕ್ಷೇತ್ರ	ಭಾರತ

ಈ ಪತ್ರಿಕೆಯು ತನ್ನನ್ನು ತಾನು 'The enemy of the British Raj' – ಬ್ರಿಟಿಷ್ ರಾಜ್ಯದ ಶತ್ರುವೆಂದು ಹೇಳಿಕೊಂಡಿತು. ಬಹುಸಂಖ್ಯೆಯ ಪತ್ರಿಕೆಗಳು ಯುಗಾಂತರ ಆಶ್ರಮದಿಂದ ಅಂಚೆಯ ಮುಖಾಂತರ ಬರತೊಡಗಿತು. 1914 ಜನವರಿ 30ರಂದು 215 ಪ್ಯಾಕೆಟ್ ಪತ್ರಿಕೆಗಳು ಮುಂಬಯಿಗೆ ಬಂದಿದ್ದವು. ಈ ಪತ್ರಿಕೆಗಳು ಪಂಜಾಬಿನ ಪ್ರತಿಯೊಂದು ಮನೆ ಮನೆಗಳಲ್ಲಿ ಹಾಗೂ ಭಾರತದ ಸೈನಿಕ ಛಾವಣಿಗಳಲ್ಲಿ ಕ್ರಾಂತಿಯ ಸಂದೇಶವನ್ನು ಸಾರಿದವು. ನವೆಂಬರ್ 8, 1913ರಲ್ಲಿ ಪ್ರಕಟವಾದ ಪತ್ರಿಕೆಯ ಒಕ್ಕಣೆಯು ಹೀಗಿತ್ತು.

ಪ್ರಿಯ ಓದುಗರೆ ನಿಮ್ಮ ಕರ್ತವ್ಯವೇನು...? ನೀವು ನಮಗೆ ಹಾಗೂ ದೇಶದ ಸ್ವಾತಂತ್ರ್ಯಕ್ಕಾಗಿ ಕಾಯಾ, ವಾಚಾ, ಮನಸಾ ಸಹಾಯ ಮಾಡಬೇಕು. ಕೆಲವೇ ಕೆಲವು ಮಂದಿ ಈ ಕೆಲಸಕ್ಕೆ ಮುಂದೆ ಬಂದರೆ ಸಾಲದು. ಈ ಪವಿತ್ರ ಕೆಲಸಕ್ಕೆ ನಿಮ್ಮ ಶ್ರಮ ಹಾಗೂ ತ್ಯಾಗದ ಅಗತ್ಯವಿದೆ.

ನಿಮ್ಮ ಮೊದಲ ಕರ್ತವ್ಯ ನಮ್ಮ ಈ ಕೆಲಸಕ್ಕಾಗಿ ಸಾವಿರ ಸಾವಿರ ಇಂತಹ ಪ್ರತಿಗಳನ್ನು ಪ್ರಕಟಿಸಿ ವಿರೋಧಿಗಳಾದ ಬ್ರಿಟಿಷರನ್ನು ಭಯಪಡಿಸಿ ಅವರು ಈ ದೇಶದಿಂದ ಕಾಲ್ತೆಗೆಯುವಂತೆ

ಮಾಡಲು ನಿರಂತರ ಧನಸಹಾಯ ಮಾಡುವುದು. ನಿಮ್ಮ ಎರಡನೇ ಕರ್ತವ್ಯ ಈ ಪತ್ರಿಕೆಯನ್ನು ಓದಿ ಅದರ ಧ್ಯೇಯವನ್ನು ಅರ್ಥೈಸಿಕೊಳ್ಳುವುದು. ನಿಮ್ಮ ಮೂರನೇ ಕರ್ತವ್ಯ ಪ್ರತಿಯೊಬ್ಬರು ಈ ಪತ್ರಿಕೆಯನ್ನು ಓದುವಂತೆ ಮಾಡುವುದು. ನಿಮ್ಮ ನಾಲ್ಕನೇ ಕರ್ತವ್ಯ ಭಾರತದ ಮೂಲೆ ಮೂಲೆಗೆ ಈ ಪತ್ರಿಕೆ ತಲುಪುವಂತೆ ಮಾಡುವುದು. ನಿಮ್ಮ ಐದನೇ ಕರ್ತವ್ಯವು ಸ್ವಾತಂತ್ರ್ಯಕ್ಕಾಗಿ ಬಲಿದಾನಕ್ಕೆ ಸಿದ್ಧವಾಗುವುದು. ಕೇವಲ ಪತ್ರಿಕೆಯನ್ನು ಓದುವುದರಿಂದ ಸ್ವಾತಂತ್ರ್ಯ ಲಭಿಸುವುದಿಲ್ಲ, ಶತ್ರುಗಳ ವಿರುದ್ಧ ದಂಗೆಯೇಳುವಾಗ ನೀವು ಅವರೊಡನೆ ಹೋರಾಡಲು ಸಿದ್ಧರಾಗಬೇಕು.

ಜನ ಜಾಗೃತಿಯಲ್ಲಿ 'ಗದರ್' ಬಹುಮುಖ್ಯ ಪಾತ್ರವನ್ನು ವಹಿಸಿತು. ಪ್ರತಿ ಸಂಚಿಕೆಯಲ್ಲೂ ಪ್ರಕಟವಾಗುತ್ತಿದ್ದ 'ಅಂಗ್ರೇಜ್ ರಾಜ್ ಕಾ ಕಚ್ಚಾ ಚಿತ್ತಾ' (ಬ್ರಿಟಿಷ್ ಆಡಳಿತದ ನಗ್ನ ಸತ್ಯಗಳು) ಬ್ರಿಟಿಷರ ಕ್ರೌರ್ಯದ ಆಡಳಿತವನ್ನು ಎಳೆಎಳೆಯಾಗಿ ಬಿಡಿಸುತ್ತಿತ್ತು. ಪ್ರತಿಯೊಂದು ಸಂಚಿಕೆ ಕೂಡಾ ಬ್ರಿಟಿಷರ ದುರಾಡಳಿತದ ಚಿತ್ರಣವನ್ನು ಅನಾವರಣಗೊಳಿಸುತಿತ್ತು. ಭಾರತದ ಸಂಪತ್ತು ಸೋರಿಕೆಯಾಗಿ ಬ್ರಿಟನನ್ನು ಸೇರುತ್ತಿದ್ದುದು, ಬಾರತೀಯರ ವಾರ್ಷಿಕ ಆದಾಯದ ಕುಸಿತ, ಗರಿಷ್ಠ ಪ್ರಮಾಣದ ಭೂಕಂದಾಯ, ಬಾರತೀಯರ ಆರೋಗ್ಯಕ್ಕಾಗಿ ಅತ್ಯಂತ ಕಡಿಮೆ ಹಣವನ್ನು ಖರ್ಚು ಮಾಡುತ್ತಿದ್ದು ಸೈನ್ಯಕ್ಕೋಸ್ಕರ ಅಧಿಕ ಖರ್ಚನ್ನು ಮಾಡಲಾಗುತ್ತಿದ್ದುದನ್ನು ತೋರಿಸುತ್ತಿತ್ತು. ಭಾರತದ ಸಣ್ಣ ಕೈಗಾರಿಕೆ ಮತ್ತು ಉದ್ಯಮಗಳು ನಷ್ಟವನ್ನು ಅನುಭವಿಸಬೇಕಾಯಿತು. ರೈತರಿಂದ ಬಲಾತ್ಕಾರವಾಗಿ ವಸೂಲಿ ಮಾಡಿದ ತೆರಿಗೆ ಹಣವನ್ನು ಬ್ರಿಟನ್ ಇತರ ದೇಶಗಳ ವಿರುದ್ಧ ಯುದ್ಧ ಹೂಡಲು ಬಳಸುತಿತ್ತು. ಹೀಗೆ ಭಾರತದ ದುಸ್ಥಿತಿಗೆ ಪರಕೀಯರ ಆಡಳಿತ ಹೇಗೆ ಕಾರಣವಾಗಿದೆಂಬುದನ್ನು ಗದರ್ ಪತ್ರಿಕೆ ಭಾರತೀಯರಿಗೆ ಮನವರಿಕೆ ಮಾಡಿಕೊಟ್ಟಿತು.

ಇಂತಹ ಕ್ರಾಂತಿ ಸಂದೇಶವನ್ನೊಳಗೊಂಡ ಪತ್ರಿಕೆಯನ್ನು ಜನರು ಹುಚ್ಚೆದ್ದು ಓದ ಲಾರಂಭಿಸಿದರು. ಗದರ್ ಕ್ರಾಂತಿಕಾರಿಗಳು ಹರನಾಮಸಿಂಗ್ ತುಂದಿಲತ್ ಬರೆದ ದ್ವಿಪದಿಯನ್ನು ಹಾಡಿ ಕುಣಿಯುತ್ತಿದ್ದರು.

"ಶಾಸ್ತ್ರವೇನೂ ಒಳಿತು ಮಾಡದು, ಗುರುದ್ವಾರವನೂ ಮರೆತುಬಿಡಿ
ಸ್ವಾತಂತ್ರ್ಯದ ಕರೆಯು ಮೊಳಗಿದೆ, ಒರೆಯಿಂದ ಕತ್ತಿಯ ಸೆಳೆದುಬಿಡಿ"

ಮತವನ್ನು ಗದರ್ ವೈಯಕ್ತಿಕ ವಿಚಾರವೆಂದು ಭಾವಿಸಿತು. ಜಾತಿಯನ್ನು ಧಿಕ್ಕರಿಸಿತು. ಈ ಗದರಿಗಳ ದೃಷ್ಟಿಯಲ್ಲಿ ಧಾರ್ಮಿಕ ಶಿಕ್ಷಣ ತುರ್ತು ಅಗತ್ಯವಾಗಿರಲಿಲ್ಲ. ರಾಜಕೀಯ ಶಿಕ್ಷಣ ಎಲ್ಲರಿಗೂ ಅಗತ್ಯವೆಂದು ಅವರು ಭಾವಿಸಿದ್ದರು. ಗದರಿಗಳ ಘೋಷಣೆ ಒಂದೆ: "ದಾಸರ ಧರ್ಮ ರಾಷ್ಟ್ರಭಕ್ತಿ" ಅವರ ಸಭೆಗಳಲ್ಲಿ

"ಪಂಡಿತ–ಮುಲ್ಲಾ ನಮಗೆ ಬೇಡ,
ಬೇಡ ಜಪತಪ ಪ್ರಾರ್ಥನೆಯೂ
ಸ್ವಾತಂತ್ರ್ಯದ ಹಡಗು ದಡಮುಟ್ಟಲಿ ಬೇಗ
ಎಳೆಯಲಿ ಒರೆಯೊಳಗಿನ ಕತ್ತಿಯನೂ"

ಜುಲೈ 21, 1914ರಂದು ಪ್ರಕಟವಾದ 'ಗದರ್' ಪತ್ರಿಕೆಯು ಜರ್ಮನ್ ದೇಶವು ಇಂಗ್ಲೆಂಡಿನ ಶತ್ರುದೇಶ. ಆದುದರಿಂದ ಭಾರತ ಹಾಗೂ ಜರ್ಮನ್ ಇಬ್ಬರಿಗೂ ಇಂಗ್ಲೆಂಡ್ ಶತ್ರುವಾದ ಕಾರಣ ನಾವು ಜರ್ಮನ್ ಪರ ನಿಲ್ಲೋಣವೆಂಬ ಕರೆಯನ್ನು ನೀಡುತ್ತದೆ. ಭಾರತ ದಿಂದ ತೀರ್ಥಯಾತ್ರೆಗೆಂದು ಮದಿನಾಕ್ಕೆ ಹೋದ ಭಾರತೀಯ ಮುಸ್ಲೀಂ ಬಾಂಧವರಿಗೂ 'ಗದರ್' ಪ್ರತಿಯನ್ನು ಹಂಚುವ ವ್ಯವಸ್ಥೆಯನ್ನು ಮಾಡಲಾಯಿತು ಹಾಗೂ ಅವರು ಕೂಡಾ ಇಂಗ್ಲೇಂಡಿನ ವಿರುದ್ಧ 'ಜಿಹಾದ್' ಸಾರಬೇಕೆಂಬ ಸಂದೇಶವನ್ನು ನೀಡಲಾಯಿತು.

ಗದರ್ ಪತ್ರಿಕೆಯ ಮಾದರಿಗಳು

1914 ಮೇಯಲ್ಲಿ ಪ್ರಕಟವಾದ 'ಗದರ್' ಪತ್ರಿಕೆಯ ಜೊತೆಯಲ್ಲಿ ಗುರುಮುಖಿ ಭಾಷೆಯಲ್ಲಿ ಇನ್ನೊಂದು ಕರಪತ್ರವನ್ನು ಪ್ರಕಟಿಸಲಾಯಿತು. ಇದನ್ನು 'ಗದರ್–ದಿ–ಗಂಜ್' (ದಂಗೆಯ ಪ್ರತಿಧ್ವನಿ) ಎಂದು ಹೆಸರಿಸಲಾಯಿತು. ಯುಗಾಂತರ ಆಶ್ರಮ ಸ್ಯಾನ್‌ಫ್ರಾನ್ಸಿಸ್ಕೋದಿಂದ ಇಂತಹ 10,000 ಪ್ರತಿಗಳನ್ನು ಸರಣಿರೂಪದಲ್ಲಿ ಪ್ರಕಟಿಸಿತು. ಇದರಲ್ಲಿ ಕ್ರಾಂತಿಕಾರಿ ಸಾಹಿತ್ಯ ಮತ್ತು ಕವನವನ್ನು ಮರುಪ್ರಕಟಿಸಿದರು.

ಮೊದಲು ವಿದೇಶಗಳಲ್ಲಿರುವ ಭಾರತೀಯರನ್ನು ಸಂಘಟಿಸಬೇಕು, ಅನಂತರ ಅವರಲ್ಲಿ ತಾಯ್ನಾಡಿನ ಸ್ವಾತಂತ್ರ್ಯದ ಭಾವನೆಯನ್ನು ಕೆರಳಿಸಿ ಅವರೆಲ್ಲರೂ ಸ್ವದೇಶಕ್ಕೆ ಮರಳಿ ದಂಗೆಯೇಳುವಂತೆ ಮಾಡಬೇಕು ಎಂಬುದೇ ಗದರ್ ಪತ್ರಿಕೆಯ ಒಳಧ್ವನಿಯಾಗಿತ್ತು. ಈ ಪತ್ರಿಕೆಯ ಸಾವಿರಾರು ಪ್ರತಿಗಳನ್ನು ತಯಾರಿಸಿ ವಿವಿಧ ಸೈನಿಕ ಛಾವಣಿಗಳಿಗೆ ಅದನ್ನು ಗುಟ್ಟಾಗಿ ತಲುಪಿಸಲಾಗುತಿತ್ತು. ಒಮ್ಮೆಯಂತೂ ಅಂಡಮಾನ್ ಸೆರೆಮನೆಯಲ್ಲಿ ಸಾವರಕರರು ಎಣ್ಣೆಗಾಣ ತಿರುಗಿಸುವ ಚಿತ್ರವೂ ಪ್ರಕಟವಾಗಿತ್ತು. ಕಸ್ಟಮ್ಸ್ ಅಧಿಕಾರಿಗಳ ಕಣ್ಣು ತಪ್ಪಿಸಿ ಈ ಪತ್ರಿಕೆ ವಿವಿಧ ಸೈನಿಕ ಛಾವಣಿಗಳಿಗೆ ತಲುಪುತ್ತಿದ್ದುದೇ ಒಂದು ಆಶ್ಚರ್ಯದ ಸಂಗತಿ.

ಗದರ್‌ನ ಪ್ರಮುಖರಿಗೆಲ್ಲಾ ತಮ್ಮ ಕಾರ್ಯಾಚರಣೆ ಆರಂಭಿಸಲು ಶುಭ ಮುಹೂರ್ತವಾಗಿ ಕಾಣುತ್ತಿದ್ದುದು ಸದ್ಯ ಭವಿಷ್ಯದಲ್ಲಿ ಸಂಭವಿಸಲಿದ್ದ ಜಾಗತಿಕ ಯುದ್ಧವೇ. ಜರ್ಮನಿ ಹಾಗೂ ಇಂಗ್ಲೆಂಡ್ ಇವುಗಳ ನಡುವೆ ಯುದ್ಧವಾಗಲಿದ್ದುದು ಬಹುಮಟ್ಟಿಗೆ ನಿಶ್ಚಿತವೆನಿಸುತಿತ್ತು. ಅದು ಆರಂಭವಾದಲ್ಲಿ ಇಂಗ್ಲೆಂಡ್ ಸಹಜವಾಗಿ ಕಷ್ಟಕ್ಕೊಳಗಾಗುವುದರಿಂದ ಅದರ ಲಾಭ ಪಡೆದು ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಬಹುದು – ಎಂಬುದು ಅವರು ಹೂಡಿದ್ದ ಲೆಕ್ಕಾಚಾರ. 'ಗದರ್'ನ ಯೋಜನೆಗಳಿಗೆ ಜರ್ಮನ್ ಸರಕಾರದಿಂದ ಪೂರ್ಣ ಸಹಕಾರದ ಆಶ್ವಾಸನೆ ದೊರಕಿತ್ತು. ಆರ್ಥಿಕ ಸಹಾಯದ ಜೊತೆಯಲ್ಲಿ 'ಗದರ್'ನಿಂದ ಕಳುಹಿಸಲಾದ ವಿವಿಧ ವಸ್ತುಗಳನ್ನೂ, ಶಸ್ತ್ರಗಳನ್ನೂ ವಿವಿಧ ದೇಶಗಳಿಗೆ ಸುರಕ್ಷಿತವಾಗಿ ತಲುಪಿಸುವ ಹೊಣೆಯನ್ನು ಸಹ ಜರ್ಮನ್ ಅಧಿಕಾರಗಳು ವಹಿಸಿಕೊಂಡಿದ್ದರು. ಗದರ್‌ನ ಚಟುವಟಿಕೆಗಳ ಮೇಲೆ ವಿಶೇಷ ಲಕ್ಷ್ಯವಿರಿಸಿದ್ದ ಬ್ರಿಟಿಷ್ ಸರಕಾರ ಹರದಯಾಳ್‌ಸಿಂಗ್‌ನನ್ನು ಬಂಧಿಸುವಂತೆ ಅಮೇರಿಕ ದೇಶಕ್ಕೆ ಒತ್ತಡ ಹೇರಿತ್ತು. ಸೆರೆಯಿಂದ ಬಿಡುಗಡೆಯಾದ ತಕ್ಷಣ ಹರದಯಾಳ್ ಸ್ವಿಟ್ಜರ್‌ಲ್ಯಾಂಡಿಗೆ ಹೋದರು.

ದೇಶದಾದ್ಯಂತ ಏಕಕಾಲದಲ್ಲಿ ದಂಗೆ ಆರಂಬಿಸಬೇಕು ಎಂಬುದು ಗದರ್ ಕ್ರಾಂತಿಯ ಮುಖ್ಯ ಯೋಜನೆಯಾಗಿತ್ತು. ಈ ಇಡೀ ಯೋಜನೆಯ ಸೂತ್ರಧಾರರಾಗಿದ್ದವರು ರಾಸಬಿಹಾರಿ ಬಸು, ಸಚೀಂದ್ರನಾಥ ಸನ್ಯಾಲ, ಮತ್ತು ಜತೀನ್ ಮುಖರ್ಜಿ ಅವರು. ವಾರಣಾಸಿ ಇವರ ಚಟುವಟಿಕೆಯ ಕೇಂದ್ರವಾಗಿತ್ತು. ರಾಸಬಿಹಾರಿಯ ನಿರ್ದೇಶನದಂತೆ ವಿಷ್ಣು ಪಿಂಗಳೆ, ಸಚೀಂದ್ರನಾಥ, ವಿನಾಯಕ ಕಪಾಲೆ, ಇವರು ಉತ್ತರ ಭಾರತದ ವಿವಿಧ ಭಾಗಗಳಲ್ಲಿ ಪ್ರವಾಸ ನಡೆಸಿ ಕ್ರಾಂತಿಗಾಗಿ ಪೂರ್ವ ಸಿದ್ಧತೆ ನಡೆಸಿದರು. ಅಲ್ಲಲ್ಲಿ ಸೈನಿಕ ಛಾವಣಿಗಳಲ್ಲೂ ಸಂಪರ್ಕ ಬೆಳೆಸಿ ದಂಗೆಗಾಗಿ ಮಾನಸಿಕವಾಗಿ ಸಿದ್ಧಗೊಳಿಸಿದರು. ರೈತರು ಸಾಮಾನ್ಯ ಜನರು ಕೂಡ ಸಹಕರಿಸಲು ಸಿದ್ಧರಿದ್ದರು. ಅಗತ್ಯದ ಶಸ್ತ್ರಾಸ್ತ್ರಗಳು ಸಜ್ಜುಗೊಂಡವು. ಬಂಡಾಯದ ಧ್ವಜಗಳು ಗ್ರಾಮ ಗ್ರಾಮಗಳಿಗೆ ಹಂಚಲ್ಪಟ್ಟವು. 1915 ಫೆಬ್ರವಿ 21 ದಂಗೆ ಆರಂಭಿಸುವ ದಿನವೆಂದು ನಿಗದಿಯಾಯಿತು.

ಆದರೆ ಗದರ್‌ನ ಕೂಟದಲ್ಲಿ 'ಕೃಪಾಲಸಿಂಗ್' ಎಂಬ ದ್ರೋಹಿಯೊಬ್ಬ ಸೇರಿಕೊಂಡಿದ್ದನು. ರಾಸಬಿಹಾರಿಗೆ ಮೊದಲ ನೋಟದಲ್ಲಿಯೇ ಅವನು ನಂಬಿಕೆಗೆ ಅರ್ಹನಲ್ಲವೆಂದು ಅನ್ನಿಸಿದರೂ ಪಂಜಾಬಿನ ಕ್ರಾಂತಿಕಾರಿಗಳಿಗೆ ಅವನ ಮೇಲೆ ಪರಮ ವಿಶ್ವಾಸವಿತ್ತು. ರಾಸಬಿಹಾರಿ ಕಳುಹಿಸಿದ ತುರ್ತು ಸಂದೇಶದ ವಿವರವು ಇವನ ಮೂಲಕ ಪೋಲೀಸರಿಗೆ ತಲುಪಿತು.

ಮಾಹಿತಿ ತಿಳಿದ ಪೊಲೀಸ್ ಕಾರ್ಯಾಚರಣೆ ಚುರುಕುಗೊಂಡಿತು. ಕ್ರಾಂತಿಯ ಪ್ರಮುಖ ಕೇಂದ್ರಗಳಲ್ಲಿ ಪೊಲೀಸ್ ಬಂದೋಬಸ್ತ್ ಹೆಚ್ಚಾಯಿತು. ಸೇನಾಭಾವಣಿಗಳ ಜವಾಬ್ದಾರಿಯನ್ನು ಇಂಗ್ಲಿಷ್ ಸಿಪಾಯಿಗಳಿಗೆ ಒಪ್ಪಿಸಲಾಯಿತು. ಪರಿಣಾಮವಾಗಿ ಕ್ರಾಂತಿಗಾಗಿ ತಯಾರಾಗಿದ್ದ ಭಾರತೀಯ ಸಿಪಾಯಿಗಳಲ್ಲೂ ಧೈರ್ಯ ಕುಸಿಯಿತು. ಸೈನ್ಯ ನಿಷ್ಕ್ರೀಯವಾದುದನ್ನು ಕಂಡು ಇನ್ನಿತರ ನಾಗರಿಕರು ಹಾಗೂ ಗ್ರಾಮೀಣ ಜನರಲ್ಲೂ ಭೀತಿ ಆವರಿಸಿತು. ಒಂದು ದುರ್ಬಲ ಮನಸ್ಸಿನ ದೇಶದ್ರೋಹಿಯಿಂದಾಗಿ ಕಾಳ್ಗಿಚ್ಚಿನಂತೆ ಹರಡಬೇಕಾದ ಕ್ರಾಂತಿಯ ಕಿಡಿ ನಂದುತ್ತಾ ಬಂತು.

ಇದೇ ಸಮಯಕ್ಕೆ ಗದರ್‌ನ ಅಮೇರಿಕದ ಘಟಕದೊಳಗೆ ನುಸುಳಿಕೊಂಡಿದ್ದ ಇನ್ನೋರ್ವ ದ್ರೋಹಿ ನವಾಬ್‌ಖಾಸ್ ಎಂಬುವವನು ಇನ್ನೂ ಹೆಚ್ಚಿನ ಮಾಹಿತಿಯೊಂದಿಗೆ ಭಾರತ ತಲುಪಿದನು. ಅವನಿಂದ ಕ್ರಾಂತಿಯ ನೀಲನಕ್ಷೆ ಸರಕಾರಕ್ಕೆ ದೊರೆಯಿತು. ಅದರಿಂದಾಗಿ ದೇಶದಾದ್ಯಂತ ಬಂಧನಗಳ ಸರಮಾಲೆಯೇ ಆರಂಭವಾಯಿತು. ಭಾಯೀ ಪರಮಾನಂದ, ವಿಷ್ಣು ಪಿಂಗಳೆಯಂತಹ ನೂರಾರು ಮಂದಿ ಪ್ರಮುಖ ಕ್ರಾಂತಿಕಾರಿಗಳು ಪೊಲೀಸರ ಬಲೆಗೆ ಬಿದ್ದರು. ಈ ಕ್ರಾಂತಿಗೆ ಸಂಬಂಧಿಸಿದ ಬಂಧಿತರನ್ನು ಹಲವು ತಂಡಗಳಲ್ಲಿ ಪೊಲೀಸರು ವಿಚಾರಣೆಗೆ ಒಳಪಡಿಸಿದರು. ಇವರಲ್ಲಿ ಒಟ್ಟು 24 ಮಂದಿಗೆ ಗಲ್ಲಿನ ಶಿಕ್ಷೆ ವಿಧಿಸಲಾಗಿದ್ದರೂ, ವೈಸರಾಯ್ ಲಾರ್ಡ್ ಹಾರ್ಡಿಂಗ್ ತನ್ನ ವಿಶೇಷಾಧಿಕಾರ ಬಳಸಿ ಅವರಲ್ಲಿ 17 ಮಂದಿಯ ಶಿಕ್ಷೆಯನ್ನು ಜೀವಾವಧಿ ಸೆರೆವಾಸವಾಗಿ ಬದಲಿಸಿದನು. ಅವರಲ್ಲಿ ಭಾಯೀ ಪರಮಾನಂದರು ಒಬ್ಬರು. ಗಲ್ಲಿನ ಶಿಕ್ಷೆಗೆ ಒಳಗಾಗಿದ್ದ 7 ಮಂದಿಯಲ್ಲಿ ವಿಷ್ಣು ಪಿಂಗಳೆ ಕೂಡಾ ಒಬ್ಬನಾಗಿದ್ದ.

'ಗದರ್' ಕ್ರಾಂತಿ ಸಂಘಟನೆಯ ಪ್ರಮುಖ ರುವಾರಿಯಾದ ರಾಸಬಿಹಾರಿಗಾಗಿ ಭಾರೀ ಶೋಧ ನಡೆಯಿತು. ಸರಕಾರ ಆತನ ಸುಳಿವು ತಿಳಿಸಿದವರಿಗೆ ರೂ.10,000 ಬಹುಮಾನವನ್ನು ಘೋಷಿಸಿತು. 'ಗದರ್'ನ ಪ್ರಮಖರೆಲ್ಲ ಪರಸ್ಪರ ಯೋಚಿಸಿ ಆತನ ಸುರಕ್ಷತೆಯ ದೃಷ್ಟಿಯಿಂದ ದೇಶಬಿಟ್ಟು ಹೋಗುವಂತೆ ಸೂಚಿಸಿದರು. ತಾತ್ಕಾಲಿಕವಾಗಿ ಕ್ರಾಂತಿ ವಿಫಲವಾದರೂ ಹೋರಾಟವನ್ನು ಇನ್ನೂ ಮುಂದುವರಿಸುವ ಸಲುವಾಗಿ ಆತ ವಿದೇಶದಲ್ಲಿರುವುದೇ ಉಚಿತ ಎಂಬುದು ಎಲ್ಲರ ಅಭಿಮತವಾಯಿತು. ಆದುದರಿಂದ ಆತ ಜಪಾನಿಗೆ ಹೋಗುವ ಹಡಗನ್ನೇರಿದನು.

ರಾಸಬಿಹಾರಿ ವಿದೇಶಕ್ಕೆ ಹೊರಟ ಸ್ವಲ್ಪ ದಿನಗಳಲ್ಲಿ ದಾಮೋದರ ಸ್ವರೂಪ್ ಎಂಬವನು ಎಸಗಿದ ದ್ರೋಹದಿಂದಾಗಿ ಸಚೀಂದ್ರನಾತ ಸನ್ಯಾಲ ಪೊಲೀಸರ ಬಲೆಗೆ ಬಿದ್ದು ಅಂಡಮಾನಿನಲ್ಲಿ ಕಾರಾಗೃಹ ಶಿಕ್ಷೆಗೆ ಒಳಗಾಗಬೇಕಾಯಿತು. ಈ ಕ್ರಾಂತಿಗೆ ಪೂರ್ವದಲ್ಲಿ ಅಸ್ಸಾಂ ಮತ್ತು ಬಂಗಾಲದಲ್ಲಿ ಸಶಸ್ತ್ರ ಹೋರಾಟದ ಸೂತ್ರಧಾರಿಯಾಗಿದ್ದ ಯತೀಂದ್ರನಾಥ ಮುಖರ್ಜಿ ಕೂಡಾ ಪೊಲೀಸರೊಂದಿಗೆ ಮುಖಾಮುಖಿಯಲ್ಲಿ ಹೋರಾಡುತ್ತಾ ತನ್ನ ಪ್ರಾಣವನ್ನು ಸಮರ್ಪಿಸಿದರು.

ಈ ರೀತಿಯಾಗಿ ದೇಶವ್ಯಾಪಿಯಾಗಿ ಹರಡಲು ಸಕಲ ಸಿದ್ಧತೆಯನ್ನು ಮಾಡಿಕೊಂಡು ಸಂಘಟಿತವಾಗಿದ್ದ ಕ್ರಾಂತಿಯೊಂದು ದೇಶದ್ರೋಹಿಗಳಿಂದಾಗಿ ನೆಲಕಚ್ಚಿತು. ಆದರೆ ಈ 'ಗದರ್' ಕ್ರಾಂತಿಯು ಆ ನಂತರ 1947ರವರೆಗೂ ನಡೆದ ಹಲವಾರು ಸಶಸ್ತ್ರ ಕ್ರಾಂತಿಗಳಿಗೆ ಪ್ರೇರಣೆಯಾಯಿತು.

ಪರಾಮರ್ಶನ ಗ್ರಂಥಗಳು

1. ನಾನಾದಿಂದ ನೇತಾಜಿವರೆಗೆ – ಸ್ವಾತಂತ್ರ್ಯ ಸಂಗ್ರಾಮ 1857–1947
   ಚಂದ್ರಶೇಖರ ಭಂಡಾರಿ, ಸಾಹಿತ್ಯಸಿಂಧು ಪ್ರಕಾಶನ, ಬೆಂಗಳೂರು
2. ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು
   ಸಂ. ಎಸ್ ಆರ್ ರಾಮಸ್ವಾಮಿ, ರಾಷ್ಟ್ರೋತ್ಥಾನ ಸಾಹಿತ್ಯ, ಕೆಂಪೇಗೌಡ ನಗರ, ಬೆಂಗಳೂರು

3. ಗದರ್ ಚಳವಳಿ
ಚಕ್ರವರ್ತಿ ಸೂಲಿಬೆಲೆ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
4. ಜಲಿಯನ್‌ವಾಲಾಬಾಗ್
ಬಿ.ಪಿ. ಪ್ರೇಮ್‌ಕುಮಾರ್, ಮುಸ್ಸಂಜೆಯ ಮಾರಣಹೋಮ, ಸಪ್ನ ಬುಕ್ ಹೌಸ್, ಬೆಂಗಳೂರು.
5. ಜಲಿಯನ್‌ವಾಲಾ ಬಾಗ್
ಶಿವಪ್ರಸಾದ್ ಟಿ.ಆರ್, ಚಿಂತನಗಂಗ ಪ್ರಕಾಶನ, ದಾವಣಗೆರೆ
6. INDIA'S STRUGGLE FOR INDEPENDENCE
BIPIN CHANDRA, MRIDULA MUKHERJEE, ADITYA MUKHERJEE, SUCHETA MAHAJAN, K.N. PANIKKER, PENGUIN BOOKS

ಕಾಲವೆಂಬ
ಮರಳಲಿ
ಹೆಜ್ಜೆ ಗುರುತು ಮೂಡಲಿ
ಹಿಂದೆ ಬರುವ
ಸೋದರನಿಗೆ
ಅದು ದಾರಿದೀಪವಾಗಲಿ.

ದ್ರಾವಿಡಭಾಷಾ ಜ್ಞಾತಿಪದಕೋಶ
ಕನ್ನಡಿಗರ ಕೈಯಲ್ಲೊಂದು ವಿಶಿಷ್ಟ ಪದಾರ್ಥ ಕೋಶ

ಡಾ. ಬಿ. ವಿ. ಮಹೀದಾಸ
ನಿವೃತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ

ಯಾವುದೇ ಭಾಷೆಯಲ್ಲಿ ಒಂದು ಪದಕ್ಕೆ ಒಂದೇ ಅರ್ಥವಲ್ಲ. ಪ್ರಸಂಗವಶಾತ್ ಹಲವು ಅರ್ಥಗಳು. ಅದೇ ಪದ ಸೋದರ ಭಾಷೆಯಲ್ಲೂ ಇದ್ದರೆ ಅಲ್ಲಿ ಅದರ ಅರ್ಥ ಬೇರೆಯೇ ಆಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಯಾವುದೇ ಪದವನ್ನು ನೋಡಬಹುದು. ಕುಡಿ ಎಂಬ ಕನ್ನಡದ್ದೇ ಪದಕ್ಕೆ ನಿಮಗೆ ಒಂದು ಅರ್ಥ ಗೊತ್ತಿರಬಹುದು. ಅದಕ್ಕಿರುವ ಬೇರೆಬೇರೆ ಅರ್ಥಗಳು ನಿಮಗೆ ಗೊತ್ತೆ? ಹಾಗೆ ಗೊತ್ತಿದ್ದರೂ ತಮಿಳಿನಲ್ಲಿ, ಮಲಯಾಳಂನಲ್ಲಿ, ತೆಲುಗಿನಲ್ಲಿ, ಕೊಡವರ ಭಾಷೆಯಲ್ಲಿ, ತುಳುವಿನಲ್ಲಿ ಇತ್ಯಾದಿ ದ್ರಾವಿಡ ನುಡಿಗಳಲ್ಲಿ ಏನೇನು ಅರ್ಥಗಳಿವೆ ಎಂಬುದನ್ನು ಬಲ್ಲಿರಾ? ಆ ಪದದಿಂದ ಬರುವ ಹಲವು ಪದಗಳನ್ನು ಪತ್ತೆಹಚ್ಚಬಲ್ಲಿರಾ?

ಕುಡಿ ಎಂಬುದಕ್ಕೆ ಪಾನಮಾಡು, ತುದಿ, ಚಿಗುರು,ವಂಶದ ಮಗು ಇತ್ಯಾದಿ ಅರ್ಥಗಳು ಕನ್ನಡದಲ್ಲಿರಬಹುದು.ತಮಿಳು ಮಲಯಾಳಂಗಳಲ್ಲಿ ಕುಡಿ ಎಂದರೆ ಪಾನ ಮಾಡು ಎಂದು ಮಾತ್ರ ಅರ್ಥ. ಮಲಯಾಳಂ, ತುಳು, ತೆಲುಗುಗಳಲ್ಲಿ ತುದಿ ಎಂಬರ್ಥ ಬರಬೇಕಾದರೆ ಕೊಡಿ ಎನ್ನಬೇಕು; ತಮಿಳಿನಲ್ಲಿ ಕೋಡು ಎನ್ನಬೇಕು. ಕುಡ್ಚು, ಕುಡುಚು ಎಂದರೆ ತುಳು ಮತ್ತು ತೆಲುಗುಗಳಲ್ಲಿ ಪಾನಮಾಡು ಎಂದರ್ಥ. ಕನ್ನಡದಲ್ಲಿ ಕುಡ್ತೆ ಎಂಬ ಹಾಲಿನ ಅಳತೆಯ ಪ್ರಮಾಣ ಒಂದುಸಲ ಕುಡಿಯುವಷ್ಟು ಎಂಬರ್ಥದಲ್ಲಿ ಇದೇ ಪದದಿಂದ ಬಂದದ್ದು– ಇಂತಹ ಎಲ್ಲ ವಿವರಗಳು ಒಂದೇ ಕಡೆಗೆ ಸಿಕ್ಕಿದರೆ ಎಷ್ಟು ಚೆನ್ನ ಎಂದೆನಿಸುವುದಿಲ್ಲವೆ? ನಿಮಗಾಗಿ ಬಂದಿದೆ ಹೊಸದೊಂದು ಉದ್ಗ್ರಂಥ. ಇದರ ಹೆಸರೇ ದ್ರಾವಿಡ ಭಾಷಾ ಜ್ಞಾತಿಪದಕೋಶ. ಇದೊಂದು ವಿಶಿಷ್ಟ ತರಹದ ಕನ್ನಡ–ಕನ್ನಡ ನಿಘಂಟು.

ಈ ಗ್ರಂಥವು ಹಂಪನಾ ಅವರ ಪ್ರಧಾನ ಸಂಪಾದಕತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಾಹಸದಿಂದ ಹೊರತಂದ ಕೃತಿ. ಗ್ರಂಥದಲ್ಲಿ XX+ 685 ಪುಟಗಳಿವೆ. ಇದರ ಸಂಪಾದಕವರ್ಗ ಇಲ್ಲಿ ಒಟ್ಟು 3808 ಕನ್ನಡ ಪದಗಳನ್ನು ಮುಖ್ಯಪದಗಳನ್ನಾಗಿಟ್ಟುಕೊಂಡು, ಅವುಗಳನ್ನು ಅಕಾರಾದಿಯಾಗಿ ಜೋಡಿಸಿ ಅರ್ಥಗಳನ್ನು ನೀಡಿದ್ದಾರೆ. ಎಲ್ಲ ಪ್ರಧಾನ ದ್ರಾವಿಡಭಾಷೆಗಳಲ್ಲಿ ಅದಕ್ಕಿರುವ ಸಮಾನ ಪದಗಳನ್ನೂ ಉಲ್ಲೇಖಿಸಿದ್ದಾರೆ. ಇದರಿಂದ ಕನ್ನಡಪದವೊಂದಕ್ಕೆ ತಮಿಳು, ಮಲಯಾಳಂ, ಕೊಡವ, ತುಳು ಮತ್ತು ತೆಲುಗು ಭಾಷೆಗಳಲ್ಲಿರುವ ಸಂವಾದಿ ಪದಗಳನ್ನು ತಿಳಿಯಲು ಅನುಕೂಲವಾಗಿದೆ. ಹವ್ಯಕ ಕನ್ನಡ, ಗೌಡ ಕನ್ನಡ, ಜೇನುಕುರುಬ ಕನ್ನಡ ಇತ್ಯಾದಿ ಉಪಭಾಷೆಗಳಲ್ಲಿ ಯಾವರೂಪ ಮತ್ತು ಅರ್ಥದಲ್ಲಿ ಈ ಪದ ಬರುತ್ತದೆ ಎಂಬುದನ್ನೂ ವಿವರಿಸಿದ್ದಾರೆ.

ಹಾಗೆ ನೋಡಿದರೆ ಇದು ಕನ್ನಡದ ಮೊದಲ ಜ್ಞಾತಿಪದಕೋಶವಲ್ಲ. ಟಿ ಬರೋ ಮತ್ತು ಎಮ್ ಬಿ ಎಮಿನೋ ಎಂಬ ಪಾಶ್ಚಾತ್ಯ ವಿದ್ವಾಂಸರು 1961 ರಲ್ಲಿ ಇಂತಹ ಒಂದು ನಿಘಂಟನ್ನು ರಚಿಸಿದರು. 1984ರಲ್ಲಿ ಅದರ ಪರಿಷ್ಕೃತ ಆವೃತ್ತಿ ಪ್ರಕಟವಾಯಿತು. 1998ರಲ್ಲಿ ಪುನರ್ಮುದ್ರಣ ವಾಗಿದೆ. ಈಗ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ದ್ರಾವಿಡಭಾಷಾ ಜ್ಞಾತಿಪದಕೋಶ ನಿಘಂಟು

ಕನ್ನಡದ ಸಂದರ್ಭಕ್ಕೆ ಸರಿಹೊಂದುವಂತೆ ರಚಿತವಾದುದು. ಹಲವು ರೀತಿಗಳಲ್ಲಿ ಇದು ಬರೋ–ಎಮಿನೋ ನಿಘಂಟನ್ನು ಮುಂದುವರೆಸಿದೆ. ಅಲ್ಲಿ ಕನ್ನಡದ ಉಪಭಾಷೆಗಳಲ್ಲಿ ಹವ್ಯಕ ಮಾತ್ರ ಹೆಚ್ಚಾಗಿ ಉಲ್ಲೇಖಿಗೊಂಡಿದ್ದರೆ ಈಗಿನ ದ್ರಾವಿಡಭಾಷಾ ಜ್ಞಾತಿಪದಕೋಶದಲ್ಲಿ ಹಾಲಕ್ಕಿ ಕನ್ನಡ, ಜೇನುಕುರುಬ ಕನ್ನಡ, ನಂಜನಗೂಡ ಕನ್ನಡ, ಬಾರ್ಕೂರು ಕನ್ನಡ ಇತ್ಯಾದಿಯಾಗಿ ಒಂಬತ್ತು ಉಪಭಾಷೆಗಳ ಪದಗಳನ್ನು ಉಲ್ಲೇಖಿಸಿದ್ದಾರೆ. ಕನ್ನಡಿಗರಿಗಾಗಿ ರಚಿಸಿರುವುದರಿಂದ ಇದರಲ್ಲಿ ಎಲ್ಲವೂ ಕನ್ನಡ ಲಿಪಿಗಳಲ್ಲಿ ಮಾತ್ರವಿದೆ. ಕನ್ನಡ ಪದಗಳನ್ನು ಮಾತ್ರ ಪ್ರಧಾನ ಪದಗಳನ್ನಾಗಿ ಉಲ್ಲೇಖಿಸಲಾಗಿದೆ. ಬರೋ – ಎಮಿನೋ ನಿಘಂಟಿನಂತೆ ಎಲ್ಲ ಪದಗಳನ್ನೂ ಲಿಪ್ಯಂತರಿತ (ಇಂಗ್ಲಿಷ್ ಅಕ್ಷರಗಳನ್ನು ಬಳಸಿ) ವಿಧಾನದಲ್ಲಿ ಮಾತ್ರ ಬರೆದಿಲ್ಲ. ಅಲ್ಲಿ ಪ್ರಾಚೀನತೆಯನ್ನಾಧರಿಸಿ ಇತರ ದ್ರಾವಿಡ ಭಾಷಾ ಪದಗಳೂ ಉಲ್ಲೇಖಪದಗಳಾಗಿವೆ; ಹಾಗೆ ನೋಡಿದರೆ ತಮಿಳು ಪದಗಳೇ ಉಲ್ಲೇಖ ಪದಗಳಾಗಿರುವುದು ಹೆಚ್ಚು. ಉದಾ. ಕುದಿ ಎಂಬ ಕನ್ನಡ ಪದವು ಬರೋ–ಎಮಿನೋ ನಿಘಂಟಿನಲ್ಲಿ ಸ್ವತಂತ್ರ ನಮೂದಲ್ಲ. ತಮಿಳಿನ ಕೊತ ಪದದಡಿ ಬಂದಿರುವ ಪದ. ಇವೆಲ್ಲವೂ ಇಲ್ಲಿ ಸುಧಾರಣೆ ಕಂಡಿವೆ. ಕನ್ನಡ ಪದಗಳೇ ಉಲ್ಲೇಖ ಪದಗಳು. ಕನ್ನಡ ಅಕ್ಷರಗಳಲ್ಲೇ ಮುದ್ರಣ. ಮೇಲ್ನೋಟಕ್ಕೆ ಈ ಹೊಸ ನಿಘಂಟಿನಲ್ಲಿ 3808ಪದಗಳು ಮಾತ್ರವಿರುವಂತೆ ಕಾಣುತ್ತದೆ. ಆದರೆ ನಿಘಂಟಿನಲ್ಲಿ ಬಂದಿರುವ ಎಲ್ಲ ಪದಗಳ ಅಕಾರಾದಿ ಸೂಚಿಯೊಂದನ್ನು ಕೊನೆಯಲ್ಲಿ ರಚಿಸಿಕೊಟ್ಟಿದ್ದು ಅದರಲ್ಲಿ ಎಣಿಸಿದಾಗ ನಿಘಂಟಿನಲ್ಲಿ ಪದಗಳ ಸಂಖ್ಯೆ 11632 ಆಗಿರುವುದು ಗೊತ್ತಾಗುತ್ತದೆ. ಈ ಸೂಚಿಯನ್ನು ಬಳಸಿಕೊಂಡು ಯಾವುದೇ ಪದವನ್ನು ಮುಖ್ಯನಿಘಂಟಿನಲ್ಲಿ ಹುಡುಕಬಹುದು. ಅರ್ಥ ಮತ್ತು ವಿವರಗಳನ್ನು ತಿಳಿಯಬಹುದು. ಹೀಗೆ ಇದು ಬರೋ–ಎಮಿನೋ ನಿಘಂಟಿನ ಮುಂದುವರಿಕೆಯಾಗಿದ್ದು ಕನ್ನಡ ಲಿಪಿಗಳ ಬಳಕೆ, ಕನ್ನಡದ ಉಲ್ಲೇಖ ಪದಗಳಿರುವುದು, ಪ್ರಾಚೀನ ನಿಘಂಟುಗಳಿಂದ ಪ್ರಮಾಣೀಕೃತ ನಮೂದುಗಳನ್ನು ಒಳಗೊಂಡಿರುವುದು, ಕನ್ನಡದ ಒಂಬತ್ತು ಉಪಭಾಷೆಗಳಿಂದ ಉಲ್ಲೇಖಿಗಳನ್ನು ಆಯ್ದಿರುವುದು ಇಂತಹವು ಹೊಸ ನಿಘಂಟಿನ ವೈಶಿಷ್ಟ್ಯಗಳಾಗಿವೆ. ಆದಾಗ್ಯೂ ಉಲ್ಲೇಖಿತ ದ್ರಾವಿಡ ಭಾಷೆಗಳ ಸಂಖ್ಯೆಯನ್ನು ಗಮನಿಸಿದರೆ ಇದು ಸೀಮಿತವಾಗಿದೆ. ಮಾತಿನಲ್ಲಿ ಮಾತ್ರ ಅಸ್ತಿತ್ವದಲ್ಲಿರುವ ದ್ರಾವಿಡ ನುಡಿಗಳೂ ಸೇರಿದಂತೆ ಒಟ್ಟು ಹತ್ತೊಂಬತ್ತು ಭಾಷೆಗಳನ್ನು ಹಿಂದಿನ ನಿಘಂಟಿನಲ್ಲಿ ಉಲ್ಲೇಖಿಸಿದ್ದರೆ ಈ ನಿಘಂಟಿನಲ್ಲಿ ದಕ್ಷಿಣದ ಆರು ಪ್ರಮುಖ ಭಾಷೆಗಳಿಗೆ ಸಂಬಂಧಿಸಿದಂತೆ ಬರೋ ಅವರ ಜ್ಞಾತಿಪದಕೋಶ(1984)ದಲ್ಲಿಯ ಉಲ್ಲೇಖ ಪದಗಳನ್ನು ಪರಿಷ್ಕರಿಸುವುದು ಹಾಗೂ ಕನ್ನಡವನ್ನಾಧರಿಸಿದ ಹೆಚ್ಚಿನ ಉಲ್ಲೇಖ ಪದಗಳನ್ನು ಸೇರ್ಪಡೆಗೊಳಿಸುವುದು ಇಲ್ಲಿರುವ ಆಶಯ.

ಈ ನಿಘಂಟಿನಲ್ಲಿ ಪ್ರತಿಪದಕ್ಕೆ ಕನ್ನಡದಲ್ಲಿ ವ್ಯಾಖ್ಯೆ ಇದೆ. ಇತರ ದ್ರಾವಿಡ ಭಾಷೆಗಳನ್ನು ಉಲ್ಲೇಖಿಸಿ ಅವುಗಳಲ್ಲಿರುವ ಅರ್ಥವನ್ನು ನೀಡಿದೆ. ಉದಾ. ಕುದಿ ಎಂಬ ಉಲ್ಲೇಖ ಪದದಡಿ ತುಳುವಿನಲ್ಲಿ ಇದು ಕೊದಿ ಎಂದಿರುವುದನ್ನು ಉಲ್ಲೇಖಿಸಿ ಕೊದ್ದೇಲು ಎಂಬ ಪದವನ್ನೂ ನಮೂದಿಸಿದೆ. ಇದರಿಂದ "ಕುದ್ದಿದ್ದು ಕೊದ್ದೇಲು" ಎಂಬಂತೆ ನಿಷ್ಪತ್ತಿ ಹೊಳೆಯುತ್ತದೆ. ಈ ಕೊದ್ದೇಲು ಎಂಬ ಪದವನ್ನು ಹೀಗೆ ಸೇರಿಸಿರುವುದು ಹಳೆಯ ನಿಘಂಟು ಹೇಗೆ ಪರಿಷ್ಕರಣೆಗೊಂಡಿದೆ ಎಂಬುದಕ್ಕೆ ಒಂದು ನಿದರ್ಶನ. ಕುರ್ಕ, ತರಗು, ನೆತ್ತಿ, ಬರಣಿ – ಹೀಗೆ ಹಿಂದಿನ ನಿಘಂಟಿನಲ್ಲಿಲ್ಲದ ಹಲವು ಪದಗಳು ಇಲ್ಲಿ ಉಲ್ಲೇಖಿಗೊಂಡಿವೆ. ದ್ರಾವಿಡ ಭಾಷೆಗಳಲ್ಲಿ ಜ್ಞಾತಿಗಳಿರುವಂತಹ ಸಂಸ್ಕೃತ, ಹಿಂದಿ, ಮರಾಠಿ ಪದಗಳನ್ನು ನೀಡಿದ್ದಾರೆ. ಉದಾ. ವಡೆ ಎಂಬುದು ಸಂಸ್ಕೃತ ಮೂಲದ್ದು. ಡೊಕ್ಕರ ಎಂಬ ಪದ ಸಂಸ್ಕೃತದ "ದೋಃಕರಮ್' ಮತ್ತು ಹಿಂದಿಯ 'ಠೋಕರ' ಎಂಬ ಪದಗಳೊಡನೆ ಸಂಬಂಧ ಹೊಂದಿರಬಹುದೆಂದು ಸೂಚಿಸಿದೆ.

ಡಾಳ ಎಂಬುದು ಮರಾಠಿಯ 'ಢಾಳ' ಎಂಬ ಮೂಲದ್ದೆಂದು ತಿಳಿಸಿದೆ. ಇಂತಹ ಇನ್ನೂ ಎಷ್ಟೋ ವೈಶಿಷ್ಟ್ಯಗಳು ಈ ಹೊತ್ತಗೆಯಲ್ಲಿವೆ. ಪೂರ್ಣಾನಂದ ಪಡೆಯಲು ಕೃತಿಯ ಪುಟಗಳ ಮೇಲೆ ನೀವು ಕಣ್ಣಾಡಿಸಲೇ ಬೇಕು.

ಇದನ್ನೆಲ್ಲ ಆಗುಮಾಡಿದವರು ಕೆ.ಪಿ. ಭಟ್ಟ, ಎ.ವಿ. ನಾವಡ, ಪಿ. ಕೇಕುಣ್ಣಾಯ, ಜಿ.ಎಸ್. ಮೋಹನ, ಎಮ್. ಕುಂಟಾರ, ಸೆಲ್ವಕುಮಾರಿ ಮತ್ತು ಎಮ್.ಟಿ. ರತಿ ಎಂಬ ಕನ್ನಡನಾಡಿನ ಜನಜನಿತ ವಿದ್ವಾಂಸರು. ಇವರು ಹಂಪನಾ ಅವರ ನೇತೃತ್ವದಲ್ಲಿ ಪಟ್ಟಿರುವ ಶ್ರಮದಿಂದ ಸಾಮಾನ್ಯ ಓದುಗನ ಕುತೂಹಲ ತಣಿಯುತ್ತದೆ. ಸಂಶೋಧಕರಿಗೆ ಉಪಯುಕ್ತ ಸಂಪನ್ಮೂಲ ದೊರೆಯುತ್ತಿದೆ. ಇವಕ್ಕೆಲ್ಲ ಪುಸ್ತಕ ಜನರ ಕೈಸೇರಬೇಕು. ಸಾಹಿತ್ಯ ಪರಿಷತ್ತಿನ ಶ್ರೀ ಜೆ.ಎನ್. ಶ್ಯಾಮರಾಯರು ಈ ವಿದ್ವತ್ಕಾರ್ಯವನ್ನು ಜನರಿಗೆ ತಲುಪಿಸುವ ಜವಾಬ್ದಾರಿ ಹೊತ್ತವರು. ಇವರೆಲ್ಲರ ಪ್ರಯತ್ನಗಳಿಗೆ ಜಯವಾಗಲಿ! ಈ ಕೃತಿಯನ್ನು ಅಭ್ಯಾಸ ಮಾಡಲೆಂದಾದರೂ ಇತರ ಭಾಷಿಗರು ಕನ್ನಡವನ್ನು ಕಲಿಯುವಂತಾಗಲಿ!!

ಓಡಿಸಿದರೂ ಕಿಟಕಿಯಿಂದ
ಮತ್ತೆ ಬಂದು ಕಾಡಿಸುವೆ
ಬಾರದಂತೆ ಕಿಟಕಿ ಮುಚ್ಚಿ ದೀಪ ಹಚ್ಚಲೇ?
ಬರಲಿ ಬಿಡು ಎಂದು ತೆರೆದು ಬೆಳಕ ನೆಚ್ಚಲೆ?

ಉತ್ಕೃಷ್ಟ ತೌಲನಿಕ ಅಧ್ಯಯನ : ಹಂಪನಾ ಅವರ ಪ್ರಾಕೃತ ಕಥಾ ಸಾಹಿತ್ಯ

ಡಾ. ಜಿ.ಎನ್. ಉಪಾಧ್ಯ
ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ
ವಿದ್ಯಾನಗರಿ, ಮುಂಬಯಿ–400 098

ಉಜ್ವವಾದ ಪ್ರತಿಭೆ, ಪ್ರಖರವಾದ ಪಾಂಡಿತ್ಯ ಹಾಗೂ ಶ್ರದ್ಧಾನ್ವಿತವಾದ ಅಭ್ಯಾಸ ಇವುಗಳ ಸಮುಚಿತವಾದ ಸಮ್ಮಿಲನವನ್ನು ಒಬ್ಬನೇ ವ್ಯಕ್ತಿಯಲ್ಲಿ ಏಕತ್ರ ಕಾಣುವುದು ದುರ್ಲಭ. ಈ ಮೂರೂ ಅಪೂರ್ವ ಗುಣಗಳ ಸಂಗಮವನ್ನು ನಾವು ಪ್ರೊ. ಹಂಪನಾ ಅವರಲ್ಲಿ ಕಾಣಬಹುದು. ನಮ್ಮ ನಾಡಿನ ನಾಮಾಂಕಿತ ಸಂಶೋಧಕರಲ್ಲಿ ಪ್ರೊ. ಹಂಪ ನಾಗರಾಜಯ್ಯ ಅವರದು ಎದ್ದು ಕಾಣುವ ಹೆಸರು. ಶಾಸನ ತಜ್ಞರಾಗಿ, ಗ್ರಂಥ ಸಂಪಾದಕರಾಗಿ, ವಿಮರ್ಶಕರಾಗಿ, ಸಂಶೋಧಕ ರಾಗಿ, ಇತಿಹಾಸಕಾರರಾಗಿ, ಭಾಷಾವಿಜ್ಞಾನಿಯಾಗಿ ಶ್ರೇಷ್ಠ ವಾಗ್ಮಿಯಾಗಿ, ಪ್ರಾಧ್ಯಾಪಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಅತ್ಯುತ್ತಮ ಸಂಘಟಕರಾಗಿ ಅಖಿಂಡ ಕನ್ನಡಿಗರ ಪ್ರೀತ್ಯಾದರಗಳಿಗೆ ಅವರು ಪಾತ್ರರಾದವರು.

ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಮದಂಡಿಯಾಗಿ ಬಹುಮೂಲ್ಯ ಶೋಧಕೃತಿಗಳನ್ನು ರಚಿಸಿ ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದ್ವಾಂಸರ ಗಮನ ಸೆಳೆದ ಧೀಮಂತ ಚೇತನ ಡಾ. ಹಂಪನಾ. ಹೊಸ ಶೋಧ ಹೊಸ ವಿಚಾರಗಳಿಂದ ಕೂಡಿರುವ ಅವರ ಸಂಶೋಧನ ಕೃತಿಗಳು ಮಾನವ ಸಂಸ್ಕೃತಿಯ ವಿಕಾಸದ ವಿವಿಧ ಘಟ್ಟಗಳ ಸಂಕಥನಗಳಾಗಿವೆ. ಕನ್ನಡ ನಾಡಿನ ಸಾಂಸ್ಕೃತಿಕ ಲೋಕದ ಮುಚ್ಚಿದ ಬಾಗಿಲುಗಳನ್ನು ತೆರೆದು ಹೊಸ ಬೆಳಕು ಹಾಯಿಸಿದವರು ಪ್ರೊ. ಹಂಪನಾ. ವಿದ್ವತ್ತಿನ ಹರಿಕಾರ ನಾಡೋಜ ಪ್ರೊ. ಹಂಪನಾ ಅವರು ನಮ್ಮ ದೇಶದ ನಿಜದ ನೆಲೆಯ ಸಾಂಸ್ಕೃತಿಕ ರಾಯಭಾರಿಯೂ ಆಗಿದ್ದಾರೆ.

"ಪ್ರಾಕೃತ ಕಥಾ ಸಾಹಿತ್ಯ : ಆಕೃತಿ ಆಶಯ ಆಯಾಮ ಅನನ್ಯತೆ" ಇದು ಪ್ರೊ. ಹಂಪನಾ ಅವರ ಇತ್ತೀಚಿನ ಶೋಧ ಕೃತಿ. ಪ್ರೊ. ಹಂಪನಾ ಅವರು ಜೀವಮಾನ ಪೂರ್ತಿ ಶ್ರಮಪಟ್ಟು ಈ ಸಂಶೋಧನ ಗ್ರಂಥವನ್ನು ರಚಿಸಿದ್ದಾರೆ. ಕನ್ನಡ ವಾಙ್ಮಯಕ್ಕೆ ಕೆಸರ್ಗಲ್ಲು ನೆಟ್ಟ ಕೀರ್ತಿ ಜೈನರಿಗೆ ಸಲ್ಲುತ್ತದೆ. ಕನ್ನಡ ಸಾಹಿತ್ಯ ಸಂಸ್ಕೃತಿಯ ಬಣ್ಣ ಬನಿಯನ್ನು ಗಾಢಗೊಳಿಸಿ ಅದರ ದೇಸಿತನವನ್ನು ಉಳಿಸಿ ಬೆಳಿಸಿದವರು ಜೈನಧರ್ಮಿಯರೇ ಆಗಿದ್ದಾರೆ. ಕನ್ನಡ ವಾಙ್ಮಯಕ್ಕೂ ಜೈನಧರ್ಮಕ್ಕೂ ಅನ್ಯೋನ್ಯವಾದ ಅವಿನಾಭಾವ ಸಂಬಂಧವಿದೆ.

ಈ ನೆಲದ ಸಾಹಿತ್ಯೋದಯದ ಬಗೆಗೆ ಮಾತನಾಡುವುದೆಂದರೆ ಜೈನ ಧರ್ಮದ ವಿಚಾರಗಳ ಅವಲೋಕನವೇ ಆಗಿದೆ. ಜೈನ ಧರ್ಮಿಯರು ಪ್ರಾಕೃತದಿಂದ ಪ್ರಾರಂಭಿಸಿದ ಕಥಾ ಪರಂಪರೆ ಕನ್ನಡದೊಳಗೆ ಸಾಗಿ ಬಂದು ಈ ನಾಡಿನ ಜನಮಾನಸವನ್ನು ಗೆದ್ದ ಬಗೆ ಬಹು ರೋಚಕವಾಗಿದೆ. ಪ್ರಾಕೃತ ಕಥಾವಾಹಿನಿಯ ನವನವೋನ್ಮೇಶಾಲಿನಿತನದ ದರ್ಶನವಿಲ್ಲಿ ಸೊಗಸಾಗಿ ಅನಾವರಣಗೊಂಡಿದೆ. ಜೈನಧರ್ಮದ ಅಭಿವ್ಯಕ್ತಿ ಮೊದಲು ಮೌಖಿಕ ಪರಂಪರೆ ಯಲ್ಲೇ ಮೂಡಿಬಂದಿತು. ತೀರ್ಥಂಕರರು ತಮ್ಮ ಉಪದೇಶಗಳನ್ನು ಪ್ರಾಕೃತ ಭಾಷೆಯಲ್ಲಿ

ಅರುಹಿದ್ದರಿಂದ ಪ್ರಾಕೃತ ಭಾಷೆಯಲ್ಲಿ ಸಮೃದ್ಧವಾದ ಕಥಾ ಸಾಹಿತ್ಯ ಕಾಣಸಿಗುತ್ತದೆ. ಜೈನ ದಾರ್ಶನಿಕರು ತಾವು ಎಲ್ಲೆಲ್ಲಿ ಪ್ರಯಾಣ ಬೆಳೆಸಿದ್ದರೊ ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿತು ಕೃತಿ ರಚಿಸಿದ್ದು ಉಲ್ಲೇಖನೀಯ ಅಂಶ. ಜೈನ ಕವಿಗಳು ಕಾವ್ಯ ಧರ್ಮ ಹಾಗೂ ಧರ್ಮ ಇವೆರಡನ್ನು ಏಕಕಾಲಕ್ಕೆ ಬೆಸೆದು ಅಭಿವ್ಯಕ್ತಗೊಳಿಸಿದ್ದರಿಂದ ಕನ್ನಡ ಸಾಹಿತ್ಯದ ಗತಿಯೇ ಬದಲಾಯಿತು. ಇದರಿಂದಾಗಿ ಅನೇಕ ಹೊಸ ಬಗೆಯ ವೈವಿಧ್ಯಮಯವಾದ ಕತೆಗಳು ರಾಶಿ ರಾಶಿಯಾಗಿ ಕನ್ನಡದೊಳಗೆ ಬಂದು ನಿಂದು ಜನಮನವನ್ನು ತಟ್ಟುವಲ್ಲಿ ಯಶಸ್ವಿಯಾದುದು ಈಗ ಇತಿಹಾಸ.

ಪ್ರೊ.ಹಂಪನಾ ವಿರಚಿತ ಪ್ರಸ್ತುತ ಕೃತಿ ಪ್ರಾಕೃತ ಕಥಾ ಸಾಹಿತ್ಯ ವಿಸ್ತಾರವಾದ ತೌಲನಿಕ ಅಧ್ಯಯನದಿಂದ ಕೂಡಿದ್ದು, ಪ್ರಾಕೃತ ಸಾಹಿತ್ಯದಲ್ಲಿ ಅಂತರ್ಗತವಾಗಿರುವ ಕತೆಗಳು ಪ್ರಾಚೀನ ಭಾರತೀಯ ಸಾಹಿತ್ಯದ ಅವಿಭಾಜ್ಯವೂ, ಅನನ್ಯವೂ, ಅರ್ಥಪೂರ್ಣವೂ ಆದ ಅಂಗವೆಂಬ ಅಂಶವನ್ನು ಮನದಟ್ಟು ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ. ಭಾರತೀಯ ಭಾಷೆಯಾದ ಪ್ರಾಕೃತದಲ್ಲಿರುವ ಈ ಬಗೆಯ ಚೈತನ್ಯಕ್ಕೆ ಮುಸುಕು ಬೀಳಬಾರದೆಂಬ ಈ ಧಾರೆ ಇಂಗಿ ಹೋಗಬಾರದೆಂಬ ಆರೋಗ್ಯಕರ ಕಳಕಳಿಯನ್ನು ಆಗಾಗ ಕೆಲವರು ತೋರಿಸಿದ್ದುಂಟು. ವಿಸ್ಮೃತಿಯ ಗವಸಣಿಗೆಯನ್ನು ಸರಿಸಿ ಈ ತವನಿಧಿಯನ್ನು ಕನ್ನಡಲೋಕಕ್ಕೆ ಕೆಲಸ ಮುಸುಕು ಇನ್ನು ದೊಡ್ಡ ಪ್ರಮಾಣದಲ್ಲಿ ತೋರಿಸುವ ಅಧ್ಯಯನ ಮುಂದುವರಿಸಲು ಇದು ತೋರುಬೆರಳು ಎಂಬುದರಲ್ಲಿ ಅತ್ಯುಕ್ತಿಯಿಲ್ಲ. ಪ್ರಾಕೃತ ಕಥಾ ಸಾಹಿತ್ಯ ಒಂದು ದೊಡ್ಡ ತವನಿಧಿ. ಪ್ರಾಕೃತ ಭಾಷೆಯಲ್ಲಿರುವ ಕಥಾ ಸಾಹಿತ್ಯವನ್ನು ಪ್ರೊ. ಹಂಪನಾ ಅವರು ಇಲ್ಲಿ ಅವಲೋಕಿಸಿ ಅರಗಿಸಿಕೊಂಡು ಅನುಸಂಧಾನಗೈದು ಈ ಬೃಹತ್ ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ. ಪ್ರಾಚೀನ ಜೈನ ಲೇಖಕರು ಕಥಾ ಸಾಹಿತ್ಯ ಪ್ರಕಾರದ ಸಾಧ್ಯತೆಗಳನ್ನು ಪೂರ್ತಿ ದೋಚಿದವರು. ಕಥೆಗಳ ಬಗೆಗಳನ್ನು ಸರಿಯಾಗಿ ಗುರುತಿಸಿ ವರ್ಗೀಕರಿಸಿ ಕಥೆಗಳ ಜಾತಕವನ್ನು ಓಂ ಪ್ರಥಮವಾಗಿ ಬರೆದಿಟ್ಟವರು ಪ್ರಾಕೃತ ಲೇಖಕರು ಎಂಬ ಮಾತು ಸ್ವೀಕಾರಾರ್ಹವಾಗಿದೆ.

ಜೈನರು ಪ್ರಾದೇಶಿಕ ಭಾಷೆಗಳಲ್ಲಿಯೇ ಹೆಚ್ಚು ಹೆಚ್ಚು ಕಥಾ ಸಾಹಿತ್ಯವನ್ನು ತಂದರು. ಧರ್ಮೋಪದೇಶ ಮತ್ತು ಮತೀಯ ತತ್ವ ಪ್ರಸಾರಕ್ಕೋಸ್ಕರ ಕಥೆಗಳನ್ನು ಸಂವಹನವಾಗಿ ಬಳಸಿದರು. ಹೀಗೆ ಮಾಡುವಾಗ ಜನಪದ ಕಥೆಗಳನ್ನು ದುಡಿಸಿಕೊಂಡರು. ಪ್ರಾಕೃತ ಮತ್ತು ಸಂಸ್ಕೃತ ಮೂತಃ ಸಾಂಪ್ರದಾಯಿಕ ಕಥಾ ಪರಂಪರೆಯನ್ನು ಕನ್ನಡಕ್ಕೆ ತಗುಳ್ಚುವಾಗ ಅದರೊಂದಿಗೆ ಹೊಸ ಅಭಿವ್ಯಕ್ತಿಯ ಜವಾಬ್ದಾರಿಯನ್ನು ಹೊರಲು ಕನ್ನಡದ ಪ್ರತಿಭೆಗಳ ಸೃಷ್ಟಿಶಕ್ತಿ ಇಲ್ಲಿನ ಸ್ಥಳೀಯ ಸೊಗಡು ಇರುವ ದೇಸಿಯ ಸಂಗತಿಗಳನ್ನು ಬೆರೆಸಿತು. ಹೀಗೆ ಪರಸ್ಪರ ಬೆರೆತು ಮಿಶ್ರ ತಳಿಯ ಹೊಸ ಸ್ವರೂಪದ ತಾಜಾತನವನ್ನು ಹಳೆಯ ಕಥೆಗಳು ಪಡೆದವು, ಮರುಹುಟ್ಟವನ್ನು ಕಂಡವು. ಕನ್ನಡ ಕಥನ ವಲಯವನ್ನು ಶಕ್ತಿಶಾಲಿಯಾಗಿ ಹಿಗ್ಗಿಸಿದುವು, ಕನ್ನಡ ಸಾಹಿತ್ಯದ ಉಸಿರಾಟಕ್ಕೆ ಹೊಸ ಆಮ್ಲಜನಕ ಹಾಕಿ ಎದೆಯತಿದಿ ಒತ್ತಿದವು. ಭಾರತೀಯ ಜನಪದ ಸಂಸ್ಕೃತಿಯ ಹರಿಕಾರರಾದ ಪ್ರಾಕೃತ ಕಥೆಗಾರರು ಕನ್ನಡ ನಾಡಿನ ಸಂಸ್ಕೃತಿಯ ವಾರಸುದಾರರೂ ಆದರು ಎಂಬುದನ್ನು ಪ್ರೊ. ಹಂಪನಾ ಅವರು ಈ ಕೃತಿಯಲ್ಲಿ ಸ್ವಾರಸ್ಯಪೂರ್ಣವಾಗಿ ವಿಶ್ಲೇಷಿಸಿದ್ದಾರೆ.

ಪ್ರಾಕೃತ ಕಥಾ ಸಾಹಿತ್ಯ ಪರಂಪರೆಯ ಹಾಸು ಕನ್ನಡ ಸಾಹಿತ್ಯದ ನಾನಾ ಪ್ರಕಾರದ ಹಿರಿಮೆ ಘನತೆ ಸಿರಿ ಸಂಪತ್ತುಗಳಿಗೆ ಹೇಗೆ ಸಹಾಯಕವಾಯಿತೆಂಬುದನ್ನು ತಳಸ್ಪರ್ಶಿಯಾಗಿ ಇಲ್ಲಿ ತೋರಿಸಿಕೊಟ್ಟಿರುವುದು ಈ ಕೃತಿಯ ಧನಾತ್ಮಕ ಅಂಶ. ಈ ಮೂಲಕ ಭಾರತೀಯ ಕಥಾ ಪರಂಪರೆಯಲ್ಲಿ ಸಂಲಗ್ನವಾಗಿರುವ ಜೈನ ಕಥಾಪರಂಪರೆಯ ಮಹತ್ವವನ್ನು ಇಲ್ಲಿ ಬೆಳಕಿಗೆ ಹಿಡಿದಿರುವುದು ಔಚಿತ್ಯಪೂರ್ಣವಾಗಿದೆ. ಸಮಗ್ರ ಭಾರತೀಯ ಕಥಾಸಾಹಿತ್ಯ ಪರಂಪರೆ

ಯೊಂದರ ಪುನಾರಚನೆಗೆ ಜೈನ ಕಥಾಸಾಹಿತ್ಯದ ಕೊಡುಗೆ ಮೊತ್ತದಲ್ಲೂ ಮೌಲಿಕತೆಯಲ್ಲೂ ಗಣನೀಯವಾಗಿರುವಂತೆಯೇ ಕನ್ನಡ ಕಥಾ ಸಾಹಿತ್ಯಕ್ಕೂ ಅದರ ಸಾಹಚರ್ಯ ಘನವಾದದ್ದು, ಅರ್ಥಪೂರ್ಣವಾದದ್ದು. ಭಾರತೀಯ ಕಥಾ ಪರಂಪರೆಯ ವಾಹಿನಿಗೆ ಹೇಗೋ ಹಾಗೆ ಕನ್ನಡ ಕಥಾ ಪರಂಪರೆಗೂ ಹೊಸ ನೀರು ಬಣ್ಣ ಬೆಡಗು ದನಿ ಬಂದದ್ದು ಪ್ರಾಕೃತ ತೊರೆ ಝರಿಗಳ ಸೇರುವಿಕೆಯಿಂದ. ಪ್ರಾಕೃತಧಾರೆಗಳು ಈ ನೆಲದ ಜನಮನದೊಂದಿಗೆ ಹೇಗೆ ಕೂಡ ಸಂಗಮವಾದುದುವೆಂಬುದನ್ನು ತೋರಿಸುವ ಉದ್ದೇಶವೂ ಇಲ್ಲಿ ಯಶಸ್ವಿಯಾಗಿ ನಡೆದಿದೆ.

ಪ್ರಾಕೃತ ಕಥಾ ಪರಂಪರೆ ಸಾಕಷ್ಟು ವಿಸ್ತಾರವಾದುದು. ಆರಾಧನಾ ಕಥಾ ಸಂಪ್ರದಾಯ, ಅನುಪ್ರೇಕ್ಷೀಯ ಕಥಾ ಸಂಪ್ರದಾಯ, ತ್ರಿಷಷ್ಟಿ ಶಾಲಾಕಾ ಪುರುಷ ಚರಿತೆಗಳು, ಸಮ್ಯಕ್ತ್ವ ಕೌಮುದಿ ಕಥೆಗಳು, ಧರ್ಮ ಪರೀಕ್ಷೆ ಕಥಾ ಪರಂಪರೆ, ನೋಂಪಿ ಕಥೆಗಳು, ಕಾಮದೇವ ಕಥಾ ಪರಂಪರೆ, ಜೈನ ರಾಮಾಯಣ, ಭಾರತ ಕಥಾ ಪರಂಪರೆ, ಇವಲ್ಲದೆ ಜೈನ ಕಥೆಗಾರರೇ ಮಾಡಿರುವ ಭಿನ್ನ ಪ್ರಕಾರದ ಕಥೆಗಳಿವೆ. ಕನ್ನಡ ಜೈನ ಲೇಖಕರಿಗೆ ಮಾತೃಭಾಷೆಯಾದ ಕನ್ನಡದ ಜ್ಞಾನದೊಂದಿಗೆ ಪ್ರಾಕೃತ ಸಂಸ್ಕೃತ ಭಾಷೆಗಳಲ್ಲಿದ್ದ ಪ್ರವೇಶ, ಪರಿಶ್ರಮವು ಈ ಕಥನ ಕ್ರಿಯೆಯಲ್ಲಿ ಸಹಾಯಕ್ಕೆ ಒದಗಿ ಬಂದಿದೆ ಎಂಬುದನ್ನು ವಿವಿಧ ಸಾಕ್ಷ್ಯಾಧಾರಗಳ ಮೂಲಕ ಇಲ್ಲಿ ಮನೋಜ್ಞವಾಗಿ ವಿವರಿಸಲಾಗಿದೆ. ಸಂಸ್ಕೃತದ ಕಸಿಮಾಡಿ ಬೆಸುಗೆ ಹಾಕಿ ವಜ್ರಲೇಪ ಬಳಿದಿದ್ದರು. ಇದರಿಂದಾಗಿ ಕನ್ನಡ ಮಾತೃಭಾಷೆ ಮಾತೃ ಸಂಸ್ಕೃತಿಯ ವೈಶಿಷ್ಟ್ಯಗಳು ಬಹುವಾಗಿ ಪ್ರಾಕೃತ– ಸಂಸ್ಕೃತ ಭಾಷಾ ಸಂಸ್ಕೃತಿಗೆ ಹತ್ತಿರವಾಗಿದ್ದುವು. ಇಂಥದ್ದೊಂದು ಸಾಂಸ್ಕೃತಿಕ ನಿಕಟತೆಯಿಂದ ಕಥಾಸಾಹಿತ್ಯವನ್ನು ಅಲ್ಲಿಂದ ಇಲ್ಲಿಗೆ ತರುವುದು ಅವರಿಗೆ ಸಲೀಸು ಕೆಲಸವಾಯಿತೆಂಬ ವಿವೇಚನೆಯೂ ಇಲ್ಲಿ ನೆಲೆ ಪಡೆದಿರುವುದು ಉಲ್ಲೇಖನೀಯ ಅಂಶ. ತನ್ನದೇ ಆದ ಉಜ್ವಲ ಪರಂಪರೆಯನ್ನು ಹೊಂದಿರುವ ಪ್ರಾಕೃತ ಕಥಾ ಸಂಪ್ರದಾಯವಾಹಿನಿಯು ಸಶಕ್ತವಾಗಿ ಕನ್ನಡದ ಕಣಜದೊಳಗೆ ನೆಲೆಪಡೆದ ಇತಿಹಾಸ ವರ್ಣರಂಜಿತವಾಗಿದೆ. ಪ್ರಾಕೃತ ಕಥಾಸಾಹಿತ್ಯ ವಾಹಿನಿಯೊಳಗೆ ಸಮಕಾಲೀನ ಭಾರತೀಯ ವ್ಯಷ್ಟಿ ಸಮಷ್ಟಿ ಬದುಕು ನಡೆಸಿದ ವಾಗ್ವಾದಗಳ ಫಲಿತಗಳು ಹೇಗೆ ಸಮನ್ವಯಗೊಂಡಿದೆ ಎಂಬ ಮಹತ್ವದ ಹುಡುಕಾಟವೂ ಅದರ ವ್ಯಾಖ್ಯಾನ ವಿಶ್ಲೇಷಣೆಯೂ ಇಲ್ಲಿ ಯಶಸ್ವಿಯಾಗಿ ನಡೆದಿದೆ. ವೈದಿಕ ಪರಂಪರೆ ಹೇರಿದ ಪ್ರಶ್ನಾತೀತ ಅಧಿಕಾರಿಕ ಭಾಷಿಕ ಸಾಂಸ್ಕೃತಿಕ ಸವಾಲುಗಳಿಗೆ ಜೈನ ಪರಂಪರೆಯು ತೋರಿದ ಪ್ರತಿಭಟನೆ, ನಡೆಸಿದ ಹೋರಾಟ, ದಂಗೆಯ ದನಿ ಅಲ್ಲಿಲ್ಲಿ ಕಥೆಯ ಬಸಿರಲ್ಲಿವೆ. ಅವೈದಿಕ ಜೀವನ ದರ್ಶನದ ಕಥನ ಮಾದರಿಗಳಿಗೆ ಕವಿದಿರುವ ಸಂಪೂರ್ಣ ವಿಸ್ಮೃತಿಯನ್ನು ನಿವಾರಿಸಲು ಬೇಕಾದ ಸ್ಮೃತಿತರಂಗಗಳ ಶೋಧವಿಲ್ಲಿ ನಡೆದಿರುವುದು ಗಮನೀಯ ಅಂಶ. ಪ್ರೊ. ಹಂಪನಾ ಅವರ ಶಾಸ್ತ್ರ ಪಾಂಡಿತ್ಯ ಲಾಲಿತ್ಯಕ್ಕೂ ಈ ಕೃತಿ ಉತ್ತಮ ನಿದರ್ಶನ. ಕನ್ನಡ ಸಂಸ್ಕೃತಿ ಮತ್ತು ಜೈನ ಸಾಹಿತ್ಯದ ಪಾರಸ್ಪರಿಕ ನೆಲೆಗಳನ್ನು ಅರ್ಥಮಾಡಿಕೊಳ್ಳಲು ಈ ಕೃತಿ ಕೈದೀವಿಗೆಯಂತಿದೆ. ಈ ಅಧ್ಯಯನದ ಆಕೃತಿ ಆಶಯ ಆಯಾಮಗಳ ಕುರಿತು ಪ್ರೊ. ಹಂಪನಾ ಅವರು ಹೇಳುವುದು ಹೀಗೆ–

"ಕನ್ನಡ ಸಾಹಿತ್ಯದ ಐತಿಹಾಸಿಕ ಅವಶ್ಯಕತೆಯೊಂದನ್ನು ಈಡೇರಿಸಿದ ಹರಿಕಾರರು ಪ್ರಾಕೃತ ಲೇಖಕರು. ಬಹುಜನರ ಆಡುಮಾತಾಗಿದ್ದ ಕನ್ನಡದ ಸೊಗಸನ್ನು, ಬಿಗಿ ಬನಿ ಕಸುವನ್ನು" ಓದು ಬರೆಹ ಬಲ್ಲ ಬಲ್ಲಿದರು ಮತ್ತಷ್ಟು ಮೊನಚಾಗಿಸಿದರು. ಗಂಭೀರ ಗಹನ ಆಲೋಚನೆಗಳ ಅಭಿವ್ಯಕ್ತಿಗೆ ಶರೀರವಾಗುವ ಹದ ಸುಲಭವಾಗಿ ದಕ್ಕುವಂತಹುದಲ್ಲ. ಕನ್ನಡ ನುಡಿಯ ಹಿಂಡು ಹಿಳ್ಳೆಗಳಿಗೆ ಆಮ್ಲಜನಕ ಊಡಿ ಸತ್ವಶಾಲಿಯಾಗಿಸಿದ ಪ್ರಾಕೃತದ ಸಾಹಚರ್ಯ ಯಾವ ಬಗೆಯದು ಎಂಬುದು ಕಥಾ ಸಾಹಿತ್ಯದ ಚರ್ಚೆಯಿಂದ ಪರಿಚಯವಾಗುತ್ತದೆ. ಪ್ರಾಕೃತ ಕಥನ ಭಂಡಾರದ, ಆಳ ನಿರಾಳದ ವಿನ್ಯಾಸವನ್ನು ದೊಡ್ಡ ಹಾಸಿನಲ್ಲಿ ನಿಲ್ಲಿಸಿ ಅರ್ಥೈಸುವ ಕೆಲಸ ಬಾಕಿ ಉಳಿದಿತ್ತು. ಶೂನ್ಯ ಆವರಿಸಿತ್ತು.

ಆ ಕೊರತೆಯನ್ನು ನೀಗಿಸುವ ಎಡೆಗೆ ಇಟ್ಟಿರುವ ಹೆಜ್ಜೆ ಇದು. ಪ್ರಾಕೃತ ಭಂಡಾರದ ವಿವಿಧತೆ, ಸಿರಿಸಂಪದ, ಆಯಾಮ, ಆವರ್ತನ ತಂತ್ರ, ವಸ್ತುವಿನ್ಯಾಸದ ನವ ನವೋನ್ಮೇಷಶಾಲಿನಿತನವನ್ನು ಪರಿಚಯಿಸಿದ್ದೇನೆ. ಕನ್ನಡದ ಕಣಜಕ್ಕೆ ಇದೊಂದು ಪುಟ್ಟ ಕೊಡುಗೆ. ಪ್ರಾಕೃತ ಪರ್ವತಗಳಿಂದ ಜಿನುಗಿದ ಕಥಾವಾಹಿನಿಯಲ್ಲಿ ಈಜುತ್ತ ಪರಿಭಾವಿಸುತ್ತಿದ್ದೆ. ಬಹುಕಾಲ ನಿಬ್ಬೆರಗಾಗಿ ನನ್ನನ್ನು ಮುತ್ತಿ ಕಾಡುತ್ತಿದ್ದ ತಿಳಿವಿನ ಕಾಳುಗಳನ್ನು ಇಲ್ಲಿ ಬಿತ್ತಿದ್ದೇನೆ. ಮುಂದಿನ ಪೀಳಿಗೆಯ ಆಸಕ್ತರು ತಮ್ಮ ಬುದ್ಧಿ ಭಾವ ತೆತ್ತು ಇದನ್ನು ಸೊಂಪಾಗಿ ಬೆಳಸುತ್ತಾರೆಂಬ ನಂಬಿಕೆಯಿದೆ" ಪ್ರೊ. ಹಂಪನಾ ಅವರ ವ್ಯಾಪಕ ಓದು ಅಧ್ಯಯನ ಪಾಂಡಿತ್ಯಕ್ಕೆ ವಿನಮ್ರತೆಗೆ ಯಾರೂ ಬೆರಗಾಗಬೇಕು. ಅನುಬಂಧ ದಲ್ಲಿ ಕೊಡಲಾದ ವಡ್ಡಾರಾಧನೆ ಕೃತಿಯ ವಿವಿಧ ಕಥೆಗಳ ಚಿಂತನೆ ಉತ್ಕೃಷ್ಟ ಸೂಕ್ಷ್ಮ ವಿಮರ್ಶೆಯೂ ಆಗಿದೆ.

"ವಡ್ಡಾರಾಧನೆಯಲ್ಲಿನ ಚಾಣಕ್ಯರಿಸಿಯ ಕಥೆ, ಭದ್ರಬಾಹು ಭಟ್ಟಾರರ ಕಥೆ ಮುಂತಾದ ಕೆಲವು ಕಥೆಗಳು ಚರಿತ್ರಕಾರರಿಗೆ ಉತ್ತಮ ಸಾಮಗ್ರಿ ದೊರಕಿಸುವಂತೆ ಸಮಸ್ಯೆಯನ್ನೂ ಒಡ್ಡುತ್ತವೆ. ಈ ಕಥೆಗಳು ಸಂಶೋಧಕರಿಗಂತೂ ಆಡುಂಬೊಲ. ಕರ್ನಾಟಕದ ಜೈನ ಇತಿಹಾಸವನ್ನು ಪುನಾರಚಿಸುವಲ್ಲಿ ಭದ್ರಬಾಹುಭಟ್ಟಾರರ ಕಥೆಯ ಪಾತ್ರ ಮಹತ್ವದ್ದು. ಭಾರತದ ಇತಿಹಾಸವನ್ನು, ಜೈನ ಚರಿತ್ರೆಯನ್ನು ಪುನಾರಚಿಸುವಲ್ಲು, ಭದ್ರಬಾಹುಭಟ್ಟಾರರ ಕಥೆಯಷ್ಟೇ, ಚಾಣಕ್ಯರಿಸಿಯ ಕಥೆಯೂ ಪ್ರಮುಖ ದಾಖಲೆಗಳನ್ನು ನೀಡುತ್ತದೆ. ಸಂಶೋಧಕರು ಇದುವರೆಗೆ ಕನ್ನಡದಲ್ಲಿ ಈ ವಿಚಾರದಲ್ಲಿ ಕಾರ್ಯಪ್ರವೃತ್ತವಾಗಿಲ್ಲ. ಆ ದಿಕ್ಕಿನಲ್ಲಿ ಗುದ್ದಲಿ ಪೂಜೆಯೆಂದು ಈ ಪ್ರಬಂಧ ರಚನೆಗೆ ತೊಡಗಿದ್ದೇನೆ. ಮುಂದಾನೊಂದು ಕಾದಲ್ಲಿ ಸಂಶೋಧಕರು ನನ್ನ ಪ್ರಯತ್ನವನ್ನು ವಿಚಿಕಿತ್ಸೆಗೊಳಗು ಮಾಡಿ ಬ್ಧಾಧಾರಗಳ ಬೆಳಕಿನಲ್ಲಿ ಪುನರ್ ಪರಿಶೀಲಿಸಬಹುದು" ಹೀಗೆ ಹೊಸ ಬಗೆಯ ಅಧ್ಯಯನಕ್ಕೆ ಅವರು ತೋರು ದಾರಿಯನ್ನು ಸೂಚಿಸಿದ್ದಾರೆ.

ವಡ್ಡಾರಾಧನಕಾರನಾದ ಬ್ರಾಜಿಷ್ಣು ದೇಸಿ ಕಾವ್ಯಧೋರಣೆಯ ಸ್ವತಂತ್ರ ಮನೋಧರ್ಮದ ಕಥೆಗಾರ. ಪ್ರಾಚೀನ ಪರಂಪರೆಯ ಪ್ರಣಾಲಿಯಲ್ಲಿ ಹರಿದುಬಂದ ಹಳೆಯ ಕಥೆಗಳನ್ನು ಸಪ್ರಾಣಿಸಿ ಅಭಿಜಾತತೆಯನ್ನು ತಂದಿರುವುದು ಅವನ ಸೃಷ್ಟಿ ಶಕ್ತಿಗೆ ದಿವ್ಯಸಾಕ್ಷಿ. ಅನೇಕ ಜೈನ ಕಥೆಗಳ ಮೂಲವಾಗಲಿ, ಮೊದಲ ಲೇಖಕ ಯಾರೆಂಬುದಾಗಲಿ ತಿಳಿಯುವುದು ಕಷ್ಟ. ಅಷ್ಟರ ಮಟ್ಟಿಗೆ ಅವು ಒಂದು ಶಿಷ್ಟಪದ ವಾಚಕ ಸಂಪ್ರದಾಯದೊಳಗೆ ನುಸುಳಿ ಕಥಾ ಪರಂಪರೆಯ ವಾಹಿನಿಯಲ್ಲಿ ತೇಲುತ್ತವೆ. ಯಾವ ಕಥೆಯ ಚೆಲುವಿಗೆ ಯಾವ ಲೇಖಕ ಮಾರುಹೋಗುತ್ತಾನೋ ಆತ ಅದೇ ಕಥೆಯನ್ನು ಇನ್ನೊಮ್ಮೆ ತನ್ನ ಕಲ್ಪನೆಯ ಮೂಸೆಯಲ್ಲಿ ಅದ್ದಿ ತೆಗೆದು ಹೊಸ ಎರಕದಿಂದ ಮುಂದಿನ ತಲೆಮಾರಿಗೆ ದಾಟಿಸುತ್ತಾನೆ. ಇದೊಂದು ಬಗೆಯ ರಿಲೇ ರೇಸು, ಕೊಕ್ಕೊ ಆಟ. ಆರಾಧನಾ ಕಥಾ ಚಕ್ರದ ಪರಿಭ್ರಮಣ ಈ ಬಗೆಯದು ಎಂಬುದನ್ನು ವಿವಿಧ ಸಾಕ್ಷ್ಯಾಧಾರಗಳ ಮೂಲಕ ತೆರೆದಿಟ್ಟಿದ್ದಾರೆ.

ವಡ್ಡಾರಾಧನೆ ಪ್ರಧಾನವಾಗಿ ಧರ್ಮ ಪ್ರತಿಪಾದನೆಯ ಕೃತಿಯಾದುದು ದಿಟ. ಆದರೆ ಆನುಷಂಗಿಕವಾಗಿ ಸಾಮಾಜಿಕ ಸಂಗತಿಗಳೂ ಸೇರಿಕೊಂಡಿವೆ. ರಾಜ–ರಾಣಿ, ಮಂತ್ರಿ–ಸೇನಾನಿ, ವರ್ತಕರು ಸನ್ಯಾಸಿಗಳು ಇಲ್ಲಿ ಪ್ರಮುಖರು, ಗೌಣವಾಗಿ ಜನ ಸಾಮಾನ್ಯರ ಬಾಳು, ವ್ಯವಹಾರ, ಕಷ್ಟ ಸುಖ ಕೂಡ ಇಲ್ಲಿ ಬಂದಿದೆ. ಸಾಮಾನ್ಯ ಜನರ ಆಚರಣೆಗಳು, ಮಾತುಕಥೆ, ಮನೋಧರ್ಮ, ರೀತಿ ರಿವಾಜು ಅಲ್ಲಿ ಅಚ್ಚೊತ್ತಿದೆ. ಜನಪದರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಹಬ್ಬ ಹರಿದಿನಗಳು, ಜಾತ್ರೆಗಳು, ದೇವರ ಉತ್ಸವಗಳು– ಇವು ಇಲ್ಲಿನ ಕಥೆಗಳಲ್ಲಿ ಎದ್ದು ಕಾಣುವಂತೆ ಹೆಣೆದುಕೊಂಡಿವೆ. ಬಾದುಬ್ಬೆಯ ಪರ್ವ, ಪಗರಣದ ಆಟಗಳು, ನಾಗರಪೂಜೆ, ನಾನಾ ನಂಬಿಕೆಗಳು, ಬಸುರಿ ಬಯಕೆಗಳು, ಗಾದೆಗಳು– ಇಂತಹ ಜಾನಪದೀಯ ಸಾಮಗ್ರಿ ಇಲ್ಲಿ

ಎಡೆ ಪಡೆದುಕೊಂಡಿದೆ. ಜಾನಪದ ಸತ್ವವನ್ನು ಹೀರಿರುವ ಪರಿಯನ್ನು ಗುರುತಿಸಬೇಕಾದರೆ ಈ ಕಥೆಗಳಲ್ಲಿ ಇರುವ ಧಾರ್ಮಿಕ ಚೌಕಟ್ಟಿನಿಂದ ಪೃಥಕ್ಕರಿಸಿ ಪರಿಶೀಲಿಸಬೇಕು. ಜನಪದ ಆವರಣವನ್ನು ತನ್ನ ಹೊಟ್ಟೆಯಲ್ಲಿ ಕಟ್ಟಿಕೊಂಡೇ ಹುಟ್ಟಿರುವ ಇಲ್ಲಿನ ಕೆಲವು ಕಥೆಗಳು ಇಡೀ ಕನ್ನಡ ಸಾಹಿತ್ಯದಲ್ಲಿ ಸಿಗುವ ಮೊತ್ತ ಮೊದಲನೆಯ ಹಾಗೂ ಪ್ರಾಕೃತ ಮೂಲದ ಪ್ರಾಚೀನ ಕಥೆಗಳೆಂಬುದು ವಡ್ಡಾರಾಧನೆ ಗ್ರಂಥಕ್ಕೆ, ಅದರೊಳಗಿನ ಕಥಾ ಶ್ರೇಣಿಗೆ ಇರುವ ಐತಿಹಾಸಿಕ ಮಹತ್ವವನ್ನು ಒತ್ತಿ ಹೇಳುತ್ತದೆ. ಜಾನಪದ ದೃಷ್ಟಿಯಿಂದ ವಡ್ಡಾರಾಧನೆಯ ಕಥೆಗಳು ಬಹಳ ಮುಖ್ಯ. ಇಲ್ಲಿರುವುದು ಕನ್ನಡೇತರ ಮೂಲದಿಂದ ಕಡ ತಂದ ಕಥಾಸಾಮಗ್ರಿ. ಈ ನಾಡಿನ ಬಣ್ಣ, ವಾಸನೆ, ಸೊಗಡು ಬರುವಂತೆ ಕನ್ನಡ ಜನಪದ ಕಸುವನ್ನು ಭ್ರಾಜಿಷ್ಣು ಪ್ರಾಕೃತ ಮೂಲದ ಕಥೆಗಳಿಗೆ ಹೊಸ ಕಸಿ ಮಾಡಿದ್ದಾನೆ ಎಂಬಲ್ಲಿ ಬಹುಶಿಸ್ತೀಯ ತೌನಿಕ ಅಧ್ಯಯನ, ಹೊಸ ಒಳನೋಟ, ನಿಲುವು ದಾಖಲಾಗಿದೆ.

ಪ್ರೊ. ಹಂಪನಾ ವಿರಚಿತ ಪ್ರಾಕೃತ ಕಥಾ ಸಾಹಿತ್ಯ ಒಂದು ಉತ್ಕೃಷ್ಟ ಶೋಧ ಕೃತಿಯೂ ವಿಮರ್ಶಾ ಸಂಕಲನವೂ ತೌಲನಿಕ ಅಧ್ಯಯನ ಕೃತಿಯಾಗಿ ಮೂಡಿ ಬಂದಿರುವುದು ಉಲ್ಲೇಖನೀಯ ಅಂಶ. ಹೊಸ ಬಗೆಯ ಸಂವಾದಕ್ಕೆ ಈ ಕೃತಿ ಚಾಲನೆ ನೀಡುವುದರಲ್ಲಿ ಸಂದೇಹವಿಲ್ಲ. ಈ ಅಪೂರ್ವ ಕೃತಿಗಾಗಿ ಪ್ರೊ. ಹಂಪನಾ ಅವರಿಗೆ ಹಾರ್ದಿಕ ಅಭಿನಂದನೆಗಳು.

ಪ್ರಾಕೃತ ಕಥಾ ಸಾಹಿತ್ಯ
ಲೇ: ಪ್ರೊ. ಹಂಪನಾ
ಗೋಧೂಳಿ ಪ್ರಕಾಶನ, ಬೆಂಗಳೂರು
2014, ಪುಟ.552, ಬೆಲೆ ರೂ. 400/–

ಹೂ ಮಾಗಿ ಹಣ್ಣಾಗಲು
ಋತುಮಾನಗಳ ಲೆಕ್ಕ
ಮನ ಮಾಗಿ ಮಾನವನಾಗಲು
ಶತಮಾನಗಳ ಲೆಕ್ಕ

ಎಚ್. ಆನಂದರಾಮ ಶಾಸ್ತ್ರಿಗಳ 'ನಮ್ಮ ನ್ಯಾಯಾಂಗದ ಸಬಲೀಕರಣ: ಒಂದು ಚಿಂತನ'

(ಚಿಂತನ ಬಯಲು ಸಂಪುಟ 3 ಸಂಚಿಕೆ 2) ಕುರಿತಂತೆ ಒಂದಿಷ್ಟು/ಮತ್ತಷ್ಟು ಚಿಂತನೆಗಳು

ಬಾಲಸುಬ್ರಹ್ಮಣ್ಯ ಕಂಜರ್ಪಣೆ
'ಸಿರಿ' ಬ್ರಾಹ್ಮಿನ್ ವ್ಯಾಲಿ, ಮಡಿಕೇರಿ

1. ನಮ್ಮ ನ್ಯಾಯಾಂಗದ ಕೆಲವು ಜನಪ್ರಿಯ ತೀರ್ಪುಗಳ ಆಧಾರದಿಂದ ನಮ್ಮ ನ್ಯಾಯಾಂಗವು ಜಗತ್ತಿಗೇ ಮಾದರಿಯಾಗಿದೆ ಎಂಬುದು ತುಸು ಅವಸರದ ನಿರ್ಣಯವಾದೀತು. ಅಷ್ಟೇ ಕೆಟ್ಟ ತೀರ್ಪುಗಳೂ ಇವೆ. ನಮ್ಮ ಪತ್ರಿಕೆಗಳು ಮತ್ತಿತರ ಮಾಧ್ಯಮಗಳು ಕಾನೂನಿನ ಸರಿಯಾದ ಅಧ್ಯಯನದ ಕೊರತೆಯನ್ನು ಅನುಭವಿಸುತ್ತಿರುವುದರಿಂದ ಜನರಿಗೆ ಎಲ್ಲ ತೀರ್ಪುಗಳು –ಅವೆಷ್ಟೇ ಮಹತ್ವದ್ದಾಗಿದ್ದರೂ– ತಲುಪುವುದಿಲ್ಲ. ತೀರ್ಪುಗಳ ಸರಿ–ತಪ್ಪುಗಳು ಕಾನೂನಿಗೆ ಹೊರತಾದ ಇಲ್ಲವೇ ನ್ಯಾಯೋಚಿತವಲ್ಲದ ರೀತಿಯಲ್ಲಿ ವರದಿಯಾಗುವುದರಿಂದ ಅವುಗಳ ಪರಿಣಾಮ ವಿಪರೀತವಾಗಿರುತ್ತದೆ. ಉದಾಹರಣೆಗೆ ಕಾವೇರಿ ಜಲವಿವಾದ ನ್ಯಾಯಮಂಡಳಿಯ ತೀರ್ಪು ಅತ್ಯಂತ ಸಮರ್ಪಕವಾಗಿದ್ದರೂ ಕನ್ನಡದ ಪತ್ರಿಕೆಗಳು ಅವನ್ನು ಸಮರ್ಥಿಸುವ ಗೋಜಿಗೆ ಹೋಗುವುದಿಲ್ಲ; ಸಮರ್ಥಿಸಿದರೆ ಮೈಸೂರು –ಬೆಂಗಳೂರು ಪ್ರಾಂತದಲ್ಲಿ ಪತ್ರಿಕೆಗಳ ಪ್ರಸಾರಕ್ಕೆ ಸಂಚಕಾರ ಬಂದೀತೆಂಬ ಕಾರಣಕ್ಕೆ. ಇದರಿಂದಾಗಿ ಕರ್ನಾಟಕಕ್ಕೆ ತೀರಾ ಅನ್ಯಾಯವಾಗಿದೆಯೆಂದೇ ವಿದ್ಯಾವಂತರೂ ಸೇರಿದಂತೆ ಕಾನೂನು ಕ್ಷೇತ್ರದಿಂದ ಹೊರಗಿರುವ ನಮ್ಮೆಲ್ಲ ಶ್ರೀಸಾಮಾನ್ಯರೂ ಭಾವಿಸಿದ್ದಾರೆ. ಇನ್ನೊಂದು ಉದಾಹರಣೆಯೆಂದರೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣದ ಕುರಿತಂತೆ ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳ ತೀರ್ಪು. ನಾನೆಷ್ಟೇ ಕನ್ನಡಾಭಿಮಾನಿಯಾಗಿದ್ದರೂ ಕಾನೂನಿನ ಪರಿಮಿತಿಯಲ್ಲಿ ಈ ತೀರ್ಪುಗಳು ಸಮರ್ಪಕವಾಗಿವೆಯೆಂದೇ ನನ್ನ ಅನುಭವ ಹೇಳುತ್ತದೆ. ಈ ತೀರ್ಪನ್ನು ಕಂಗೆಡಿಸಬೇಕಾದರೆ ಒಂದೋ ಸಾಂವಿಧಾನಿಕ ತಿದ್ದುಪಡಿಯಾಗಬೇಕು; ಇಲ್ಲವೇ ಇತರ ಮಾಹಿತಿ, ಆಧಾರಗಳು ಮುಂತಾದ ಸರಕುಗಳೊಂದಿಗೆ ತೀರ್ಪಿನ ಪುನರ್ವಿಮರ್ಶೆ ಕೇಳಬೇಕು. ಸಮಸ್ಯೆಯೆಂದರೆ ಕನ್ನಡದ ಕುರಿತು ಕೂಗಾಡುವವರನ್ನು, ಸರಕಾರಿ ಅಧಿಕಾರಿಗಳು, ಭಾಷಾ ತಜ್ಞರು, ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳು ಸೇರಿದಂತೆ ಅಕಡೆಮಿಕ್ ಆಗಿ ಚರ್ಚಿಸುವವರನ್ನು ಮತ್ತು ರಾಜಕಾರಣಿಗಳನ್ನು ಒಳಗೊಂಡಂತೆ ಈ ಬಗ್ಗೆ ಚರ್ಚೆಯಾಗತ್ತದೆಯೇ ವಿನಾ ಕಾನೂನು ಪಂಡಿತರ ನಡುವೆ ಅಲ್ಲ. ಭಾಷಾವಾರು ರಾಜ್ಯಗಳ ರಚನೆಯಲ್ಲಿ ಈ ಮಾತೃಭಾಷೆಯಲ್ಲಿ ಶಿಕ್ಷಣ ಎಂಬುದರ ಬೀಜಾಣುವಿದೆ. ಅದನ್ನು ಸಂವಿಧಾನ ಸಮರ್ಥಿಸುತ್ತದೆಯಾದರೆ ಅದರ ಕೊಡೆಯಡಿಯಲ್ಲಿ ಮಾತೃಭಾಷಾ ಶಿಕ್ಷಣವೂ ಸಲ್ಲಬೇಕು. ಇದಲ್ಲದಿದ್ದರೆ ನಮ್ಮ ಪತ್ರಿಕೆಗಳ ಪ್ರಾದೇಶಿಕ ಆವೃತ್ತಿಗಳಂತೆ ಎಲ್ಲ ಶಾಲೆಗಳಲ್ಲಿಯೂ ಪ್ರತಿಯೊಬ್ಬ ವಿದ್ಯಾರ್ಥಿಗೂ ಅವನ/ಅವಳ ಮಾತೃಭಾಷೆಯಲ್ಲೇ ವಿಷಯಗಳನ್ನು ಪಾಠ ಮಾಡಬೇಕಾದ ಅನಿವಾರ್ಯತೆ ಬಂದೀತು.

2. ಅಂದರೆ ಕಾನೂನಿನ ಚರ್ಚೆಗೂ ಇತರ ಪಠ್ಯಗಳಂತೆ ಒಂದು ವಿಶಿಷ್ಟವಾದ ಒಳಹೊರಗಿನ ಅಧ್ಯಯನ ಬೇಕಾಗುತ್ತದೆ ಮತ್ತು ಚರ್ಚಿಸುವವರಿಗೂ ಒಂದು ಜ್ಞಾನದ ಅರ್ಹತೆ, ಅಧಿಕಾರ ಬೇಕಾಗುತ್ತದೆ. ಆಗ ಗೋಜಲಿಲ್ಲದೆ ಕಾನೂನನ್ನು ಮತ್ತು ಅದರ ವಿಶಾಲವಾದ ಅಂಕಣವಾದ ನ್ಯಾಯಾಂಗವನ್ನು ಚರ್ಚಿಸಬಹುದು.
3. ನಮ್ಮ ಕಾನೂನುಗಳು ಬ್ರಿಟಿಷ್ ಮಾದರಿಯವು ಎಂಬುದನ್ನು ಆನಂದರಾಮ ಶಾಸ್ತ್ರಿಗಳು ಸೂಚಿಸಿದ್ದಾರೆ. ಆದರೆ ಅವನ್ನು ಬಿಟಿಷರ ಕಾಲದ ಕಾನೂನುಗಳು ಎಂದು ಸಂಶಯದಿಂದ ಕಾಣುವ ಹಾಗಿಲ್ಲ. ನಮ್ಮಲ್ಲಿ ಪ್ರಚಲಿತವಿರುವ ನ್ಯಾಯದಾನಪದ್ಧತಿಯು ಪಾಶ್ಚಾತ್ಯರ ಕೊಡುಗೆ. (ಕಿಟ್ಟೆಲ್ ಮುಂತಾದವರು ನಮಗೆ ನಮ್ಮದೇ ಕನ್ನಡ ಸಾಹಿತ್ಯವನ್ನೂ ಸಂಪಾದಿಸಿ ಕೊಟ್ಟಿದ್ದಾರೆ!) ಅದಲ್ಲದೇ ಹೋದರೆ ನಮ್ಮ ಹಳೆಯ ಪಂಚಾಯತಿ ಪದ್ಧತಿ ಮರಳಿ ಬರಬೇಕು. ಅದು ಸಾಧ್ಯವೇ? ಮನುಸ್ಮೃತಿಯಂತಹ ಕಟ್ಟಳೆಗಳನ್ನು ನಾವಿಂದು ಪುನರುಚ್ಚರಿಸಿದರೆ ನಮಗೂ ಮಧ್ಯಪ್ರಾಚ್ಯ ಇಸ್ಲಾಮ್ ರಾಷ್ಟ್ರಗಳ ನ್ಯಾಯ ಪದ್ಧತಿಗೂ ವ್ಯತ್ಯಾಸವುಳಿಯಲಾರದು. ಆದ್ದರಿಂದ ಬಂದ, ಬರುವ ಮಳೆಯಲ್ಲಿ ಜಲಾಶ್ರಯ ಹುಡುಕಬೇಕೇ ಹೊರತು ಹನ್ನೆರಡು ತಿಂಗಳು ಮಳೆ ಬರಬೇಕೆಂಬ ಅವಾಸ್ತವ ಬೇಡಿಕೆಯನ್ನಿಡಲಾಗದು. ಕಾನೂನು ಅಸಹಾಯಕವಾಗಬೇಕೇ ವಿನಾ ನ್ಯಾಯಾಧೀಶರಲ್ಲ. ಶಿಕ್ಷಣದ ಸಮಸ್ಯೆಗೆ ಪರಿಹಾರ ಬೇಕು ಎನ್ನುವ ಅನೇಕರು ಯಾವುದು ಪರಿಹಾರ ಎಂದು ಮಾತ್ರ ಹೇಳುವುದಿಲ್ಲ. ಕಾನೂನಿನ ತಿದ್ದುಪಡಿ ಮೂಲಕ ಎಲ್ಲರನ್ನೂ ಮೆಚ್ಚಿಸಲು ಮತ್ತು ಎಲ್ಲರಿಗೂ ನ್ಯಾಯ ನೀಡಲು ಸಾಧ್ಯವಿಲ್ಲ ಎಂಬುದು ಸಾರ್ವಕಾಲಿಕ ಮತ್ತು ಸಾರ್ವತ್ರಿಕ ಸತ್ಯ. ಭಗವಂತನ ಅವತಾರಗಳೇ ಬೇಕಷ್ಟು ಅನ್ಯಾಯಗಳನ್ನು ಮಾಡಿವೆ; ಇನ್ನು ಮನುಷ್ಯ ನಿರ್ಮಿತ ಕಾನೂನು ಪರಿಪೂರ್ಣವಾಗಲು ಸಾಧ್ಯವೇ?
4. ಪ್ರಕರಣಗಳ ಇತ್ಯರ್ಥವನ್ನು ವಿಳಂಬಗೊಳಿಸಲು ನಮ್ಮ ವಕೀಲ ಸಮುದಾಯವು ಕಾನೂನಿನ ಅವಕಾಶಗಳನ್ನು ಪರಮ ಚಾತುರ್ಯದಿಂದ ಉಪಯೋಗಿಸುತ್ತಾರೆಂಬ ಆರೋಪವು ಇಂದು ನಿನ್ನೆಯದಲ್ಲ; ಮತ್ತು ಇದನ್ನು (ವಕೀಲರೇ ಆಗಿದ್ದ) ನ್ಯಾಯಾಧೀಶರೂ ಮತ್ತು ಪ್ರಜ್ಞಾವಂತರೆನಿಸಿಕೊಳ್ಳಲು ವಿದ್ಯಾವಂತರೂ ಹೇಳುತ್ತಲೇ ಬಂದಿದ್ದಾರೆ. ವಿಳಂಬದಿಂದ ಯಾರಿಗೂ ಪ್ರಯೋಜನವೂ ಇಲ್ಲ; ಲಾಭವೂ ಇಲ್ಲ. ವಿಳಂಬಕ್ಕೆ ಕಾರಣಗಳು ಅನೇಕವಿವೆ; ಮತ್ತು ಇದರಲ್ಲಿ ಕಾನೂನಿನ ನಿರ್ಮಾಪಕರ, ವಕೀಲರ, ನ್ಯಾಯಾಧೀಶರ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಾರ್ವಜನಿಕರ ಪಾಲು ಬಹಳಷ್ಟಿದೆ. ವಿಳಂಬವನ್ನು ಟೀಕಿಸುತ್ತಿದ್ದ ನನ್ನ ಮಿತ್ರರೊಬ್ಬರ ವಿರುದ್ಧ ಅವರು ವಾಸ ಮಾಡುತ್ತಿದ್ದ ಮನೆಯನ್ನು ಖಾಲಿ ಮಾಡಿಸಲು ಅದರ ಮಾಲಿಕ ದಾವೆ ಹೂಡಿದಾಗ ಅವರು ನನ್ನಲ್ಲಿ ಬಂದು ಮಾಡಿದ ಮೊದಲ ಬೇಡಿಕೆಯೆಂದರೆ 'ಎಷ್ಟು ಸಾಧ್ಯವೋ ಅಷ್ಟು ಟೈಮ್ ತಳ್ಳಿ!'
5. ಒಟ್ಟು ವ್ಯವಸ್ಥೆಯಲ್ಲಿನ ದೋಷವನ್ನು ಹುಡುಕುವುದರ ಬದಲು ಬಲಿಪಶುಗಳನ್ನು (ಫೇವರಿಟ್ ವಿಃಪ್ಪಿಂಗ್ ಬಾಯ್ಸ್‌ನ್ನು) ಗುರುತಿಸುವುದು ಸುಲಭ!
6. ನಮ್ಮ ಕಾನೂನಿನಲ್ಲಿ ವೈಧಾನಿಕ ಸೂಕ್ಷ್ಮಗಳು ಹೆಚ್ಚು. (ಬ್ರಾಹ್ಮಣರ ಧಾರ್ಮಿಕ ಕ್ರಿಯೆಗಳಂತೆ.) ಅರ್ಥವಾಗದಿದ್ದರೂ ಮಂತ್ರ ಖುಷಿಕೊಡುವ ಹಾಗೆ. ಸದಾ ಕೆರೆದುಕೊಳ್ಳಲಾದರೂ ಕಜ್ಜಿ ಬೇಕಂತೆ–ಹಾಗಿದೆ ಮನುಷ್ಯ ಸಹಜ ಕದನಕುತೂಹಲದ ಬದುಕು. (ಕ್ರಿಕೆಟ್ ಮೈದಾನವನ್ನು ರಣಾಂಗಣದಂತೆ, ಕ್ರಿಕೆಟ್ ಪಂದ್ಯಗಳನ್ನು ಯುದ್ಧದಂತೆ, ವರ್ಣಿಸುವುದನ್ನು ನಮ್ಮ ಜನರು ಇಷ್ಟಪಡುವ ಹಾಗೆ.) ನಿಜವಾಗಲೂ ದೇಶದಲ್ಲಿ ಬಿಜೆಪಿಯ ಪ್ರಾಬಲ್ಯಕ್ಕೆ ಮೊದಲ ಬಾರಿ ಕಾರಣವಾದ ಅಯೋದ್ಯೆಯ ಪ್ರಕರಣವು 1952ರಿಂದಲೂ ಇತ್ಯರ್ಥಕ್ಕೆ ಬಾಕಿಯಿದ್ದರೂ

ಅದನ್ನು 'ಒಮ್ಮೆ ಮುಗಿಸಿ ಮಾರಾಯರೆ' ಎಂದು ಯಾರೂ ಹೇಳುತ್ತಿಲ್ಲ ಯಾಕೆ? ಈಗಲೂ ಇತಿಹಾಸವನ್ನು ಮತ್ತೆಮತ್ತೆ ಕೆದಕಿ ಚರ್ಚಿಸುವ ಅಗತ್ಯವಾದರೂ ಏನು?

7. ನ್ಯಾಯಮೂರ್ತಿಗಳ ಸಂಖ್ಯೆಯಲ್ಲಿ ಕೊರತೆಯಿದೆ. ಆದರೆ ಇದಿಷ್ಟೇ ಸಮಸ್ಯೆಯ ಮುಖ್ಯ ಅಂಗವಲ್ಲ. ಆಯ್ಕೆಯಲ್ಲಿ ಪಾರದರ್ಶಕತೆಯ ಮತ್ತು ದಕ್ಷತೆಯ ಕೊರತೆಯಿಂದಾಗಿ ಬಹುಪಾಲು ಒಳ್ಳೆಯ ವಕೀಲರು ನ್ಯಾಯಧೀಶರಾಗಿ ಆಯ್ಕೆ ಬಯಸುತ್ತಿಲ್ಲ. ಆಯ್ಕೆಯಾದವರಿಗೂ ಅಲ್ಲಿನ ಅದಕ್ಷತೆ, 'ಅಧೀನತೆ' ಒಂದು ಶಾಶ್ವತ ಶಾಪ. ಬ್ರಿಟಿಷರ ಕಾಲದ ಗುಲಾಮಗಿರಿ ಇನ್ನೂ ಇದ್ದರೆ ಅದು ನ್ಯಾಯಾಂಗದಲ್ಲಿ ಮಾತ್ರ ಎಂದು ಕೆಲವರಾದರೂ (ಖಾಸಗಿಯಾಗಿ) ಹೇಳುತ್ತಿರುತ್ತಾರೆ.
8. ನ್ಯಾಯಾಧೀಶರ ಆಯ್ಕೆಯ ಪರಮ ಸ್ವಾತಂತ್ರ್ಯ ನ್ಯಾಯಾಂಗದ್ದೇ ಇರಬೇಕು. ಅಲ್ಲಿ ಜನಪ್ರತಿನಿಧಿಗಳ ಕೈವಾಡ ನಡೆಯಬಾರದು. ದೇಶ ಹಾಳಾಗಿದ್ದರೆ ಅದರಲ್ಲಿ ಸಿಂಹಪಾಲು ಜನಪ್ರತಿನಿಧಿಗಳದ್ದು ಎಂದು ಒಪ್ಪುವ ಜನರು ನ್ಯಾಯಾಂಗದ ದ್ರೌಪದಿಯ ಪಾತಿವ್ರತ್ಯವನ್ನು ಕಾಪಾಡುವುದಕ್ಕೆ ಐವರು ಗಂಡಂದಿರನ್ನು ನೇಮಿಸುವುದರ ಹಿಂದಿನ ತರ್ಕ ನಾನರಿಯೆ.
9. ನ್ಯಾಯಾಂಗದಲ್ಲಿ ದಕ್ಷತೆ ಬೇಕಾಗಿದೆ. ಆದರೆ ಸಮಾಜದ ಇತರ ಎಲ್ಲ ಅಂಗಗಳು ನೈತಿಕ ದೌರ್ಬಲ್ಯದಿಂದ ಬಳಲುತ್ತಿರುವಾಗ, ಜನಾದರಣೆಯನ್ನು ಬಯಸುವ ಸನ್ಯಾಸಿಗಳು ಲೌಕಿಕರಿಗಿಂತ ಹೆಚ್ಚು ಸುಖಾಭೋಗಗಳನ್ನು ನಚ್ಚಿಕೊಳ್ಳುತ್ತಿರುವಾಗ, ಅದೇ ಸಮಾಜದ ಅಂಗವಾಗಿರುವ ನ್ಯಾಯಾಂಗ ಮಾತ್ರ ಪೌಷ್ಟಿಕವಾಗಿರಬೇಕೆಂದು ಬಯಸುವುದು ಹಾಸ್ಯಾಸ್ಪದವಾದೀತು.
10. ಎಲ್ಲ ಕಾಲದಲ್ಲೂ ಎಲ್ಲ ದೇಶಗಳಲ್ಲೂ ಕೆಟ್ಟವರ ಸಂಖ್ಯೇ ಹೆಚ್ಚಿತ್ತು. ಕೆಲವರಾದರೂ ಒಳ್ಳೆಯ ಮಂದಿ, ಸಮಾಜಕ್ಕೆ ಹಿತವನ್ನು ಬಯಸುತ್ತಿದ್ದರು; ಹಿತವನ್ನು ಹೇಳುತ್ತಿದ್ದರು. ಆದ್ದರಿಂದ ಇಷ್ಟಾದರೂ ಇದೆ. ಮಹಾಭಾರತದ ಕೊನೆಯಲ್ಲಿ ವ್ಯಾಸರು 'ಧರ್ಮವನ್ನಾಚರಿಸಿರೋ ಎಂದು ಎರಡೂ ಕೈಗಳನ್ನೆತ್ತಿ ಕೂಗಿಕೊಳ್ಳುತ್ತಿದ್ದೇನೆ, ಆದರೆ ನನ್ನ ಮಾತು ಯಾರೂ ಕೇಳುತ್ತಿಲ್ಲ' ಎಂದು ಗೋಗರೆದರಂತೆ. ಅಕ್ಬರನ ಕಾಲದಲ್ಲಿ ಬಾವಿಗೆ ರಾತ್ರಿ ಹಾಲು ತಂದು ಸುರಿಯಿರಿ ಎಂಬ ಆದೇಶಕ್ಕೆ ಪ್ರತಿಯಾಗಿ ಪ್ರತಿಯೊಬ್ಬನೂ ತಾನೊಬ್ಬ ನೀರು ಸುರಿದರೆ ಆಳುವವರಿಗೆ ಗೊತ್ತಾಗುವುದಿಲ್ಲ ಎಂದು ನೀರನ್ನೇ ತಂದು ಸುರಿದರಂತೆ! ಪರಿಸ್ಥಿತಿ ಹೀಗಿರುವಾಗ ನಾವೀಗ ಜಗತ್ತನ್ನು ಉದ್ಧರಿಸುತ್ತೇವೆ ಎಂದು ಮಾರ್ಗೋಪಾಯಗಳನ್ನು ಹುಡುಕುವುದು ಎಷ್ಟು ಕಷ್ಟ!
11. ಉದ್ದೇಶ ಒಳ್ಳೆಯದೇ. ಆದರೆ ಪ್ರಾಕ್ಟಿಕಲ್ ಆಗಿರುವ ಚರ್ಚೆಯಾದರೆ ಒಳಿತು. ಇಲ್ಲವಾದರೆ ಅದು ನಮ್ಮ ಸಾಹಿತ್ಯ ಸಮ್ಮೇಳನಗಳಲ್ಲಿ ಮಂಡಿಸಿ ಅಂಗೀಕರಿಸುವ ನಿರ್ಣಯಗಳಿಗಿಂತ ಭಿನ್ನವಾಗದು.

ಕಲ್ಲು ಮೇಲೆ ನದಿ ಹರಿಯುತ
ಮೆಲ್ಲ ಮೂಡಿಸಿದೆ ಸಂಗೀತ
ಕಲ್ಲಲ್ಲದಿರೆ ಎಲ್ಲೂ
ಕೇಳದು ನೀರಿನ ಸೊಲ್ಲು

ನವನಿಧಿ

1. **ಚಿತ್ರಗುಪ್ತನ ಕತೆಗಳು**
ಕೆ. ಸತ್ಯನಾರಾಯಣ
ಅಭಿನವ, ಬೆಂಗಳೂರು, ರೂ.100/–

2. **ಉಲ್ಲಂಘನೆ : ಆಕೃತಿ ಆಶಯ**
ಸಂ. ಸೀತಾಲಕ್ಷ್ಮಿ ಕರ್ಕಿಕೋಡಿ
ಸಂವಹನ, ಮೈಸೂರು, ರೂ. 120/–

3. **ಸೂಕ್ತಿ ಸಂಚಯ** (ಸುಭಾಷಿತ ಸಂಗ್ರಹ)
ಎಸ್.ಆರ್. ರಾಮಸ್ವಾಮಿ
ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ರೂ. 80/–

4. **ಮೊಗಸಾಲೆಯ ಮುಖಾಂತರ**
ಬೆಳಗೋಡು ರಮೇಶ ಭಟ್
ಶ್ರೀನಿವಾಸ ಪುಸ್ತಕ ಪ್ರಕಾಶನ,
ಬೆಂಗಳೂರು, ರೂ. 80/–

5. **ಕವಿರಾಜಮಾರ್ಗದ ಧ್ವನಿಕಂದ**
ಯಲ್ಲಾಪುರ ಕೃಷ್ಣ ಶರ್ಮಾ
ಉದಯ ಪ್ರಕಾಶನ, ಬೆಂಗಳೂರು
ರೂ. 50/–

6. **ಬಲಿಪ ಗಾನಯಾನ**
ಡಾ. ನಾಗವೇಣಿ ಮಂಚಿ
ಡಾ.ಪಿ.ದಯಾನಂದ ಪೈ ಮತ್ತು ಶ್ರೀ
ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ
ಕೇಂದ್ರ, ಮಂಗಳೂರು ವಿವಿ.
ರೂ. 150/–

7. **ಬಿಲ್ಲವರು ಮತ್ತು ಬಾಸೆಲ್ ಮಿಶನ್**
ರಮಾನಾಥ್ ಕೋಟೆಕಾರ್
ಸಾಯಿಸುಂದರಿ ಸೇವಾ ಟ್ರಸ್ಟ್,
ಮಂಗಳೂರು, ರೂ. 80/–

8. **ತುಳುನಾಡಿನ ಬಿಲ್ಲವರು**
ರಮಾನಾಥ ಕೋಟೆಕಾರ್
ಸಾಯಿಸುಂದರಿ ಸೇವಾ ಟ್ರಸ್ಟ್,
ಮಂಗಳೂರು, ರೂ. 200/–

9. **ಬುದ್ಧತ್ವ–ಸಂತೋಷಕ್ಕೊಂದೆ ದಾರಿ**
ಉದಯಕುಮಾರ್ ಹಬ್ಬು
ಎಸ್. ಪ್ರದೀಪ ಕುಮಾರ ಕಲ್ಕೂರ
ಮಂಗಳೂರು, ರೂ. 75/–

10. **ಸರಳವಾಸ್ತು ಮತ್ತು ಸರಳ ಷಂಗ್‌ಶೂಯಿ ದರ್ಶನ**
ಉದಯ ಕುಮಾರ ಹಬ್ಬು
ಅನಂತಪ್ರತಿಭಾ ಪ್ರಕಾಶನ
ಕಿನ್ನಿಗೋಳಿ, ರೂ. 72/–

11. **ಅಪರೂಪದ ಪದಗಳು**
ಚೇತನ ಸೋಮೇಶ್ವರ
ಆಕೃತಿ ಆಶಯ ಪಬ್ಲಿಕೇಶನ್ಸ್,
ಮಂಗಳೂರು
ರೂ. 60/–

12. **ವಿರುತಿ**
ಚೇತನ ಸೋಮೇಶ್ವರ
ಆಕೃತಿ ಆಶಯ ಪಬ್ಲಿಕೇಶನ್ಸ್
ಮಂಗಳೂರು
ರೂ. 60/–

13. **ಸದಾತನ**
ವಿದ್ವಾನ್ ಉಮಾಕಾಂತ ಭಟ್ಟ
ರಾ.ಗೋ.ಪೈ. ಸಂ. ಕೇಂದ್ರ
ಉಡುಪಿ
ರೂ. 150/–

14. **ಸ್ಮೃತಿ ಚಿತ್ರಗಳು**
(ದಿ.ಬಿ.ಎಸ್.ನಾರಾಯಣ ಸ್ವಾಮಿ ಬರಹಗಳು)
ಸಂ. ಸತ್ಯೇಶ್ ಎನ್. ಬೆಳ್ಳೂರ್
ಬೆಳ್ಳೂರು ಸಾಹಿತ್ಯ ಭಂಡಾರ,
ಬೆಂಗಳೂರು

15. **ತೇಲ್ನೋಟ**
ಕು.ಗೋ. , ಸೃಷ್ಟಿ ಪ್ರಕಾಶನ
ಬೆಂಗಳೂರು,
ರೂ. 150/–

Form IV

Statement about ownership and other particulars about CHINTHANA BAYALU (Quarterly)

1.	Place of Publication	:	Bantwal, Dakshina Kannada
2.	Periodicity of its publication	:	Quarterly
3.	Printers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
4.	Publishers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
5.	Editors Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
6.	Names and address of individuals who own the newspaper and partners or sharesholders holding more than one percent of the total capital		Reshma G. Bhat No. 15-109, Modankapu, Bantwala Taluk D.K. - 574 219

I, Reshma G. Bhat, hereby declare that the particulars given above are true to the best of my knowledge and belief.

Date: 30 June 2015

Reshma G. Bhat
(Publisher)

RNI Reg No. : KARKAN /2012/49251

CHINTHANA BALAYU A Peer Reviewed Journal ISSN 2278-2192
Kannada Quarterly, Volume 3, Issue 4, April - June 2015
Edited, Published, Printed & Owned by
Reshma G. Bhat
Door No. 15-109, Modankapu Post,
Bantwal Taluk, Dakshina Kannada 574 219.
Printed at
Aakrithi Prints
Light House Hill Road, Mangalore - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು
ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC: KARB 0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444ಗೆ ಕರೆ ಮಾಡಿರಿ

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com